ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 3 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 48 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯದಲ್ಲಿ ಮುಂಗಾರು ಆರಂಭ: ಸಮರ್ಪಕವಾಗಿ

ಬಿತ್ತನೆ ಬೀಜ, ಗೊಬ್ಬರ ಪೂರೈಸಿ

ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾಕೀತು

ಬೆಂಗಳೂರು, ಜೂ.2(ಕೆಎಂಶಿ)– ರಾಜ್ಯದಲ್ಲಿ ಮುಂಗಾರು ಹಂಗಾಮಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆಯಾಗದಂತೆ ಹಿರಿಯ ಅಧಿಕಾರಿಗಳು ಖುದ್ದು ನಿಗಾ ವಹಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

> ಕೃಷಿ ಸಿಂಚಾಯಿ ಯೋಜನೆಯಡಿ 57 ತಾಲೂಕುಗಳ 2.75 ಲಕ್ಷ ಹೆಕ್ಟೇರ್‌ನಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದ್ದು, ಇದಕ್ಕಾಗಿ ರಾಜ್ಯದ ಪಾಲಿನ ಅನುದಾನ ಮಂಜೂರಾಗಿದೆ. ಈ ಯೋಜನೆಯಡಿ ಅನಗತ್ಯ ವೆಚ್ಚ ಕಡಿತಗೊಳಿಸಿ, ಜಲಾನಯನ ಅಭಿವೃದ್ಧಿ ಕೆಲಸಗಳಿಗೇ ಹೆಚ್ಚಿನ ಒತ್ತು ನೀಡಬೇಕು. ಹಿಂದಿನ ಯೋಜನೆಗಳ ಪರಿಣಾಮದ ಅಧ್ಯಯನ ವರದಿ ಸಲ್ಲಿಸಿ. ಕೃಷಿ ಯಾಂತ್ರೀಕರಣ ಉತ್ತೇಜನಕ್ಕಾಗಿ ಪ್ರತಿ ಎಕರೆಗೆ 250 ರೂ.ನಂತೆ ಗರಿಷ್ಠ 5 ಎಕರೆಗೆ ಡೀಸೆಲ್ ಸಬ್ಸಿಡಿ ನೀಡುವ ರೈತ ಶಕ್ತಿ ಯೋಜನೆಯನ್ನು ಈ ಮಾಸಾಂತ್ಯದೊಳಗೆ ಜಾರಿಗೊಳಿಸಿ.
> –ಬಸವರಾಜ ಬೊಮ್ಮಾಯಿ, ಸಿಎಂ.

ಗುರುವಾರ ಕೃಷಿ ಇಲಾಖೆಯ ಆಯವ್ಯಯ ಅನುಷ್ಠಾನದ ಪ್ರಗತಿ ಪರಿಶೀಲನೆ ಸಭೆ ನಡೆಸಿದರು. ರಾಜ್ಯದಲ್ಲಿ ಮೇ 31ರ ಮಾಹಿತಿಯಂತೆ 1.26 ಲಕ್ಷ ಮೆಟ್ರಿಕ್ ಟನ್ ಡಿಎಪಿ ಲಭ್ಯವಿದ್ದು, ಒಟ್ಟಾರೆ, 7.64 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದೆ. ರಾಜ್ಯದ ಬೇಡಿಕೆ ಪೂರೈಸಲು ಯಾವುದೇ ಕೊರತೆ ಇಲ್ಲ. ಆದರೆ, ವ್ಯವಸ್ಥಿತವಾಗಿ ಅಗತ್ಯ ಆಧರಿಸಿ, ರಸಗೊಬ್ಬರ ಸಕಾಲದಲ್ಲಿ ಪೂರೈಸಲು ಹಿರಿಯ ಅಧಿಕಾರಿಗಳೇ ಮೇಲ್ವಿಚಾರಣೆ ನಡೆಸಿ, ಯಾವುದೇ ಕೃತಕ ಅಭಾವ ಸೃಷ್ಟಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಿಎಂ ಸೂಚಿಸಿದರು. ಅಂತೆಯೇ ಬಿತ್ತನೆ ಬೀಜ ರಾಜ್ಯದಲ್ಲಿ 7.81 ಲಕ್ಷ ಕ್ವಿಂಟಾಲ್‌ನಷ್ಟು ಲಭ್ಯವಿದ್ದು, ▶ 8ನೇ ಪುಟಕ್ಕೆ

ಮುಖ್ಯಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಡಿ 47.83 ಲಕ್ಷ ರೈತರಿಗೆ 956.71 ಕೋಟಿ ಸಹಾಯಧನ

ಬೆಂಗಳೂರು, ಜೂ.2(ಕೆಎಂಶಿ)– ಮುಖ್ಯಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದು ರಾಜ್ಯದ 47.83 ಲಕ್ಷ ರೈತರಿಗೆ 956.71 ಕೋಟಿ ರೂ.ಗಳ ಆರ್ಥಿಕ ಸಹಾಯಧನ ವರ್ಗಾಯಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ರೈತರ ಖಾತೆಗಳಿಗೆ ಸಹಾಯಧನ ವರ್ಗಾಯಿಸಿದ್ದು, 2018–19ರಿಂದ 2021–22ರವರೆಗೆ ಭಾರತ ಸರ್ಕಾರದಿಂದ ಅನುಮೋದಿಸಲ್ಪಟ್ಟ ರೈತ ಕುಟುಂಬಗಳಿಗೆ ಒಟ್ಟು 3864.66 ಕೋಟಿ ರೂ. ರಾಜ್ಯದ ರೈತರಿಗೆ ಪಾವತಿಯಾದಂತಾಗಿದೆ.



ರೈತರ ಖಾತೆಗಳಿಗೆ ಸಿಎಂ ಬೊಮ್ಮಾಯಿ ಸಹಾಯಧನ ವರ್ಗಾಯಿಸುತ್ತಿರುವುದು.

2021–22ನೇ ಸಾಲಿನಲ್ಲಿ 50.35 ಲಕ್ಷ ರೈತರಿಗೆ 1975.12 ಕೋಟಿ ರೂ.ಗಳ ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ▶ 8ನೇ ಪುಟಕ್ಕೆ

ನಗರಸಭೆ ಜೆಡಿಎಸ್ ಸದಸ್ಯ ಪ್ರಶಾಂತ್ ಬರ್ಬರ ಹತ್ಯೆಯಿಂದ ಹಾಸನ ಪ್ರಕ್ಷುಬ್ಧ

ಹಾಸನ, ಜೂ.2–ಹಾಸನ ನಗರಸಭೆಯ 16ನೇ ವಾರ್ಡ್ ಜೆಡಿಎಸ್ ಸದಸ್ಯ ಪ್ರಶಾಂತ್ ನಾಗರಾಜ್ ಅವರನ್ನು ಬುಧವಾರ ಸಂಜೆ ಭೀಕರವಾಗಿ ಕೊಚ್ಚಿ ಕೊಲೆ ಮಾಡಲಾಗಿದ್ದು, ಈಗ ಹಾಸನ ನಗರ ಪ್ರಕ್ಷುಬ್ಧವಾಗಿದೆ. ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಹಾಸನ ಜಿಲ್ಲಾಸ್ಪತ್ರೆ ಮುಂದೆ ತೀವ್ರ ಪ್ರತಿಭಟನೆ ನಡೆಸಿದ್ದು, ಪೆನ್ಷನ್ ಮೊಹಲ್ಲಾ ಠಾಣೆ ಇನ್ಸ್‌ಪೆಕ್ಟರ್ ರೇಣುಕಾಪ್ರಸಾದ್, ನಗರ ಠಾಣೆ ಇನ್ಸ್‌ಪೆಕ್ಟರ್ ಆರೋಗ್ಯಪ್ಪ, ಡಿವೈಎಸ್‌ಪಿ ಉದಯ ಭಾಸ್ಕರ್ ಅವರನ್ನು ಅಮಾನತುಪಡಿಸಬೇಕೆಂದು ಆಗ್ರಹಿಸಿದ್ದಾರೆ. ಈ ನಡುವೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.



ಪ್ರಶಾಂತ್ ನಾಗರಾಜ್

ವಿವರ: 16ನೇ ವಾರ್ಡ್‌ನ ನಗರಸಭಾ ಸದಸ್ಯ ಪ್ರಶಾಂತ್ ನಾಗರಾಜ್ ಬುಧವಾರ ಸಂಜೆ 7.30ರ ಸುಮಾರಿನಲ್ಲಿ ಹೋಂಡಾ ಆಕ್ಟೀವಾದಲ್ಲಿ ತೆರಳುತ್ತಿದ್ದಾಗ ಆಟೋದಲ್ಲಿ ಬಂದ ದುಷ್ಕರ್ಮಿಗಳು ಅವರನ್ನು ಅಡ್ಡ ಹಾಕಿದ್ದಾರೆ. ಪರಿಸ್ಥಿತಿಯ ತೀವ್ರತೆಯನ್ನು ಅರಿತ ಪ್ರಶಾಂತ್, ಸ್ಕೂಟರ್ ಅನ್ನು ಅಲ್ಲೇ ಬೀಳಿಸಿ ಓಡಲಾರಂಭಿಸಿದಾಗ ಆಟೋದಲ್ಲಿ ಬಂದಿದ್ದವರು ಮಾರಕಾಸ್ತ್ರಗಳಿಂದ ಮನಸೋ–ಇಚ್ಛೆ ಕೊಚ್ಚಿ ಅವರನ್ನು ಭೀಕರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳದಲ್ಲಿ ನೂರಾರು ಮಂದಿ ಜಮಾಯಿಸಿದ್ದರು. ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ಮೃತದೇಹವನ್ನು ಜಿಲ್ಲಾಸ್ಪತ್ರೆ ▶ 8ನೇ ಪುಟಕ್ಕೆ

ಬಿಜೆಪಿ ಸೇರುವಂತೆ ಇನ್ಸ್‌ಪೆಕ್ಟರ್ ಒತ್ತಡ

ಸಂಸದ ಪ್ರಜ್ವಲ್ ರೇವಣ್ಣ ಆರೋಪ

ಹಾಸನ: ಬಿಜೆಪಿಗೆ ಸೇರದಿದ್ದರೆ ಹತ್ಯೆ ಬಹುಮಾನವೇ ಎಂದು ಸಂಸದ ಪ್ರಜ್ವಲ್ ರೇವಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪ್ರಶಾಂತ್ ಅವರನ್ನು ಬಿಜೆಪಿಗೆ ಸೇರುವಂತೆ ಪೆನ್ಷನ್ ಮೊಹಲ್ಲಾ ಠಾಣೆ ಇನ್ಸ್‌ಪೆಕ್ಟರ್ ರೇಣುಕಾಪ್ರಸಾದ್ ಒತ್ತಡ ಹೇರುತ್ತಿದ್ದರು ಎಂದು ಆರೋಪಿಸಿದರು. ಬಿಜೆಪಿಗೆ ಸೇರದಿದ್ದವರಿಗೆ ಹತ್ಯೆಯನ್ನೇ ಬಹುಮಾನವಾಗಿ ನೀಡಲಾಗುತ್ತದೆ ಎಂದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಎಲ್ಲಿದೆ? ಎಂದು ಪ್ರಶ್ನಿಸಿದ ಅವರು, ಒಂದೂವರೆ ವರ್ಷದ ಹಿಂದಿನ ಪ್ರಕರಣಕ್ಕೆ ಮರು ಹೇಳಿಕೆ ಪಡೆದು ಪ್ರಶಾಂತ್ ವಿರುದ್ಧ ಇನ್ಸ್‌ಪೆಕ್ಟರ್ ರೇಣುಕಾಪ್ರಸಾದ್ ಕೇಸ್ ದಾಖಲಿಸುತ್ತಾರೆ ಎಂದಾದರೆ ಆತನ ವಿರುದ್ಧ ಅವರಿಗೆ ಅದೆಂತಹ ದ್ವೇಷವಿರಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಸಂಸದನಾಗಿರುವ ನನ್ನ ಮುಂದೆಯೇ ರೇಣುಕಾಪ್ರಸಾದ್, ಎರಡೇ ಎರಡು ಕಲ್ಲು ಬಿದ್ದರೆ ಸಾಕು, 5 ತಲೆಗಳನ್ನು ಉರುಳಿಸುತ್ತೇನೆ. ಗುಂಡು ಹಾರಿಸುವ ಶಕ್ತಿ ನನಗಿದೆ ಎಂದು ಹೇಳಿದ್ದಾರೆ. ಒಬ್ಬ ಅಧಿಕಾರಿ ಹೀಗೆ ಸಂಸದರ ಮುಂದೆಯೇ ಹೇಳುತ್ತಾರೆ ಎಂದರೆ ಏನರ್ಥ? ಇವರಿಗೆ ಸರ್ಕಾರ ಗನ್ ಕೊಟ್ಟಿರುವುದು ಜನರನ್ನು ಕೊಲೆ ಮಾಡುವುದಕ್ಕಾಗಿಯಾ? ಎಂದು ಪ್ರಶ್ನಿಸಿದರು. ಪ್ರಶಾಂತ್ ಹತ್ಯೆಗೆ ನ್ಯಾಯ ದೊರೆಯಬೇಕು. ರಾಜ್ಯದ ಪೊಲೀಸರ ಮೇಲೆ ನಮಗೆ ವಿಶ್ವಾಸವಿದೆ. ಪೊಲೀಸ್ ಅಧಿಕಾರಿಗಳೂ ಸೇರಿದಂತೆ ಕೊಲೆಯಲ್ಲಿ ಭಾಗಿಯಾಗಿರುವವರನ್ನು ಕೂಡ ಬಂಧಿಸಬೇಕು ಎಂದು ಆಗ್ರಹಿಸಿದರು.


ಎಟಿಎಂಗಳಲ್ಲಿ ಅಮಾಯಕರಿಗೆ ವಂಚಿಸುತ್ತಿದ್ದ ಚಾಲಾಕಿ ಖದೀಮನ ಬಂಧನ

- ಸಹಾಯದ ನೆಪದಲ್ಲಿ ಎಟಿಎಂ ಕಾರ್ಡ್ ಪಡೆದು ತನ್ನ ಬಳಿ ಇದ್ದ ಡಮ್ಮಿ ಕಾರ್ಡ್‌ಗಳ ನೀಡಿ ಯಾಮಾರಿಸುತ್ತಿದ್ದ
- ಬೇರೆಡೆ ಹೋಗಿ ಆ ಕಾರ್ಡ್‌ಗಳಿಂದ ಹಣ ಡ್ರಾ ಮಾಡುತ್ತಿದ್ದ
- ಖದೀಮನಿಂದ ವಿವಿಧ ಬ್ಯಾಂಕ್‌ಗಳ 7 ಎಟಿಎಂ ಕಾರ್ಡ್ ವಶಕ್ಕೆ
- ಮಾಡುತ್ತಿದ್ದದ್ದು ಗಾರೆ ಕೆಲಸ; ನಂತರ ಇಳಿದಿದ್ದು ವಂಚನೆಗೆ



ಎಸ್ಪಿ ಆರ್.ಚೇತನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.2(ಎಸ್‌ಬಿಡಿ)– ಎಟಿಎಂನಿಂದ ಹಣ ಡ್ರಾ ಮಾಡಲು ಸಹಾಯ ಮಾಡುವ ನೆಪದಲ್ಲಿ ಅಮಾಯಕರನ್ನು ವಂಚಿಸುತ್ತಿದ್ದ ಚಾಲಾಕಿ ಖದೀಮನನ್ನು ಕೆ.ಆರ್.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೈಸೂರು ಜಿಲ್ಲೆಯ ವಿವಿಧೆಡೆ ಈ ರೀತಿ ವಂಚಿಸಿ ಹಣ ದೋಚುತ್ತಿದ್ದ ಸುಮಾರು 25–30 ವರ್ಷದ ಖದೀಮ ಈ ಜಿಲ್ಲೆಯವನೇ ಆಗಿದ್ದಾನೆ. ಈತ ವಿವಾಹಿತನಾಗಿದ್ದು, ಜೀವನೋಪಾಯಕ್ಕೆ ▶ 8ನೇ ಪುಟಕ್ಕೆ



> “ಎಟಿಎಂ ಬಳಿ ಅನುಮಾನಾಸ್ಪದ ವ್ಯಕ್ತಿಗಳಿದ್ದರೆ ಎಚ್ಚರವಾಗಿರಿ. ಹಣ ಡ್ರಾ ಮಾಡಲು ಅಪರಿಚಿತರ ಸಹಾಯ ಪಡೆಯಬೇಡಿ. ನಿಮ್ಮ ಎಟಿಎಂ ಕಾರ್ಡ್ ಹಾಗೂ ಪಿನ್ ಸಂಖ್ಯೆ ನೀಡಬೇಡಿ. ಹಣ ಡ್ರಾ ಮಾಡುವಾಗ ಕೇಂದ್ರದಲ್ಲಿ ನೀವೊಬ್ಬರೇ ಇರುವುದನ್ನು ಖಚಿತಪಡಿಸಿಕೊಳ್ಳಿ, 1ಕ್ಕಿಂತ ಹೆಚ್ಚು ಎಟಿಎಂಗಳಿದ್ದರೆ ಯಾರಿಗೂ ಕಾಣದಂತೆ ಪಿನ್ ಸಂಖ್ಯೆ ದಾಖಲಿಸಿ. ಎಟಿಎಂ ಕಾರ್ಡ್ ಪ್ರಕ್ರಿಯೆ ಪೂರ್ಣಗೊಂಡಿದ್ದನ್ನು ಖಚಿತಪಡಿಸಿಕೊಂಡ ನಂತರವೇ ಅಲ್ಲಿಂದ ಹೊರಬನ್ನಿ. ಎಲ್ಲಾ ಎಟಿಎಂ ಕೇಂದ್ರಗಳಿಗೂ ಭದ್ರತಾ ಸಿಬ್ಬಂದಿ ನಿಯೋಜಿಸುವಂತೆ ಲೀಡ್ ಬ್ಯಾಂಕ್ ಸಭೆಯಲ್ಲಿ ತಿಳಿಸಲಾಗಿದೆ. –ಆರ್.ಚೇತನ್, ಎಸ್ಪಿ

ಪಠ್ಯ ಪುಸ್ತಕ ಪರಿಷ್ಕರಣೆ ವಿವಾದ

ಶಿಕ್ಷಣದಲ್ಲಿ ಸತ್ಯ ಇರಬೇಕೇ ಹೊರತು ಯಾವುದೇ ಸಿದ್ಧಾಂತಗಳಲ್ಲ

ನಾಡಿನ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅಭಿಮತ

- ಪಠ್ಯ ಪರಿಷ್ಕರಣೆ ವಿರೋಧಿಸಿ ಗಲಾಟೆ ಮಾಡಿಸುವುದು ಹೊಸದೇನಲ್ಲ
- ‘ಪ್ರಶಸ್ತಿ ವಾಪ್ಸಿ ಚಳವಳಿ’ ವೇಳೆ ಪ್ರಶಸ್ತಿಯೊಂದಿಗೆ ನೀಡಿದ್ದ ನಗದು ಹಿಂಪಡೆಯಿರಿ ಎಂದಿದ್ದೆ

ಮೈಸೂರು,ಜೂ.2(ಪಿಎಂ)–ಶಿಕ್ಷಣದಲ್ಲಿ ಸತ್ಯ ಇರಬೇಕೇ ಹೊರತು ಯಾವುದೇ ಸಿದ್ಧಾಂತಗಳಲ್ಲ ಎಂದು ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ. ಎಸ್.ಎಲ್.ಭೈರಪ್ಪ ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಪಠ್ಯಪುಸ್ತಕ ಪರಿಷ್ಕರಣೆ ವಿವಾದ ಕುರಿತಂತೆ ಮೈಸೂರಿನ ಕುವೆಂಪುನಗರದಲ್ಲಿರುವ ಅವರ ನಿವಾಸದ ಆವರಣದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವಿದ್ಯಾಭ್ಯಾಸದಲ್ಲಿ ಇರಬೇಕಿರುವುದು ಸತ್ಯ. ಇದರ ಹೊರತಾಗಿ ಯಾವುದೇ ಒಬ್ಬರು, ಮತ್ತೊಬ್ಬರ ಸಿದ್ಧಾಂತಗಳಲ್ಲ ಎಂದರು.

ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಆಗಿದ್ದಾಗ ಅವರೂ ಪಠ್ಯಪುಸ್ತಕ ಪರಿಷ್ಕರಣೆಗೆ ಪ್ರಯತ್ನಿಸಿದರು. ಆದರೆ ಇದರ ವಿರುದ್ಧ ವ್ಯಾಪಕ ವಿರೋಧ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ವಾಜಪೇಯಿ ಅವರು ಪರಿಷ್ಕರಣೆ ಕೈಬಿಟ್ಟರು ಎಂದು ಹೇಳಿದರು.


ನರೇಂದ್ರ ಮೋದಿಯವರ ಸರ್ಕಾರ ಬಂದು 2 ವರ್ಷ ಕಳೆದಿದ್ದ ಸಂದರ್ಭದಲ್ಲಿ ಮೋದಿಯವರ ಖ್ಯಾತಿ ಸಹಿಸದೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರಲ್ಲಿ ಎಷ್ಟೋ ಮಂದಿ ‘ಪ್ರಶಸ್ತಿ ವಾಪ್ಸಿ ಚಳವಳಿ’ ಶುರು ಮಾಡಿದರು. ‘ದೇಶದೊಳಗೆ ಸುಳ್ಳೇ ನಡೆಯುತ್ತಿದೆ. ▶ 6ನೇ ಪುಟಕ್ಕೆ

ಪ್ರಶ್ನೆ ಮಾಡಿದ್ದಕ್ಕೆ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಸದಸ್ಯ ಸ್ಥಾನದಿಂದ ನನ್ನ ಕೈಬಿಟ್ಟರು!

ಹಳೆ ನೆನಪಿಗೆ ಜಾರಿದ ಡಾ.ಎಸ್.ಎಲ್.ಭೈರಪ್ಪ

ಮೈಸೂರು: ದೆಹಲಿಯಲ್ಲಿ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನ್ ರಿಸರ್ಚ್ ಅಂಡ್ ಟ್ರೈನಿಂಗ್ (ಎನ್‌ಸಿಇಆರ್‌ಟಿ) ಸಂಸ್ಥೆಯಲ್ಲಿ ತಾವು ಕೆಲಸ ಮಾಡುತ್ತಿದ್ದ ದಿನಗಳಿಗೆ ಜಾರಿದ ಡಾ.ಎಸ್.ಎಲ್.ಭೈರಪ್ಪ, ತಾವು ಪ್ರಶ್ನೆ ಮಾಡಿದ್ದ ಹಿನ್ನೆಲೆಯಲ್ಲಿ ಅಂದು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯಿಂದ ತಮ್ಮನ್ನು ಕೈಬಿಟ್ಟ ವಿಚಾರ ಹಂಚಿಕೊಂಡರು.

ನಾನು ಎನ್‌ಸಿಇಆರ್‌ಟಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಅಂದಿನ ಪ್ರಧಾನಿ ಇಂದಿರಾ ಗಾಂಧಿ ಪಠ್ಯಪುಸ್ತಕ ಸಂಬಂಧ ರಾಷ್ಟ್ರೀಯ ಏಕೀಕರಣ ನಿಯಮ ಜಾರಿಗೊಳಿಸಿ, ನೆಹರು ಕುಟುಂಬಕ್ಕೆ ಆಪ್ತರಿದ್ದ ಜಿ.ಪಾರ್ಥಸಾರಥಿ ಅವರ ಅಧ್ಯಕ್ಷತೆಯಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ರಚಿಸಿದರು. ಅದರಲ್ಲಿದ್ದ ಐವರು ಸದಸ್ಯರಲ್ಲಿ ನಾನು ಒಬ್ಬ. ಜಿ.ಪಾರ್ಥಸಾರಥಿ ಅವರು ಸಮಿತಿ ಸಭೆಯಲ್ಲಿ ಮಾತನಾಡುತ್ತ, ▶ 6ನೇ ಪುಟಕ್ಕೆ



ಮೈಸೂರಿನ ಕುವೆಂಪುನಗರದ ತಮ್ಮ ನಿವಾಸದ ಆವರಣದಲ್ಲಿ ಗುರುವಾರ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಮಾಧ್ಯಮದವರೊಂದಿಗೆ ಮಾತನಾಡಿದರು.

ಶಿಕ್ಷಣ ಸಚಿವರ ನಿವಾಸದ ಮೇಲಿನ ದಾಳಿಗೆ ಖಂಡನೆ

ಮೈಸೂರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ನಾಗೇಶ್ ಅವರ ಮನೆಗೆ ಬೆಂಕಿ ಹಾಕಲು ಪ್ರಯತ್ನಿಸಲಾಗಿದೆ. ಪೊಲೀಸರು ಇಲ್ಲವಾಗಿದ್ದರೆ, ಅವರ ಮನೆ ಸುಟ್ಟು ಹೋಗುತ್ತಿತ್ತು. ಇದನ್ನು ಸುಮ್ಮನೆ ಯಾರೂ ಹುಡುಗರು ಮಾಡಿಲ್ಲ. ಇವರ ಹಿಂದೆ ಯಾರೋ ಮಾಡಿಸುತ್ತಿದ್ದಾರೆ ಎಂದು ಡಾ. ಎಸ್.ಎಲ್.ಭೈರಪ್ಪ ಅನುಮಾನ ವ್ಯಕ್ತಪಡಿಸಿದರು.

ನನಗೆ ತೋಚಿದ್ದನ್ನು ಹೇಳಿದ್ದೇನೆ. ಇಲ್ಲಿ ನಾನು ಯಾವುದೇ ನಿರ್ಣಯ ಹೇಳಿಲ್ಲ. ನನ್ನನ್ನು ಬಾಧಿಸಿದ ವಿಚಾರ ಹೇಳಿದ್ದೇನೆ ▶ 6ನೇ ಪುಟಕ್ಕೆ

ನೋಡಿ ಸ್ವಾಮಿ ನಾವಿರೋದು ಹೀಗೆ...

ಕಾಂಗ್ರೆಸ್ಸಿಗರಿಗೆ ಸಿದ್ದರಾಮಯ್ಯ–ಡಿಕೆಶಿ ಸಮ್ಮಿಲನ ಸಂದೇಶ...!

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಮುಂದಿನ ಮುಖ್ಯಮಂತ್ರಿ ಯಾರು ಎಂಬುದರ ಬಗ್ಗೆ ಚರ್ಚೆಗಳು ನಡೆಯುತ್ತಲೇ ಇವೆ. ಈ ಮಧ್ಯೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡುವೆ ಶೀತಲ ಸಮರ ನಡೆಯುತ್ತಿರುವುದು ಗುಟ್ಟಾಗೇನೂ ಉಳಿದಿಲ್ಲ. ಹೀಗಾಗಿ ಬೆಂಗಳೂರಿನ ದೇವನಹಳ್ಳಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ನವ ಸಂಕಲ್ಪ ಶಿಬಿರದಲ್ಲಿ ಭಾಗವಹಿಸಿದ್ದ ನಾಯಕರು ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರಿಗೆ ‘ಮೊದಲು ನೀವು ವೈಷಮ್ಯ ಬಿಟ್ಟು ಒಂದಾಗಿ’ ಎಂದು ತಾಕೀತು ಮಾಡಿದ ▶ 8ನೇ ಪುಟಕ್ಕೆ



ನಾಳೆ ಮೈಸೂರಿಗೆ ಲೇಖಕ ಚೇತನ್ ಭಗತ್: ಮಾರ್ಗದರ್ಶಿ ಭಾಷಣ


ಚೇತನ್ ಭಗತ್

ಮೈಸೂರು,ಜೂ. 2–ಖ್ಯಾತ ಮಾರ್ಗದರ್ಶಿ ಭಾಷಣಕಾರ, ಲೇಖಕ, ಅಂಕಣಕಾರ ಮತ್ತು ಚಿತ್ರ ನಾಟಕ ಬರಹಗಾರ ಚೇತನ್ ಭಗತ್ ಅವರು ಜೂನ್ 4ರಂದು ಸಂಜೆ 4 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಯಶಸ್ಸಿನ ಸೂತ್ರ (Definition of success) ಕುರಿತು ಭಾಷಣ ಮಾಡಲಿದ್ದಾರೆ. ಉದ್ಯಮ ಆರಂಭಿಸುವವರು, ಉದ್ಯಮಗಳ ಮಾಲೀಕರು, ನಿರ್ದೇಶಕರು, ಸಿಎಂಡಿ, ಎಂಡಿ, ಸಿಇಓ, ವಿಪಿ, ವ್ಯವಸ್ಥಾಪಕರು, ಮಹತ್ವಾಕಾಂಕ್ಷಿ ನಾಯಕರು, ನೆಟ್‌ವರ್ಕರು, ಇನ್‌ಫ್ಲುಯೆನ್ಸರ್, ಡಿಜಿ, ಏಜೆಂಟ್ಸ್, ಸೇಲ್ಸ್ ಅಂಡ್ ಮಾರ್ಕೆಟಿಂಗ್ ಪರ್ಸನ್ಸ್, ಟ್ರೈನರ್ಸ್, ಟೀಚರ್ಸ್, ಪ್ರೊಫೆಷನಲ್ಸ್, ಕಾರ್ಪೊರೇಟ್ ಎಂಪ್ಲಾಯೀಸ್, ಡಾಕ್ಟರ್ಸ್, ಇಂಜಿನಿಯರ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಇದೊಂದು ಪ್ರೇರಕ ಕಾರ್ಯಕ್ರಮವಾಗಿದೆ. ಮಾಹಿತಿಗೆ ಮೊ. 90717–77739, 95133–36791 ಸಂಪರ್ಕಿಸಬಹುದು.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಗೆ ಕೋವಿಡ್ ಪಾಸಿಟಿವ್



ನವದೆಹಲಿ, ಜೂ.2– ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೊರೊನಾ ಪಾಸಿಟಿವ್ ಕಾಣಿಸಿಕೊಂಡಿದೆ. ಸೋನಿಯಾ ಗಾಂಧಿ ಅವರಿಗೆ ಸೌಮ್ಯ ಪ್ರಮಾಣದಲ್ಲಿ ಜ್ವರ ಮತ್ತು ಕೆಲವು ಕೋವಿಡ್ ರೋಗಲಕ್ಷಣಗಳು ಕಂಡುಬಂದವು. ನಂತರ ಪರೀಕ್ಷಿಸಿ ದಾಗ ಪಾಸಿಟಿವ್ ಎಂದು ಬಂದಿದ್ದು ನಿನ್ನೆಯಿಂದ ಪ್ರತ್ಯೇಕವಾಗಿ ಉಳಿದುಕೊಂಡಿದ್ದಾರೆ.

ಅವರಿಗೆ ಅಗತ್ಯವಾದ ವೈದ್ಯಕೀಯ ಆರೈಕೆಯನ್ನು ನೀಡಲಾಗುತ್ತಿದೆ. ಸದ್ಯದ ಮಟ್ಟಿಗೆ ಜೂನ್ 8 ರಂದು ಅವರು ಜಾರಿ ನಿರ್ದೇಶನಾಲಯ ಮುಂದೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗಬೇಕೆಂಬ ದಿನಾಂಕ ಯಥಾಸ್ಥಿತಿ ಇರುತ್ತದೆ ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ತಿಳಿಸಿದ್ದಾರೆ. ನ್ಯಾಷನಲ್ ಹೆರಾಲ್ಡ್‌ಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೂನ್ 8 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಜಾರಿ ನಿರ್ದೇಶನಾಲಯವು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಅವರ ಪುತ್ರ ರಾಹುಲ್ ಗಾಂಧಿಗೆ ಸಮನ್ಸ್ ಜಾರಿ ಮಾಡಿದೆ.

ಸೋನಿಯಾ ಗಾಂಧಿ ಶೀಘ್ರವೇ ಗುಣಮುಖರಾಗಲಿ, ಮೋದಿ ಶುಭಹಾರೈಕೆ: ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಕೊರೊನಾ ಪಾಸಿಟಿವ್ ಕಾಣಿಸಿಕೊಂಡಿದ್ದು, ಶೀಘ್ರವೇ ಗುಣಮುಖರಾಗುವಂತೆ ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, ಶ್ರೀಮತಿ ಸೋನಿಯಾ ಗಾಂಧಿ ಅವರು ಶೀಘ್ರವೇ ಕೋವಿಡ್‌ನಿಂದ ಗುಣಮುಖರಾಗಲಿ ಎಂದು ಹೇಳಿದ್ದಾರೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಇಂದು ಟ್ವೀಟ್ ಮೂಲಕ ತಿಳಿಸಿದ್ದರು.

ಪಿಎಫ್ ಹಣವೂ ಸೇರಿ ಅಧಿಕ ಲಾಭದ ಆಸೆ ತೋರಿಸಿ ವಂಚನೆ

ಮೈಸೂರು,ಜೂ.2–ಪಿಎಫ್ ಹಣ ಬರುತ್ತದೆ ಎಂದು ವೈದ್ಯರೊಬ್ಬರಿಗೆ ಕರೆ ಮಾಡಿ 3.08 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಡಾ.ಜಿ.ಬಿ.ಚಂದ್ರಶೇಖರ ರೆಡ್ಡಿ(53) ವಂಚನೆಗೊಳಗಾದವರು. ಮೇ 31ರಂದು ಮೊಬೈಲ್‌ನಲ್ಲಿ 8 ಅಂಕಿಗಳುಳ್ಳ ನಂಬರ್‌ನಿಂದ ಕರೆ ಮಾಡಿದ ಅಪರಿಚಿತ ವ್ಯಕ್ತಿ ನಿಮ್ಮ ತಂದೆಯ (ವೈದ್ಯರ ತಂದೆ) ಪಿಎಫ್ ಹಣ ಬರುತ್ತದೆ ಎಂದು ನಂಬಿಸಿ ಅವರಿಂದ ಪಾನ್ ಕಾರ್ಡ್, ಆಧಾರ್ ಕಾರ್ಡ್, ಫೋಟೋ ಮುಂತಾದ ದಾಖಲೆಗಳನ್ನು ಪಡೆದು ಹಣ ಬರಬೇಕಾದರೆ ಶುಲ್ಕ ರೂಪದಲ್ಲಿ ಇನ್ಶೂರೆನ್ಸ್ ಕಟ್ಟಬೇಕಾಗುತ್ತದೆ ಎಂದು ತಿಳಿಸಿ, ಹಂತಹಂತವಾಗಿ 3,08,551 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗೆ ವಂಚನೆ: ಮೈಸೂರಿನ ಯುವರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ದರ್ಶನ್ ಗೌಡ ಎಂಬುವರು ತಮ್ಮ ಸ್ನೇಹಿತೆಯ ಇನ್‌ಸ್ಟಾಗ್ರಾಂಗೆ ಬಂದ ಮೆಸೇಜ್ ಆಧರಿಸಿ ವಂಚಕ ಕಂಪನಿಯೊಂದಕ್ಕೆ ಹಣ ವರ್ಗಾವಣೆ ಮಾಡಿ ಮೋಸ ಹೋಗಿರುವ ಬಗ್ಗೆ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದರ್ಶನ್‌ಗೌಡ ಸಹಪಾಠಿಯಾಗಿರುವ ಸ್ನೇಹಿತೆಯ ಇನ್‌ಸ್ಟಾಗ್ರಾಂಗೆ Stock_pro_1 ಎಂಬ ಖಾತೆಯಿಂದ 'ಇಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತದೆ' ಎಂಬ ಮೆಸೇಜ್ ಬಂದಿತ್ತು. ಇದನ್ನು ನೋಡಿದ ದರ್ಶನ್ ಗೌಡ ಮೇ 27ರಂದು 45 ಸಾವಿರ ರೂ.ಗಳನ್ನು ವರ್ಗಾವಣೆ ಮಾಡಿದರು. ನಂತರ ಅವರಿಗೆ 9 ಲಕ್ಷ ರೂ. ಲಾಭ ಬಂದಿದೆ ಎಂದು ಮೆಸೇಜ್ ರವಾನೆಯಾಯಿತು. ಆದರೆ ಈ ಮೊತ್ತ ಪಡೆಯಲು 45 ಸಾವಿರ ರೂ. ತೆರಿಗೆ ಪಾವತಿಸಬೇಕು ಎಂದು ಮೆಸೇಜ್‌ನಲ್ಲಿ ತಿಳಿಸಲಾಗಿತ್ತು. ಇದನ್ನು ನಂಬಿದ ಅವರು ಮತ್ತೆ 45 ಸಾವಿರ ರೂ. ವರ್ಗಾವಣೆ ಮಾಡಿ ತಮ್ಮ ಲಾಭದ ಹಣವನ್ನು ಕೊಡುವಂತೆ ಮೆಸೇಜ್ ಮಾಡಿದರೆ ವಂಚಕ ಅವಾಚ್ಯ ಪದಗಳಿಂದ ಬೈದು ದರ್ಶನ್‌ಗೌಡಗೆ ಮೆಸೇಜ್ ಕಳುಹಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನಿಧನ

ಮುಸ್ತಾಖ್ ಅಹಮದ್



ಮೈಸೂರು,ಜೂ. 2–ಮೈಸೂರಿನ ಮಂಡಿಮೊಹಲ್ಲಾದ ಸುಲ್ತಾನ್ ಪಾರ್ಕ್ ರಸ್ತೆ ನಿವಾಸಿ ಮುಸ್ತಾಖ್ ಅಹಮದ್ (80) ನಿನ್ನೆ (ಬುಧವಾರ) ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಸಾಡೇ ರಸ್ತೆಯಲ್ಲಿರುವ ಮಸೀದಿ–ಇ–ದರ್ಗಾದಲ್ಲಿ ನಮಾಜ್–ಇ–ಜನಾಜ ನಡೆದ ಬಳಿಕ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತ್ಯನಾರಾಯಣ



ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಮತ್ತು ತೋಟಗಾರಿಕೆ ಇಲಾಖೆ ನಿವೃತ್ತ ಸಹಾಯಕ ಅಧಿಕಾರಿ ಸತ್ಯ ನಾರಾಯಣ (72) ಮೇ 30ರಂದು ನಿಧನರಾದರು. ಮೃತರು ಪತ್ನಿ ವಸಂತ, ಮಕ್ಕಳಾದ ರೇಖಾ, ರೇಷ್ಮಾ, ಹರೀಶ್, ಪುನೀತ್, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ರಾಮನಗರ ಜಿಲ್ಲೆಯ ತಡಿಕೆ ವಾಗಿಲು ಗ್ರಾಮದಲ್ಲಿ ನೆರವೇರಿತು.

ಜ್ಯೋತಿಷಿ ಬಿ.ಕೆ. ಲೀಲಾವತಿ



ಮೈಸೂರಿನ ಹೆಸರಾಂತ ಜ್ಯೋತಿಷಿ ಬಿ.ಕೆ.ಲೀಲಾವತಿ (51) ಅವರು ಹೃದಯಾಘಾತದಿಂದ ಬುಧವಾರ ರಾತ್ರಿ ನಿಧನರಾದರು. ಇವರ ಅಂತ್ಯಕ್ರಿಯೆ ಗುರುವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ನೆರವೇರಿತು. ಇವರು ನಾಲ್ವರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರು ಜ್ಯೋತಿಷ್ಯ ಪ್ರಾಧ್ಯಾಪಕ ದಿ. ಕೃಷ್ಣಮೂರ್ತಿ ಅವರಲ್ಲಿ ಜ್ಯೋತಿಷ್ಯ ಅಧ್ಯಯನ ಮಾಡಿದರು. ಅಲ್ಲದೆ ಜಾತಕ ವಿಮರ್ಶಕರೂ ಆದ ಅಮೃತೇಶ್ವರಸ್ವಾಮಿ ದೇವಸ್ಥಾನದ ಮೈ.ಕುಮಾರ್ ಅವರ ಬಳಿಯೂ 2 ದಶಕಗಳ ಕಾಲ ಅಧ್ಯಯನ ಮಾಡಿ, ಸ್ವತಂತ್ರವಾಗಿಯೂ ಜ್ಯೋತಿಷ್ಯ ಹೇಳುವುದರೊಂದಿಗೆ ಪ್ರಸಿದ್ಧಿ ಪಡೆದಿದ್ದರು. ಇವರು ಸೊಪ್ಪಿನಕೊಳದ ರಸ್ತೆ ನಿವಾಸಿ.

ಶ್ರೀಮತಿ ಸರೋಜ



ಎಡತೊರೆ (ಮುರುಗನಹಳ್ಳಿ) ನಿವಾಸಿ ನಿವೃತ್ತ ಸೇನಾ ಸಿಬ್ಬಂದಿ ಪಿ.ಚಾಮಿ ಅವರ ಪತ್ನಿ ಶ್ರೀಮತಿ ಸರೋಜ ಅವರು ನಿನ್ನೆ ಬುಧವಾರ ರಾತ್ರಿ ನಿಧನರಾದರು. ಇವರಿಗೆ 33 ವರ್ಷ ವಯಸ್ಸಾಗಿತ್ತು. ಇವರು ಪತಿ ನಿವೃತ್ತ ಸೇನಾ ಸಿಬ್ಬಂದಿ ಚಾಮಿ ಸೇರಿದಂತೆ ನಾಲ್ವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ರುಕ್ಮಿಣಿ



ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ನಿವೃತ್ತ ಅಧೀಕ್ಷಕರು ಮತ್ತು ಮೈಸೂರಿನ ನಿಮಿಷಾಂಬ ಬಡಾವಣೆ ನಿವಾಸಿಗಳೂ ಆದ ದಾಸಯ್ಯ ಅವರ ಪತ್ನಿ ಶ್ರೀಮತಿ ರುಕ್ಮಿಣಿ(61) ಅವರು ಗುರುವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಪತಿ ದಾಸಯ್ಯ, ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ (ಜೂ.3) ಮಧ್ಯಾಹ್ನ 12.30ಕ್ಕೆ ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಹೆಮ್ಮನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮನೆಗಳಿಗೆ ಹೊಂದಿಕೊಂಡಂತೆ ಹಾದುಹೋಗಿರುವ ವಿದ್ಯುತ್ ತಂತಿಯಲ್ಲಿ ಹಠಾತ್ ಚಿಮ್ಮಿದ ಬೆಂಕಿಯುಂಡೆ

5 ವರ್ಷದ ಬಾಲಕನಿಗೆ ಶೇ.40ರಷ್ಟು ಸುಟ್ಟಗಾಯ

ಮೈಸೂರಿನ ಜೆ.ಪಿ.ನಗರದಲ್ಲಿ ದುರ್ಘಟನೆ, ಪ್ಲಾಸ್ಟಿಕ್ ಸರ್ಜರಿಯೊಂದಿಗೆ ಬಹು ಶಸ್ತ್ರಚಿಕಿತ್ಸೆಗೆ ಗುರಿಯಾಗಬೇಕಿರುವ ಅಮಾಯಕ ಬಾಲಕ

ಮೈಸೂರು, ಜೂ. 2 (ಆರ್‌ಕೆ)– ಮನೆಗಳಿಗೆ ಹೊಂದಿಕೊಂಡಂತೆ ಹಾದು ಹೋಗಿರುವ ಬೀದಿದೀಪದ ವಿದ್ಯುತ್ ತಂತಿಯಲ್ಲಿ ಹಠಾತ್ತನೆ ಬೆಂಕಿ ಕಾಣಿಸಿಕೊಂಡು ಅಲ್ಲಿಂದ ಹೊಮ್ಮಿದ ಬೆಂಕಿಯುಂಡೆಗಳು ತಾಗಿ 5 ವರ್ಷದ ಬಾಲಕನಿಗೆ ಶೇ.40ರಷ್ಟು ಸುಟ್ಟಗಾಯವಾಗಿರುವ ಘಟನೆ ಮೈಸೂರಿನ ಜೆ.ಪಿ. ನಗರದಲ್ಲಿ ಮೇ 8 ರಂದು ಸಂಭವಿಸಿದೆ.

ಮೈಸೂರಿನ ಜೆ.ಪಿ.ನಗರ 7ನೇ ಮೇನ್, 9ನೇ ಕ್ರಾಸ್ ನಿವಾಸಿಗಳಾದ ಬಬ್ಲು ಮತ್ತು ಮಂಜು ದಂಪತಿ ಪುತ್ರ 5 ವರ್ಷದ ಕಾರ್ತಿಕೇಯನ್ ಸುಟ್ಟ ಗಾಯಗಳಿಂದ ಅತೀವ ನೋವು ಅನುಭವಿಸುತ್ತಿರುವ ಪುಟ್ಟ ಅಮಾಯಕ ಬಾಲಕ. ಎದುರು ಮನೆಯ ಎರಡನೇ ಮಹಡಿ ಮೆಟ್ಟಿಲ ಮೇಲೆ ಮೇ 8ರಂದು ಸಂಜೆ 4 ಗಂಟೆ ವೇಳೆಗೆ ಈ ಬಾಲಕ ಆಟವಾಡುತ್ತಿದ್ದ. ಈ ವೇಳೆ ಮನೆಗೆ ಹೊಂದಿಕೊಂಡಂತೆ ಹಾದು ಹೋಗಿರುವ ವಿದ್ಯುತ್ ತಂತಿಯಲ್ಲಿ ಹಠಾತ್ತನೇ ಬೆಂಕಿ ಕಾಣಿಸಿಕೊಂಡು, ಅದರಿಂದ ಹೊಮ್ಮಿದ ಬೆಂಕಿಯುಂಡೆಗಳು ತಾಗಿ ತೀವ್ರ ಗಾಯಗಳಾಗಿವೆ.

ಮುಖ, ತಲೆ, ಎರಡು ಕೈಗಳು ಸೇರಿ ದೇಹದ ಶೇ.40ರಷ್ಟು ಸುಟ್ಟ ಗಾಯಗಳಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಕಾರ್ತಿಕೇಯನ್‌ನನ್ನು ತಕ್ಷಣ ಸಮೀಪದ ಕಾಮಾಕ್ಷಿ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ಬಹುತೇಕ ಚರ್ಮ ಸಂಪೂರ್ಣ ಸುಟ್ಟಿದ್ದರಿಂದ ಕಿಡ್ನಿ, ಹೃದಯಕ್ಕೆ ಹೆಚ್ಚಿನ ಹಾನಿಯಾಗುವ ಸಾಧ್ಯತೆ ಇದ್ದ ಕಾರಣ, ಬಾಲಕನನ್ನು ಜೆಎಸ್‌ಎಸ್ ಆಸ್ಪತ್ರೆಗೆ ಕರೆದೊಯ್ಯುವಂತೆ ವೈದ್ಯರು ಸಲಹೆ ನೀಡಿದ್ದರಿಂದ ಪೋಷಕರು ಮಗುವನ್ನು ಅಲ್ಲಿಗೆ ದಾಖಲಿಸಿದರು.

ಆಸ್ಪತ್ರೆಯ ಸುಟ್ಟಗಾಯ ಚಿಕಿತ್ಸಾ ವಿಭಾಗದ ಐಸಿಯುನಲ್ಲಿ ಚಿಕಿತ್ಸೆ ನೀಡಿದ ವೈದ್ಯರು ಎಲ್ಲಾ ಪರೀಕ್ಷೆಗಳನ್ನು ಮಾಡಿದಾಗ ಅದೃಷ್ಟವಶಾತ್ ದೇಹದ ಒಳಾಂಗಗಳಿಗೆ ಯಾವುದೇ ತೊಂದರೆಯಾಗಿಲ್ಲ ಎಂಬುದು ದೃಢಪಟ್ಟಿತು. ಆದರೆ ಶೇ.40ರಷ್ಟು ಸುಟ್ಟಗಾಯಗಳಾಗಿರುವುದರಿಂದ ಪ್ಲಾಸ್ಟಿಕ್ ಸರ್ಜರಿ ಮಾಡುವ ಅಗತ್ಯವಿದೆ ಎಂದು ವೈದ್ಯರು ಹೇಳಿದ್ದಾರೆ. ಗಾಯಗಳು ವಾಸಿಯಾದ ನಂತರ ಈ ಶಸ್ತ್ರಚಿಕಿತ್ಸೆ ಮಾಡಿಸುವುದಾಗಿ ಪೋಷಕರು ಹೇಳಿದ್ದಾರೆ. ಹಾಗಾಗಿ ಬಾಲಕ ಸ್ವಲ್ಪ ಚೇತರಿಸಿಕೊಂಡ ನಂತರ ಮೇ 23ರಂದು ಆಸ್ಪತ್ರೆಯಿಂದ ಮನೆಗೆ ಕರೆತಂದಿದ್ದಾರೆ.

ಸುಟ್ಟ ಗಾಯಗಳಿಂದ ಮುಖ ಸಂಪೂರ್ಣ ಊದಿಕೊಂಡು ಗುರುತೇ ಸಿಗದಂತಾಗಿತ್ತು. 14 ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಳಿಕ ಈಗ ಸಾಮಾನ್ಯ ಸ್ಥಿತಿಗೆ ತಲುಪಿದ್ದಾನೆ. ಆದರೂ ಸುಟ್ಟಿರುವ ಭಾಗದಲ್ಲಿ ಕಲೆ ಮಾತ್ರ ಮಾಸಿಲ್ಲ. ಘಟನೆಯಿಂದಾಗಿ ಸುಟ್ಟ ಗಾಯದ ನೋವಿನಿಂದ ಈ ಪುಟ್ಟ ಬಾಲಕ ನರಳುತ್ತಿರುವುದನ್ನು ಕಂಡು ಪೋಷಕರು ಹಾಗೂ ಸಂಬಂಧಿಕರು ನಲುಗಿದ್ದಾರೆ.

ಮನೆಯಿಂದ ಕೈ ತಾಕುವಷ್ಟು ಸಮೀಪದಲ್ಲೇ ವಿದ್ಯುತ್ ತಂತಿ ಹಾದು





ಹೋಗಿದ್ದುದು ಘಟನೆಗೆ ಕಾರಣ ಎಂದು ಹೇಳಲಾಗಿದ್ದು, ಸುರಕ್ಷತೆಗೆ ಪ್ಲಾಸ್ಟಿಕ್ ಪಿವಿಸಿ ಪೈಪ್‌ಗಳನ್ನು ತಂತಿಗಳಿಗೆ ಅಳವಡಿಸದಿರುವುದರಿಂದ ಸ್ಟೇರ್ ಕೇಸ್ ಮೇಲೆ ಆಟವಾಡುತ್ತಿದ್ದ ಮಗುವಿಗೆ ಹಠಾತ್ ಕಂಡುಬಂದ ಬೆಂಕಿಯುಂಡೆ ತಾಗಿ ಈ ದುರಂತ ಸಂಭವಿಸಿದೆ ಎಂದು ಪೋಷಕರು ದೂರಿದ್ದಾರೆ.

ಸದ್ಯ ಬಾಲಕ ಸಾಮಾನ್ಯ ಸ್ಥಿತಿಗೆ ಮರಳುತ್ತಿದ್ದು, ಪೋಷಕರೊಂದಿಗೂ ಲವಲವಿಕೆಯಿಂದಿದ್ದಾನೆ. ಆದರೂ ಗಾಯದ ನೋವು ಸಂಪೂರ್ಣವಾಗಿ ಶಮನವಾಗಿಲ್ಲ. ನೋವು ಮರೆಸಲು ತಂದೆ ತಾಯಿ ಕಾರ್ತಿಕೇಯನ್ ಮನಸ್ಸನ್ನು ಬೇರೆಡೆ ಸೆಳೆಯುವ ಪ್ರಯತ್ನ ನಿರಂತರವಾಗಿ ಮಾಡುತ್ತಿದ್ದಾರೆ.

11,000 ವೋಲ್ಟ್ ಸಾಮರ್ಥ್ಯದ ವಿದ್ಯುತ್ ಪ್ರವಹಿಸುವ ಹೆಚ್ಚಿನ ಸಾಮರ್ಥ್ಯದ ತಂತಿಗಳು ಮನೆ ಪಕ್ಕದಲ್ಲೇ ಹಾದು ಹೋಗಿದ್ದರೂ, ಸುರಕ್ಷತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಸೆಸ್ಕ್) ಅಧಿಕಾರಿಗಳು ಈ ಘಟನೆ ನಡೆದ ಬಳಿಕ ವಿದ್ಯುತ್ ತಂತಿಗಳನ್ನು ಕಂಬದ ಮತ್ತೊಂದು ಬದಿಗೆ ಸ್ಥಳಾಂತರಿಸಿದ್ದಾರಲ್ಲದೆ, ಈಗ ತಂತಿಗೆ ವಿದ್ಯುತ್ ಸ್ಪರ್ಶವಾಗದಂತೆ ಪ್ಲಾಸ್ಟಿಕ್ ಪೈಪ್ ಅಳವಡಿಸಿದ್ದಾರೆ.

ಮೈಸೂರಿನ ವಿ.ವಿ. ಮೊಹಲ್ಲಾದ ಮನೆ ಟೆರೇಸ್‌ನಲ್ಲಿ ಆಟವಾಡುತ್ತಿದ್ದ 13 ವರ್ಷದ ಮೇಘನಾ ಮನೆ ಮೇಲೆ ಹಾದು ಹೋಗುತ್ತಿದ್ದ ಹೆಲಿಕಾಪ್ಟರ್ ನೋಡಲು ಮುಂದೆ ಬಾಗಿದಾಗ ಮನೆ ಮುಂದಿನ ವಿದ್ಯುತ್ ತಂತಿ ತಾಗಿ ತೀವ್ರವಾಗಿ ಗಾಯಗೊಂಡು, ತನ್ನ ಕೈಯನ್ನೇ ಕಳೆದುಕೊಂಡ ಘಟನೆ 2016ರ ಅಕ್ಟೋಬರ್ 4 ರಂದು ಸಂಭವಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಬಾಲಕ ತಂತಿ ಮುಟ್ಟಿದ್ದರಿಂದ ವಿದ್ಯುತ್ ತಗುಲಿರಬಹುದು: ಸೆಸ್ಕ್ ಅಧಿಕಾರಿಗಳು

ಮೈಸೂರು: ಹಾದು ಹೋಗಿರುವ ಬೀದಿದೀಪದ ವಿದ್ಯುತ್ ತಂತಿ ಮುಟ್ಟಿರುವುದರಿಂದ ಮಗುವಿಗೆ ವಿದ್ಯುತ್ ಸ್ಪರ್ಶವಾಗಿರಬಹುದು ಎಂದು ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸೆಸ್ಕ್ ಚಾಮುಂಡಿಪುರಂ ಉಪವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀಧರ್, ಬೀದಿದೀಪದ ವಿದ್ಯುತ್ ಮಾರ್ಗ ಹಾದು ಹೋಗಿರುವ ಪಕ್ಕದಲ್ಲೇ ಮನೆ ಕಟ್ಟಿರುವುದು ಇಂತಹ ಘಟನೆಗಳಿಗೆ ಕಾರಣ. ಜೊತೆಗೆ ತಂತಿ ಮುಟ್ಟಿರುವುದರಿಂದ ವಿದ್ಯುತ್ ತಗುಲಿ ಮಗುವಿಗೆ ಸುಟ್ಟ ಗಾಯಗಳಾಗಿರುವ ಸಾಧ್ಯತೆ ಇದೆ ಎಂದರು.

ವಿದ್ಯುತ್ ಮಾರ್ಗದಲ್ಲಿ ಬೆಂಕಿ ಹೊತ್ತಿರುವುದಾಗಲೀ, ಕಿಡಿ ಸ್ಫೋಟವಾಗಿರುವುದಕ್ಕೆ ಯಾವುದೇ ಕುರುಹುಗಳಿಲ್ಲ. ಆದರೂ, ನಾವು ಘಟನೆ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿ ವಿದ್ಯುತ್ ತಂತಿಗಳನ್ನು ರಸ್ತೆ ಕಡೆಗೆ ಬದಲಿಸಿ ಸುರಕ್ಷತಾ ಕ್ರಮ ಕೈಗೊಂಡಿದ್ದೇವೆ. ಆದರೆ ಯಾವುದೇ ತಾಂತ್ರಿಕ ತೊಂದರೆಯಿಂದ ವಿದ್ಯುತ್ ಮಾರ್ಗದಲ್ಲಿ ಬೆಂಕಿ ಹೊತ್ತಿಕೊಂಡಿಲ್ಲ. ಆದರೆ, ಘಟನೆಯಲ್ಲಿ ಮಗು ಗಾಯಗೊಂಡಿರುವ ಬಗ್ಗೆ ನಮಗೆ ನೋವಿದೆ. ಮುಂದೆ ಇಂತಹ ಅವಘಡ ಸಂಭವಿಸದಂತೆ ನಿಗಮವು ಎಚ್ಚರ ವಹಿಸಲಿದೆ ಎಂದರು.

ಬೆಂಕಿ ಹೊತ್ತಿದ್ದೇ ಘಟನೆಗೆ ಕಾರಣ: ಪೋಷಕರು

ಮೈಸೂರು: ವಿದ್ಯುತ್ ಮಾರ್ಗದ ತಂತಿಯಲ್ಲಿ ಬೆಂಕಿ ಕಾಣಿಸಿಕೊಂಡು, ಬೆಂಕಿಯುಂಡೆ ಹೊರಹೊಮ್ಮಿದ್ದೇ ತಮ್ಮ ಮಗುವಿಗೆ ಸುಟ್ಟ ಗಾಯಗಳಾಗಲು ಕಾರಣ ಎಂದು ಕಾರ್ತಿಕೇಯನ್ ತಂದೆ–ತಾಯಿ ದೂರಿದ್ದಾರೆ. 11,000 ವೋಲ್ಟ್ ಭಾರೀ ಸಾಮರ್ಥ್ಯದ ವಿದ್ಯುತ್ ತಂತಿ ಹಾದು ಹೋಗಿದ್ದರೂ ಸುರಕ್ಷತಾ ಕ್ರಮ ವಹಿಸದೆ ಸೆಸ್ಕ್ ಅಧಿಕಾರಿಗಳು ನಿರ್ಲಕ್ಷ್ಯದಿಂದ ಮನೆ ಸ್ಟೇರ್ ಕೇಸ್‌ನಲ್ಲಿ ಆಟವಾಡುತ್ತಿದ್ದ ಮಗುವಿಗೆ ಬೆಂಕಿ ತಗುಲಿದೆ ಎಂದು ತಿಳಿಸಿದ್ದಾರೆ. ವಿದ್ಯುತ್ ತಂತಿಯಲ್ಲಿ ಹಠಾತ್ತನೇ ಬೆಂಕಿ ಹೊತ್ತಿಕೊಂಡು ಕಿಡಿಗಳು ಹಾರಿ, ಪಕ್ಕದಲ್ಲೇ ಇದ್ದ ಮಗುವಿಗೆ ತಗುಲಿದ್ದನ್ನು ಕೆಲವರು ನೋಡಿದ್ದಾರೆ. ಘಟನೆಗೆ ಸೆಸ್ಕ್ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯವೇ ಕಾರಣ. ಚಿಕ್ಕ ವಯಸ್ಸಿನಲ್ಲೇ 5 ವರ್ಷದ ಬಾಲಕ ನೋವನ್ನನುಭವಿಸುವಂತಾಗಿದೆ. ಪ್ಲಾಸ್ಟಿಕ್ ಸರ್ಜರಿ ಮಾಡಬೇಕೆಂದು ವೈದ್ಯರು ಹೇಳಿದ್ದಾರೆ. ಒಂದು ವೇಳೆ ಪ್ರಾಣಾಪಾಯ ಸಂಭವಿಸಿದ್ದರೆ ತಮಗಿದ್ದ ಏಕಮಾತ್ರ ಪುತ್ರನನ್ನು ಕಳೆದುಕೊಳ್ಳಬೇಕಾಗಿತ್ತು. ಆ ದೇವರ ಕೃಪೆಯಿಂದಾಗಿ ಬಾಲಕ ಚೇತರಿಸಿಕೊಂಡಿದ್ದಾನೆ ಎಂದು ಆತಂಕದಲ್ಲೇ ಪೋಷಕರು 'ಮೈಸೂರು ಮಿತ್ರ'ನಿಗೆ ತಮ್ಮ ನೋವು ಹಂಚಿಕೊಂಡರು.

ಪಠ್ಯ ಪರಿಷ್ಕರಣೆ, ಕಾರ್ಯವೈಖರಿಗೆ ವ್ಯಾಪಕ ವಿರೋಧ

ಮೈಸೂರು,ಜೂ.2(ಪಿಎಂ)– ಪಠ್ಯಪುಸ್ತಕ ಪರಿಷ್ಕರಣೆ ಕಾರ್ಯವೈಖರಿ ವಿರೋಧಿಸಿ ಹಾಗೂ ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಗುರುವಾರ ಹಲವು ಪ್ರತ್ಯೇಕ ಪ್ರತಿಭಟನೆಗಳು ನಡೆದವು.





ಜಿಲ್ಲಾ ಕಸಾಪ: ನಾಡಗೀತೆಗೆ ಅಪಮಾನಿಸಿರುವ ಆರೋಪದ ಹಿನ್ನೆಲೆಯಲ್ಲಿ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಿ, ಬಂಧಿಸಬೇಕು ಹಾಗೂ ಬೆಳಗಾವಿ ಜಿಲ್ಲೆಯ ಗ್ರಾಮವೊಂದರಲ್ಲಿ ಕನ್ನಡಿಗರ ಮೇಲೆ ಹಲ್ಲೆ ನಡೆಸಿರುವ ಮರಾಠಿ ಪುಂಡರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ನಗರದ ಗಾಂಧಿ ಚೌಕದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಮ್ಮ ನಾಡಗೀತೆ ಭಾರತದ ಅಖಂಡತೆ ಮತ್ತು ಭಾವೈಕ್ಯತೆಯನ್ನು ಎತ್ತಿ ಹಿಡಿದಿದೆ. ಇಂತಹ ನಾಡಗೀತೆಗೆ ಅಪಮಾನ ಮಾಡಿರುವ ರೋಹಿತ್ ಚಕ್ರತೀರ್ಥ ವಿರುದ್ಧ ದೇಶದ್ರೋಹದಡಿ ಪ್ರಕರಣ ದಾಖಲಿಸಿ, ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಬೆಳಗಾವಿ ಜಿಲ್ಲೆಯ ಗ್ರಾಮವೊಂದರಲ್ಲಿ ಮದುವೆ ಮೆರವಣಿಗೆಯಲ್ಲಿ ಕನ್ನಡ ಗೀತೆಗೆ ನೃತ್ಯ ಮಾಡುತ್ತಿದ್ದ ಕನ್ನಡಿಗರ ಮೇಲೆ ಮರಾಠಿ ಪುಂಡರು ಹಲ್ಲೆ ನಡೆಸಿದ್ದು, ಹಲ್ಲೆಕೋರರನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು. ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಮುಖಂಡರಾದ ಮೂಗೂರು ನಂಜುಂಡಸ್ವಾಮಿ, ನಾಗೇಶ್, ಭಾನು ಮೋಹನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಂಶೋಧಕರ ಸಂಘ: ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಿ, ಬಂಧಿಸಬೇಕು ಎಂದು ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ಮೈಸೂರಿನ ಮಾನಸ ಗಂಗೋತ್ರಿಯ ಗ್ರಂಥಾಲಯದ ಎದುರು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಯಿತು.

ಶೈಕ್ಷಣಿಕ ವ್ಯವಸ್ಥೆಯ ಅನುಭವ ಇಲ್ಲದ ಇಂದಿನ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷರು, ತಮ್ಮಿಷ್ಟದಂತೆ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಿದ್ದಾರೆ. ಈ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿಯ ಜೀವಂತ ಸಾಕ್ಷಿಗಳಾದ ಬಸವಣ್ಣ, ರಾಷ್ಟ್ರಕವಿ ಕುವೆಂಪು ಸೇರಿದಂತೆ ಇನ್ನಿತರ ಮಹನೀಯರ ಬಗೆಗಿನ ವಿಚಾರಗಳನ್ನು ಬೇಕೆಂದೇ ತಿರುಚಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಗೌರವಾಧ್ಯಕ್ಷ ಮಹೇಶ್ ಸೋಸ್ಲೆ, ಸಂಶೋಧಕ ಕಲ್ಲಹಳ್ಳಿ ಕುಮಾರ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಗರ ಕಾಂಗ್ರೆಸ್: ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ರದ್ದುಗೊಳಿಸಲು ಆಗ್ರಹಿಸಿ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರಿನ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ (ಎಫ್‌ಟಿಎಸ್ ವೃತ್ತ) ಪ್ರತಿಭಟನೆ ನಡೆಸಲಾಯಿತು.

ಸಮಾಜ ಸುಧಾರಕರ ಕುರಿತಾದ ಪಾಠಗಳನ್ನು ಪರಿಷ್ಕರಣೆಯಲ್ಲಿ ಕೈಬಿಟ್ಟಿದ್ದು, ಇದು ಖಂಡನೀಯ. ಪರಿಷ್ಕರಣೆಯಲ್ಲಿ ಕುವೆಂಪು, ಬಸವಣ್ಣ ಅವರ ವಿಚಾರಧಾರೆಗಳನ್ನು ತಿರುಚಲಾಗಿದೆ. ಈ ಕೂಡಲೇ ರೋಹಿತ್ ಚಕ್ರತೀರ್ಥ ಅವರನ್ನು ಸಮಿತಿ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು. ಶಿಕ್ಷಣ ಸಚಿವ ನಾಗೇಶ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಆದಿ ಕರ್ನಾಟಕ ಮಹಾ ಸಂಸ್ಥೆ: ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಪಾಲಿಕೆಯ ಶೇಕಡಾ 24.10ಯಡಿ ವಿವಿಧ ಸೌಲಭ್ಯಗಳನ್ನು ನೀಡುವಲ್ಲಿ ವಂಚನೆಯಾಗುತ್ತಿದೆ ಎಂದು ಆರೋಪಿಸಿ ಅಶೋಕಪುರಂನ ಆದಿಕರ್ನಾಟಕ ಮಹಾಸಂಸ್ಥೆ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಎದುರು ಪ್ರತಿಭಟನೆ ನಡೆಸಲಾಯಿತು.

ಪಾಲಿಕೆಯಿಂದ ಪದೇ ಪದೆ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಅನ್ಯಾಯವಾಗುತ್ತಿದ್ದು, ಇದು ಹೀಗೆಯೇ ಮುಂದುವರೆದರೆ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಡೇನಲ್ಮ್ ಯೋಜನೆಯಡಿ ಈವರೆಗೆ





ಯಾವುದೇ ಮಹಿಳಾ ಸಂಘಟನೆಗಳಿಗೆ ತರಬೇತಿ ನೀಡಿಲ್ಲ. ವಾಹನ ಚಾಲನಾ ತರಬೇತಿಯನ್ನೂ ನೀಡದೇ ವಂಚನೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸೌಲಭ್ಯ ನೀಡುವಲ್ಲಿ ಹೆಚ್ಚುವರಿ ಆಯುಕ್ತರು ಬೇಜಾವಾಬ್ದಾರಿಯಿಂದ ವರ್ತಿಸಿದ್ದಾರೆ. ಅವರನ್ನು ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು. ಸಂಸ್ಥೆ ಅಧ್ಯಕ್ಷ ಸಿ.ವಿಜಯಕುಮಾರ್, ಉಪಾಧ್ಯಕ್ಷ ಸಿ.ಎಂ.ಮಹಾಲಿಂಗು, ಖಜಾಂಚಿ ಎಂ.ಎನ್. ಶಿವಪ್ರಸಾದ್, ಮುಖಂಡ ಸುಮನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.06.2022 ಶುಕ್ರವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ : ಪುನರ್ವಸು, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ಗಣಪತಿ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ :** ಅಪ್ಲಿಕೇಷನ್ಸ್ ಆಫ್ ನ್ಯಾನೋಟೆಕ್ನಾಲಜಿ ಇನ್ ಅಗ್ರಿಕಲ್ಚರ್ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಚಿಕ್ಕಮಗಳೂರು ಬ್ಲೂಮ್ ಬಯೋಟೆಕ್ ಮಾಲೀಕ ಡಾ. ಸುಹಾಸ್ ಮೋಹನ್, ಉಪಸ್ಥಿತರು : ಎಸ್‌ಜೆಸಿಇ ಪ್ರಿನ್ಸಿಪಾಲ್ ಪ್ರೊ. ಎಸ್.ಬಿ. ಕಿವಾಡೆ, ಅಧ್ಯಕ್ಷತೆ : ಜೆಎಸ್‌ಎಸ್ ಎಸ್‌ಟಿಯು ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಸ್ಥಳ: ಐಎಸ್ ಸೆಮಿನಾರ್ ಹಾಲ್, ಗೋಲ್ಡನ್ ಜ್ಯೂಬಿಲಿ ಭವನ, ಜೆಎಸ್‌ಎಸ್ ಟಿಐ ಕ್ಯಾಂಪಸ್, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಸೋಸಿಯೇಷನ್ :** ಡಿಜಿಟಲ್ ಪರಿಸರದಲ್ಲಿ ಸಂಗ್ರಹ ಅಭಿವೃದ್ಧಿ : ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಗ್ರಂಥಪಾಲಕ ಡಾ.ಕೆ.ಪ್ರಕಾಶ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಪ್ರೊ. ಮಲ್ಲಿನಾಥ್ ಕಂಬಾರ್, ಸ್ಥಳ: ಡಾ.ಎಸ್.ಆರ್. ರಂಗನಾಥನ್ ಸಭಾಂಗಣ, ಸಂಜೆ 4ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ', ವಿದ್ವಾನ್ ಶ್ರೀನಾಥ್ ಅವರಿಂದ ನಾ ನಿನ್ನ ಧ್ಯಾನದೊಳಿರಲು ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಅರ್ಜುನ್ (ವಯೋಲಿನ್), ವಿದ್ವಾನ್ ರಾಮಾನುಜಂ (ಮೃದಂಗ), ವಿದ್ವಾನ್ ರಮೇಶ್ (ಘಟಂ), ಸ್ಥಳ: ರಾಘವೇಂದ್ರಸ್ವಾಮಿ ಮಠ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ', ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ– ಡಾ. ಎಸ್.ಜಿ. ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ವಿ.ಲಲಿತಾ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ–ಜೀವನ್ಮುಖಿ, ಪ್ರಸ್ತುತಿ– ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಪರಿಸರ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಟಿ.ಎಸ್.ಹರ್ಷ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, 7.45 ಈಸಿ ಇಂಗ್ಲಿಷ್–ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆಯ ಬಾನುಲಿ ಸರಣೀ ರಚನೆ ಮತ್ತು ಪ್ರಸ್ತುತಿ–ವಿಜಯನಾರಸಿಂಹ, ನಿರ್ಮಾಣ–ಲಕ್ಷ್ಮೀನಾರಾಯಣ, 9.00 ವಿಜ್ಞಾನ ಭಾರತಿ, 10.30 ಸವಿನೆನಪು

- **ಗಾನಭಾರತೀ :** ವಿದ್ವಾನ್ ಮಾನಸನಯನ ಅವರಿಂದ ಗಾಯನ, ವಿದ್ವಾನ್ ವಿಶ್ವಜಿತ್ ಮತ್ತೂರ್–ಪಿಟೀಲು, ವಿದ್ವಾನ್ ಸಾಯಿಶಿವು ಲಕ್ಷ್ಮೀಕೇಶವ್–ಮೃದಂಗ, ವಿದ್ವಾನ್ ರಾಧೇಶ್–ಮೃದಂಗ, ಸ್ಥಳ: ವೀಣೆ ಶೇಷಣ್ಣಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ :** ವಿಶ್ವ ಪರಿಸರ ಮಾಸಾಚರಣೆ, ಮುಖ್ಯ ಅತಿಥಿಗಳು : ಖ್ಯಾತ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ್–ಸೇನಾನಿ, ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಸ್ಥಳ: ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಭಾಂಗಣ, ವಿಶ್ವೇಶ್ವರನಗರ, ಸಂಜೆ 6.30ಕ್ಕೆ.
- **ನೆಹರು ಯುವ ಕೇಂದ್ರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ :** ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ವಿಶ್ವ ಬೈಸಿಕಲ್ ದಿನಾಚರಣೆ, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಅಪರ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ, ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಸುರೇಶ್, ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಎಂ.ಬಿ. ಸುರೇಶ್, ಅಂತಾರಾಷ್ಟ್ರೀಯ ಕ್ರೀಡಾ ತರಬೇತುದಾರ ಅರುಣ್ ಕುಮಾರ್ ಹೆಚ್. ಪಾಟೀಲ್, ಸೈಕ್ಲಿಂಗ್ ತರಬೇತುದಾರ ನಾಗರಾಜ್, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಬೆಳಗ್ಗೆ 7.30ಕ್ಕೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ಮೋದಿ ಭಾಗಿ

ಮೈಸೂರು ಅರಮನೆ ಆವರಣದಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ಕೇಂದ್ರ ತಂಡದಿಂದ ಪೂರ್ವಭಾವಿ ಸಭೆ

● ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ ● ಭದ್ರತಾ ದೃಷ್ಟಿಯಿಂದ ಹಲವು ಸಲಹೆ ಸೂಚನೆ

ಮೈಸೂರು,ಜೂ. 2(ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ಜೂ.21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಗುರುವಾರ ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯ ಹಾಗೂ ರಾಷ್ಟ್ರೀಯ ಯೋಗ ಸಂಸ್ಥೆಯ ಹಿರಿಯ ಅಧಿಕಾರಿಗಳು ಪೂರ್ವಭಾವಿ ಸಭೆ ನಡೆಸಿ, ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮದ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ ನಡೆದ ಅಂತರರಾಷ್ಟ್ರೀಯ ಯೋಗ ದಿನ ಪೂರ್ವಭಾವಿ ಸಭೆಯಲ್ಲಿ ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯದ ನಿರ್ದೇಶಕ ವಿಕ್ರಂ ಸಿಂಗ್, ನವದೆಹಲಿಯ ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಯೋಗ ಸಂಸ್ಥೆಯ ನಿರ್ದೇಶಕ ಡಾ.ಈಶ್ವರ್ ಬಸವರೆಡ್ಡಿ ಹಾಗೂ ರಾಜ್ಯದ ಆಯುಷ್ ಆಯುಕ್ತ ರಾಮಚಂದ್ರ ಅವರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿ, ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಏನೆಲ್ಲಾ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಅರಮನೆ ಆವರಣಕ್ಕೆ 12 ಸಾವಿರಕ್ಕಿಂತ ಹೆಚ್ಚು ಜನರನ್ನು ಬಿಡಬಾರದು. ಪ್ರಧಾನಿಗಳ ಆಗಮನ, ತುರ್ತು ನಿರ್ಗಮನಕ್ಕೆ ಭದ್ರತಾ ಸಿಬ್ಬಂದಿ ಸೂಚಿಸಿದೆಡೆ ವ್ಯವಸ್ಥೆ ಮಾಡಬೇಕು. ವೇದಿಕೆ ನಿರ್ಮಾಣ, ಅಲ್ಲಿ ಭದ್ರತೆಗೆ ಹೆಚ್ಚಿನ ಗಮನ ಹರಿಸುವಂತೆ ಸೂಚಿಸಿದರು.



ಅರಮನೆ ಆವರಣದಲ್ಲಿ ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು

ಅರಮನೆ ಆವರಣದಲ್ಲಿ ಫಿಕ್ಸ್: ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮವನ್ನು ಅರಮನೆ ಆವರಣದಲ್ಲೇ ನಡೆಸಲು ಈಗಾಗಲೇ ನಿರ್ಧರಿಸಿರುವುದರಿಂದ ದೆಹಲಿಯಿಂದ ಬಂದಂತಹ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು, ಪ್ರಧಾನಮಂತ್ರಿ ಭದ್ರತಾ ಸಿಬ್ಬಂದಿಗಳೂ ಸುರಕ್ಷತೆ, ಭದ್ರತೆ ದೃಷ್ಟಿಯಿಂದ ಅಗತ್ಯ ಕ್ರಮಕ್ಕೆ ಮುಂದಾಗಿದ್ದಾರೆ.

ಪರ್ಯಾಯ ಆಯ್ಕೆ ಚಾಮುಂಡಿವಿಹಾರ ಕ್ರೀಡಾಂಗಣ: ಯೋಗ ಪ್ರದರ್ಶನಕ್ಕೆ ಅರಮನೆ ಆವರಣವೇ ಸೂಕ್ತವೆಂದು ಆಯ್ಕೆ ಮಾಡಲಾಗಿದ್ದರೂ, ತುರ್ತು ಇಲ್ಲವೇ ಅನಿವಾರ್ಯ ಪರಿಸ್ಥಿತಿಗೆ ಪರ್ಯಾಯ ಸುರಕ್ಷಿತ ಸ್ಥಳವೊಂದನ್ನು ಆಯ್ಕೆ ಮಾಡಿಕೊಳ್ಳುವಂತೆ ದೆಹಲಿಯಿಂದ ಬಂದಿದ್ದ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಹವಾಮಾನ ವೈಪರೀತ್ಯ ಇಲ್ಲವೇ ಮಳೆ ಬಂದರೆ ಸುರಕ್ಷಿತ ಸ್ಥಳದಲ್ಲಿ ಕಾರ್ಯಕ್ರಮ ನಡೆಸುವುದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವಂತೆಯೂ ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಒಳಾಂಗಣ ಯೋಗ ಪ್ರದರ್ಶನಕ್ಕೆ ಸೂಕ್ತವಾಗಿದೆ ಎಂದರು. ಇದಕ್ಕೆ ಸಮ್ಮತಿಸಿದ ಆಯುಷ್ ಮಂತ್ರಾಲಯದ ಅಧಿಕಾರಿಗಳು ವಾತಾವರಣ ನೋಡಿಕೊಂಡು ಸಿದ್ಧತೆ ಮಾಡಿಕೊಳ್ಳುವಂತೆಯೂ ಸಲಹೆ ನೀಡಿದರು.

ಅರಮನೆ ಆವರಣ ವೀಕ್ಷಿಸಿದ ಅಧಿಕಾರಿಗಳು: ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿದ ಬಳಿಕ ಅರಮನೆಯ ಆವರಣವನ್ನು ಪರಿಶೀಲಿಸಿದರು. ಅರಮನೆ ಮುಂಭಾಗದ ಪ್ರಾಂಗಣ, ತ್ರಿನೇಶ್ವರ ದೇವಾಲಯದ ಪಕ್ಕದ ಖಾಲಿ ಜಾಗ, ಜಯಮಾರ್ತಾಂಡ ದ್ವಾರ ಮುಂಭಾಗದ ಆವರಣ, ಭುವನೇಶ್ವರಿ ದೇವಾಲಯದ ಮುಂದಿನ ಉದ್ಯಾನ ಸೇರಿದಂತೆ ಅರಮನೆಯ ಸುತ್ತಲೂ ಪರಿಶೀಲನೆ ಮಾಡಿದ ಅಧಿಕಾರಿಗಳು ಭದ್ರತೆಗೆ ಸಂಬಂಧಪಟ್ಟಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ಪಡೆದರು.

ಸಭೆಯಲ್ಲಿ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಎಸ್ಪಿ ಆರ್.ಚೇತನ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಜಿ.ಪಂ ಸಿಇಓ ಬಿ.ಆರ್.ಪೂರ್ಣಿಮಾ, ಡಿಸಿಪಿ ಪ್ರದೀಪ್ ಗುಂಟಿ, ಜಿಲ್ಲಾ ಆಯುಷ್ ಅಧಿಕಾರಿ ಬಿ.ಎಸ್.ಸೀತಾಲಕ್ಷ್ಮಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಪ್ರಧಾನಿ ಮೋದಿ ಭೇಟಿಯಿಂದ ಮೈಸೂರಿನ ಹಿರಿಮೆ ಇಮ್ಮಡಿ



ಮೈಸೂರು,ಜೂ. 2(ಎಂಟಿವೈ)– ಪ್ರಸಕ್ತ ಸಾಲಿನ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿರುವುದರಿಂದ ಮೈಸೂರಿನ ಹಿರಿಮೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಕೇಂದ್ರ ಆಯುಷ್ ಮಂತ್ರಾಲಯದ ನಿರ್ದೇಶಕ ವಿಕ್ರಂಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ಯೋಗ ದಿನದ ಹಿನ್ನೆಲೆಯಲ್ಲಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜೂ.21ರಂದು ಮೈಸೂರಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿದ್ದಾರೆ. ಮೈಸೂರು ನಗರ ಸಂಸ್ಕೃತಿ ಮತ್ತು ಪರಂಪರೆಗೆ ಹೆಸರುವಾಸಿಯಾಗಿದೆ. ಯೋಗ ಕ್ಷೇತ್ರಕ್ಕೆ ಮೈಸೂರು ಸಾಕಷ್ಟು ಕೊಡುಗೆ ನೀಡಿದೆ. ಅಲ್ಲದೆ, ಹಲವು ಯೋಗ ಪರಿಣಿತರು ಮೈಸೂರಿನಲ್ಲಿದ್ದಾರೆ. ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಲ್ಲಿ ಯೋಗ ಕಲಿಯುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದಲೇ ಪ್ರಧಾನಿಗಳು ಮೈಸೂರಲ್ಲಿ ನಡೆಯುವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಪ್ರಧಾನಿಗಳ ಆಗಮನದಿಂದ ಮೈಸೂರಿನ ಹಿರಿಮೆ ಮತ್ತಷ್ಟು ಹೆಚ್ಚಲಿದೆ ಎಂದರು.

ಮೈಸೂರಲ್ಲಿ ನಡೆಯುವ ಯೋಗ ದಿನಾಚರಣೆಯ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯದಿಂದ ಆಯೋಜಿಸಲಾಗುತ್ತಿದೆ. ಯೋಗ, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅತ್ಯವಶ್ಯಕ. ಯೋಗವನ್ನು ಸಾಮರಸ್ಯ ಹಾಗೂ ಮನಃಶಾಂತಿಗಾಗಿ ಮಾಡಬೇಕು. ಮೈಸೂರಿನಲ್ಲಿ ಜೂ.20 ಮತ್ತು 21ರಂದು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಯೋಗ ವಸ್ತುಪ್ರದರ್ಶನವನ್ನು ಡಿಜಿಟಲ್ ಹಾಗೂ ಸ್ಟಾಲ್ ಎಕ್ಸಿಬಿಷನ್ ಮೂಲಕ ನಡೆಸಲಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್ಸ್ಟಿಟ್ಯೂಟ್‌ನ ನಿರ್ದೇಶಕ ಬಸವರೆಡ್ಡಿ ಮಾತನಾಡಿ, ಈ ವರ್ಷ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದು, ಕರ್ನಾಟಕದ 75 ಸ್ಥಳಗಳಲ್ಲಿ ಅಜಾದಿ ಕಾ ಅಮೃತ ಮಹೋತ್ಸವ ಕಾರ್ಯಕ್ರಮ ಆಚರಿಸಲಾಗುತ್ತಿದೆ. ಅರಮನೆ ಆವರಣದಲ್ಲಿ ನಡೆಯುವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಗುತ್ತದೆ. ಪ್ರಧಾನಿಯವರ ಯೋಗ ಕಾರ್ಯಕ್ರಮಕ್ಕೆ ಶಾಲಾ ಮಕ್ಕಳು, ಪೊಲೀಸ್ ಸಿಬ್ಬಂದಿಗಳು, ದಿವ್ಯಾಂಗರು, ತೃತೀಯಲಿಂಗಿಗಳು, ಪೌರಕಾರ್ಮಿಕರು ಸೇರಿದಂತೆ ಇನ್ನೂ ವಿವಿಧ ವರ್ಗಗಳ ಜನರಿಗೆ ಯೋಗ ಪ್ರದರ್ಶನದಲ್ಲಿ ಅವಕಾಶ ನೀಡಲಾಗುವುದು. ಅರಮನೆ ಆವರಣದಲ್ಲಿ 12 ಸಾವಿರ ಜನರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ನೇಪಥ್ಯಕ್ಕೆ ಸರಿಯುತ್ತಿರುವ ಸೀಮೆಎಣ್ಣೆ ಪಂಪ್ ಸ್ಟೌಗಳು

ಶೇ.50ರಷ್ಟು ಅಗ್ನಿ ಅವಘಡಗಳು ಕಡಿತ

ಕೆ.ಆರ್.ಆಸ್ಪತ್ರೆಯಲ್ಲಿ ಸ್ಕಿನ್ ಬ್ಯಾಂಕ್ ಸ್ಥಾಪನೆ ಪ್ರಸ್ತಾಪವೂ ನೆನೆಗುದಿಗೆ

ಮೈಸೂರು, ಜೂ.2(ಆರ್‌ಕೆ)–ಗೃಹ ಬಳಕೆ ಗ್ಯಾಸ್ ಸಿಲಿಂಡರ್‌ಗಳು ಮೇಲುಗೈ ಸಾಧಿಸುತ್ತಿದ್ದಂತೆಯೇ ಸೀಮೆಎಣ್ಣೆಯ ಪಂಪ್ ಸ್ಟೌ ಹಾಗೂ ಬತ್ತಿ ಸ್ಟೌಗಳು ನೇಪಥ್ಯಕ್ಕೆ ಸರಿಯುತ್ತಿರು ವುದರಿಂದ ಅಗ್ನಿ ಅವಘಡ (Fire Accident) ಗಳು ಗಣನೀಯವಾಗಿ ಕಡಿಮೆಯಾಗಿವೆ ಎಂದು ಮೈಸೂರಿನ ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಚರ್ಮರೋಗ ತಜ್ಞ ಡಾ. ಎನ್.ನಂಜುಂಡಸ್ವಾಮಿ ತಿಳಿಸಿದ್ದಾರೆ.

ಅಡುಗೆ ಮಾಡಲು, ನೀರು ಕಾಯಿಸಲು ಸೀಮೆಎಣ್ಣೆ ಸ್ಟೌ ಬಳಸುತ್ತಿದ್ದಾಗ ಸ್ಟೌ ಸಿಡಿದು ಅಥವಾ ಬೆಂಕಿ ತಗುಲಿ ಸುಟ್ಟ ಗಾಯಗಳಾಗುವ ಪ್ರಕರಣಗಳು ಹೆಚ್ಚಾಗಿ ಸಂಭವಿಸುತ್ತಿದ್ದವು. ಕೆ.ಆರ್.ಆಸ್ಪತ್ರೆಯೊಂದರಲ್ಲೇ ತಿಂಗಳಿಗೆ 20 ರಿಂದ 25 ಮಂದಿ ಸುಟ್ಟ ಗಾಯದ ರೋಗಿಗಳು ಬರುತ್ತಿದ್ದರು. ಆದರೆ ಕಳೆದ 3 ವರ್ಷಗಳಿಂದೀಚೆಗೆ ವರ್ಷಕ್ಕೆ 100 ರಿಂದ 120 ರೋಗಿಗಳು ದಾಖಲಾಗುತ್ತಿದ್ದು, ಶೇ.50ರಷ್ಟು ಸುಟ್ಟ ಗಾಯಗಳಾದ ಪ್ರಕರಣ ಕಡಿಮೆಯಾಗಿವೆ ಎಂದು ಅವರು ತಿಳಿಸಿದರು.

ಸಾಮಾನ್ಯವಾಗಿ ಪಂಪ್ ಸ್ಟೌ ಸಿಡಿದು ಹೆಚ್ಚು ಮಂದಿ ಗಾಯಗೊಳ್ಳುತ್ತಿದ್ದರು. ಈಗ ಅವು ನೇಪಥ್ಯಕ್ಕೆ ಸರಿದು ಗ್ಯಾಸ್ ಸ್ಟೌವ್‌ಗಳನ್ನು ಪ್ರತಿಯೊಂದಕ್ಕೂ ಬಳಸುತ್ತಿರುವುದರಿಂದ ಅಗ್ನಿ ಅಪಘಾತಗಳು ಸಂಭವಿಸುವುದು ಅಪರೂಪವಾಗಿದೆ. ಅದೇ ಕಾರಣಕ್ಕೆ ನಮ್ಮ ಆಸ್ಪತ್ರೆಯ ಸುಟ್ಟ ಗಾಯಗಳ ಚಿಕಿತ್ಸಾ ವಿಭಾಗದಲ್ಲೂ ರೋಗಿಗಳ ಸಂಖ್ಯೆ ಶೇ.50ರಷ್ಟು ಕಡಿಮೆಯಾಗಿದೆ ಎಂದು ಡಾ. ನಂಜುಂಡಸ್ವಾಮಿ ತಿಳಿಸಿದ್ದಾರೆ.



ಸ್ಕಿನ್ ಬ್ಯಾಂಕ್‌ಗೆ ಬೇಡಿಕೆ ಇಲ್ಲ: ಅಗ್ನಿ ಅವಘಡಗಳು ಕಡಿಮೆಯಾಗುತ್ತಿರುವುದರಿಂದ ಸುಟ್ಟ ಗಾಯಗಳಾಗುವವರ ಸಂಖ್ಯೆಯೂ ಇಳಿಮುಖವಾಗುತ್ತಿರುವುದರಿಂದ ಪ್ಲಾಸ್ಟಿಕ್ ಸರ್ಜರಿ ಅಗತ್ಯವೂ ಕಂಡು ಬರುತ್ತಿಲ್ಲ. ಅದೇ ಕಾರಣಕ್ಕೆ ಕೆ.ಆರ್.ಆಸ್ಪತ್ರೆಯಲ್ಲಿ ಸ್ಕಿನ್ ಬ್ಯಾಂಕ್ ಸ್ಥಾಪನೆ ಪ್ರಸ್ತಾಪಕ್ಕೂ ಮಹತ್ವ ಇಲ್ಲದಂತಾಗಿದೆ ಎಂದು ಡಾ. ನಂಜುಂಡಸ್ವಾಮಿ ತಿಳಿಸಿದರು.

ಅವಘಡ ಸುಟ್ಟ ಪ್ರಕರಣಗಳು ಹೆಚ್ಚಾಗಿದ್ದಾಗ ಪ್ಲಾಸ್ಟಿಕ್ ಸರ್ಜರಿಗಳು ಅಗತ್ಯವಿದ್ದ ಹಿನ್ನೆಲೆಯಲ್ಲಿ ಸ್ಕಿನ್ ಬ್ಯಾಂಕ್ ಸ್ಥಾಪಿಸಲು ಕಳೆದ 3 ವರ್ಷಗಳ ಹಿಂದೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದು ದುಬಾರಿ ನಿರ್ವಹಣೆಯಾಗಿದ್ದು, ಮೂಲ ಸೌಲಭ್ಯ ಕಲ್ಪಿಸಲು ಹೆಚ್ಚು ಅನುದಾನದ ಅಗತ್ಯವಿದೆ.

ದಾನಿಗಳಿಂದ ಪಡೆದ ಚರ್ಮವನ್ನು ಸಂರಕ್ಷಿಸಿ 2 ಅಥವಾ 3 ತಿಂಗಳೊಳಗಾಗಿ ಅಗತ್ಯವಿರುವ ಸುಟ್ಟ ಗಾಯದ ರೋಗಿಗಳಿಗೆ ಅಳವಡಿಸುವ ಪ್ಲಾಸ್ಟಿಕ್ ಸರ್ಜರಿ ಶಸ್ತ್ರಚಿಕಿತ್ಸೆ ನಡೆಸಬೇಕು. ಆದರೆ ಈಗ ಅಂತಹ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿರುವುದರಿಂದ ಸ್ಕಿನ್ ಬ್ಯಾಂಕ್ ಯೋಜನೆಗೆ ಬೇಡಿಕೆ ಕಡಿಮೆಯಾಗಿದೆ ಎಂದು ಅವರು ತಿಳಿಸಿದರು.

ಕೆ.ಆರ್.ಆಸ್ಪತ್ರೆಯಿಂದ ಸಲ್ಲಿಸಿರುವ ಪ್ರಸ್ತಾವನೆಗೆ ಸರ್ಕಾರದಿಂದ ಯಾವುದೇ ಮಾಹಿತಿ ಬಂದಿಲ್ಲ. ನಮಗೂ ತೀವ್ರ ಒತ್ತಡವಿಲ್ಲದ ಕಾರಣ ಆ ಪ್ರಕ್ರಿಯೆ ಮುಂದುವರಿಸಿಲ್ಲ ಎಂದ ಡಾ. ನಂಜುಂಡಸ್ವಾಮಿ ಅವರು, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಾತ್ರ ಸ್ಕಿನ್ ಬ್ಯಾಂಕ್ ಸೌಲಭ್ಯವಿದೆ ಎಂದು ತಿಳಿಸಿದ್ದಾರೆ.

'ಇರುವುದೊಂದೇ ಭೂಮಿ' ಚಿತ್ರ ಬಿಡಿಸಿದ ನೂರಾರು ಮಕ್ಕಳು

ಮೆಚ್ಚುಗೆಗೆ ಪಾತ್ರರಾದ ವಿಶೇಷ ಮಕ್ಕಳ ಚಿತ್ರಕಲೆ



ಮೈಸೂರು,ಜೂ. 2(ಎಂಟಿವೈ)– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಶೇಷ ಮಕ್ಕಳೂ ಸೇರಿದಂತೆ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು 'ಇರುವುದೊಂದೇ ಭೂಮಿ' ವಿಷಯ ಕುರಿತು ಚಿತ್ರ ಬರೆದು ಗಮನ ಸೆಳೆದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ , ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಗೆ 'ಒಂದೇ ಒಂದು ಭೂಮಿ – ಪ್ರಕೃತಿಯ ಜೊತೆ ಸಾಮರಸ್ಯದಿಂದ ಸುಸ್ಥಿರವಾಗಿ ಬದುಕೋಣ' ಶೀರ್ಷಿಕೆ ನೀಡಲಾಗಿತ್ತು. ಮೈಸೂರಿನ ವಿವಿಧ ಬಡಾವಣೆಗಳಿಂದ ಆಗಮಿಸಿದ್ದ ಶಾಲಾ ವಿದ್ಯಾರ್ಥಿಗಳು ತಮ್ಮ ಕಲ್ಪನೆಯಲ್ಲಿ ಚಿತ್ರ ಬರೆದು ಪರಿಸರ ಸಂರಕ್ಷಣೆಗೆ ಎಲ್ಲರೂ ಒತ್ತು ನೀಡಬೇಕೆಂಬ ಸಂದೇಶ ಸಾರಿದರು.

ಸ್ಪರ್ಧೆಯಲ್ಲಿ 1ರಿಂದ 4ನೇ ತರಗತಿ, 5ರಿಂದ 7 ಹಾಗೂ 8ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಸ್ಪರ್ಧೆ ನಡೆಸಲಾಯಿತು. ಬೆಳಗ್ಗೆ 11ರಿಂದ ಮಧ್ಯಾಹ್ನ 12.30ರವರೆಗೆ ನಡೆದ ಸ್ಪರ್ಧೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಚಿತ್ರ ಬರೆದು ಗಮನ ಸೆಳೆದರು. ಸ್ಪರ್ಧೆಯಲ್ಲಿ 10ಕ್ಕೂ ಹೆಚ್ಚು ಮಂದಿ ವಿಶೇಷ ಮಕ್ಕಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಡಾ.ಬಿ.ಎಂ.ಪ್ರಕಾಶ್, ಪರಿಸರ ಅಧಿಕಾರಿ ಜಿ.ಆರ್.ಗಣೇಶನ್, ಉಪ ಪರಿಸರ ಅಧಿಕಾರಿಗಳಾದ ಎಸ್.ರಮೇಶ್, ಎಂ.ಜೆ.ಜಯಲಕ್ಷ್ಮಿ, ಹರಿಪ್ರಸಾದ್, ಎಂ.ಕೆ. ನೇತ್ರಾವತಿ, ವೈಜ್ಞಾನಿಕ ಅಧಿಕಾರಿ ಎನ್.ಕವಿತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹೆಚ್.ಕೆ.ರಾಮು ಗೆಲುವು ಖಚಿತ: ಎಂಎಲ್‌ಸಿ ಮಂಜೇಗೌಡ

ಚಾಮರಾಜನಗರ. ಜೂ.2:– ದಕ್ಷಿಣ ಪದವೀಧರರ ಕ್ಷೇತ್ರದ ಜಾ.ದಳ ಅಭ್ಯರ್ಥಿ ಹೆಚ್.ಕೆ. ರಾಮು ಅವರ ಗೆಲುವು ಖಚಿತವಾಗಿದ್ದು, ಮತದಾರರು ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚು ಮತಗಳನ್ನು ನೀಡುವುದರ ಮೂಲಕ ಅವರನ್ನು ಅಧಿಕ ಮತದ ಅಂತರದಿಂದ ಗೆಲ್ಲಿಸಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.



ಚಾಮರಾಜನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ದಕ್ಷಿಣ ಪದವೀಧರರ ಚುನಾವಣೆಯ ಜನತಾದಳ ಅಭ್ಯರ್ಥಿ ಹೆಚ್.ಕೆ. ರಾಮು ಪರವಾಗಿ ನಡೆದ ಜಿಲ್ಲಾಮಟ್ಟದ ಜಾ.ದಳ ಸಭೆಯಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ ಜೆ.ಡಿ.ಎಸ್. ಪಕ್ಷಕ್ಕೆ ಶಕ್ತಿ ತುಂಬಿದ್ದೀರಿ. ಅದೇ ರೀತಿ ಹೆಚ್.ಕೆ. ರಾಮುವನ್ನು ಗೆಲ್ಲಿಸಿದರೆ 2023ಕ್ಕೆ ರಾಜ್ಯದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರುವ ದಿಕ್ಸೂಚಿಯಾಗುತ್ತದೆ.

ಜೆಡಿಎಸ್ ಮುಳುಗೇ ಹೋಯ್ತು ಅಂದುಕೊಂಡವರೆಲ್ಲಾ ಮತ್ತೆ ಮರಳಿ ಪಕ್ಷಕ್ಕೆ ಬರುತ್ತಿದ್ದಾರೆ ಎಂದ ಅವರು, ಜಿಲ್ಲೆಯಲ್ಲಿ 12 ಸಾವಿರ ಪದವೀಧರ ಮತದಾರರಿದ್ದು, 9 ಸಾವಿರ ಮತಗಳು ಚಲಾವಣೆ ಆಗುತ್ತವೆ. ಅದರಲ್ಲಿ ನಮಗೆ 6 ಸಾವಿರಕ್ಕೂ ಹೆಚ್ಚು ಮತಗಳು ಬರುವ ನಿರೀಕ್ಷೆ ಇದ್ದು, ಕಾರ್ಯಕರ್ತರು ಮತದಾರರ ಮನಗೆಲ್ಲುವ ಮುಖಾಂತರ ಕುಮಾರಣ್ಣನವರ ಕೈ ಬಲಪಡಿಸಬೇಕು. ನಾನು ಯಾವಾಗಲೂ ನಿಮ್ಮ ಜೊತೆಗಿರುತ್ತೇನೆ. ನಿಮ್ಮ ಕಷ್ಟ ಸುಖಗಳಿಗೆ ಸ್ಪಂದಿಸುತ್ತೇನೆ, ನಮ್ಮ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ ಎಂದರು.

ಈ ಸಂದರ್ಭದಲ್ಲಿ ಚಾಮರಾಜನಗರ ಜೆ.ಡಿ.ಎಸ್ ಅಧ್ಯಕ್ಷ ಸಯ್ಯದ್ ಅಕ್ರಂ, ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷ ರಾಜುಗೌಡ, ನವೀನ್, ಯಳಂದೂರು ತಾಲ್ಲೂಕು ಅಧ್ಯಕ್ಷ ದೇವರಾಜ್, ಕೊಳ್ಳೇಗಾಲ ಅಧ್ಯಕ್ಷ ರೇವಣ್ಣ, ಮುಖಂಡರಾದ ನಾಗಣ್ಣ ಶಿವಮಲ್ಲು, ಭರತ್ ಮಂಜೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಶ್ರೀರಾಂಪುರ ರಮೇಶ್, ಟ್ಯೂಬ್ ಮಹಾದೇವ ಹಾಜರಿದ್ದರು.

ಹಾರ್ದಿಕ್ ಪಟೇಲ್ ಬಿಜೆಪಿ ಸೇರ್ಪಡೆ

ಇತ್ತೀಚೆಗೆ ಕಾಂಗ್ರೆಸ್ ತೊರೆದಿದ್ದರು



ಗಾಂಧಿನಗರ: ಎರಡು ವಾರಗಳ ಹಿಂದಷ್ಟೇ ಕಾಂಗ್ರೆಸ್ ತೊರೆದಿದ್ದ ಪಾಟೀದಾರ್ ಸಮುದಾಯದ ನಾಯಕ ಹಾರ್ದಿಕ್ ಪಟೇಲ್ ಅವರು ಗುರುವಾರ ಬಿಜೆಪಿಗೆ ಸೇರ್ಪಡೆಯೂ ಆದರು. ಗುಜರಾತ್ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಂತೆ ಈ ಬೆಳವಣಿಗೆ ನಡೆದಿದೆ.

ಗಾಂಧಿನಗರದಲ್ಲಿರುವ ಗುಜರಾತ್‌ನ ಬಿಜೆಪಿ ಘಟಕದ ಮುಖ್ಯ ಕಚೇರಿ ಕಮಲಮ್‌ನಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿ ಗುಜರಾತ್ ಘಟಕದ ಅಧ್ಯಕ್ಷ ಸಿ. ಆರ್. ಪಾಟೀಲ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ನಿತಿನ್ ಪಟೇಲ್ ಅವರು ಹಾರ್ದಿಕ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಹಾರ್ದಿಕ್ ಜೊತೆ ಕಾಂಗ್ರೆಸ್‌ನ ಮತ್ತೊಬ್ಬ ನಾಯಕಿ ಶ್ವೇತಾ ಬ್ರಹ್ಮಭಟ್ ಕೂಡಾ ಬಿಜೆಪಿ ಸೇರಿದರು. ಶ್ವೇತಾ ಅವರು 2017ರ ವಿಧಾನಸಭೆ ಚುನಾವಣೆಯಲ್ಲಿ ಮಣಿನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು.

ಆಡಳಿತಾರೂಢ ಬಿಜೆಪಿ ಸೇರಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಾರ್ದಿಕ್, ಬಿಜೆಪಿಯು ರಾಷ್ಟ್ರದ ಹಿತಕ್ಕಾಗಿ ಕೆಲಸ ಮಾಡುತ್ತದೆ. ನಾನು ಟಿಕೆಟ್ ಆಕಾಂಕ್ಷಿ ಅಲ್ಲ. ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಮತ್ತು ಸೈನಿಕನಾಗಿ ಕೆಲಸ ಮಾಡುತ್ತೇನೆ. ಜನರ ಭಾವನೆಗಳನ್ನು ಕಾಂಗ್ರೆಸ್ ಗೌರವಿಸುವುದಿಲ್ಲ. ಬಿಜೆಪಿ ಸೇರಿ ದೇಶಕ್ಕೆ ಕೊಡುಗೆ ನೀಡುವಂತೆ ಇತರ ಪಕ್ಷಗಳ ಮುಖಂಡರಿಗೂ ನಾನು ಮನವಿ ಮಾಡಿದ್ದೇನೆ ಎಂದರು.

ನಿಮ್ಮ ಮೇಲಿರುವ ದೇಶದ್ರೋಹದ ಆರೋಪದಿಂದ ಬಿಡುಗಡೆ ಪಡೆಯಲು ಮತ್ತು ನೀವು ದೇಶಭಕ್ತ ಎಂದು ಸಾಬೀತುಪಡಿಸುವ ಸಲುವಾಗಿ ಬಿಜೆಪಿ ಸೇರಿದ್ದೀರಾ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಯಾವಾಗಲೂ ದೇಶಭಕ್ತನೇ ಮತ್ತು ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇನೆ. ಕಾಶ್ಮೀರದ ವಿಶೇಷ ಸ್ಥಾನ ರದ್ದುಪಡಿಸಿದ್ದಕ್ಕಾಗಿ ಮತ್ತು ರಾಮಮಂದಿರ ವಿಚಾರದಲ್ಲಿ ತೆಗೆದುಕೊಂಡ ನಿರ್ಣಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನಾನು ಕಾಂಗ್ರೆಸ್‌ನಲ್ಲಿ ಇದ್ದಾಗಲೂ ಹೊಗಳಿದ್ದೆ ಎಂದರು.

ಪಾಟೀದಾರ್ ಮೀಸಲಾತಿ ಹೋರಾಟದ ವೇಳೆ ಉಂಟಾದ ಸಾರ್ವಜನಿಕ ಆಸ್ತಿ ಹಾನಿ ಕುರಿತು ಕ್ಷಮೆ ಯಾಚಿಸುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಜನರಿಗಾಗಿ ಆ ಹೋರಾಟ ನಡೆಸಿದ್ದು. ಹಾಗಾಗಿ ಕ್ಷಮೆ ಯಾಚಿಸುವ ಪ್ರಶ್ನೆಯೇ ಇಲ್ಲ. ಈ ಹೋರಾಟದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ.10ರಷ್ಟು ಮೀಸಲಾತಿ ನೀಡಿದ್ದಾರೆ ಎಂದರು.

ಪಾಟೀದಾರ್ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ 2015ರಲ್ಲಿ ನಡೆದಿದ್ದ ಹೋರಾಟವನ್ನು ಹಾರ್ದಿಕ್ ಅವರು ಮುನ್ನಡೆಸಿದ್ದರು. ಹೋರಾಟದ ವೇಳೆ ಸಾರ್ವಜನಿಕ ಆಸ್ತಿ ಪಾಸ್ತಿ ಹಾನಿ ಮತ್ತು ಜೀವಹಾನಿ ಆಗಿತ್ತು ಎಂಬ ಕಾರಣಕ್ಕೆ ಅವರ ವಿರುದ್ಧ ದೇಶದ್ರೋಹದ ಪ್ರಕರಣ ಸೇರಿ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿತ್ತು. 2019ರಲ್ಲಿ ಅವರು ಕಾಂಗ್ರೆಸ್ ಸೇರ್ಪಡೆ ಆಗಿದ್ದರು. ಕಳೆದ ಮೇ 18ರಂದು ಅವರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ನಕ್ಕರೆ ಅದೇ ಸ್ವರ್ಗ

ಗುರುಗಳು : (ಪ್ರವಚನದಲ್ಲಿ) "ನೀನೇಕೆ ಕೈ ಎತ್ತಲಿಲ್ಲ? ನಿನಗೆ ಸ್ವರ್ಗಕ್ಕೆ ಹೋಗಲು ಇಷ್ಟವಿಲ್ಲವೇ?"

ಕೇಳುಗ : "ಪ್ರವಚನ ಮುಗಿದ ನಂತರ ಸೀದಾ ಮನೆಗೆ ಬರುವಂತೆ ನನ್ನ ಹೆಂಡತಿ ಹೇಳಿದ್ದಾಳೆ ಗುರೂಜೀ!"

ಮೈಸೂರು ಮಿತ್ರ

ಶುಕ್ರವಾರ, 3 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮನುಷ್ಯ ಪ್ರಯತ್ನಪಟ್ಟರೆ ತನ್ನ ಇಹ ಜೀವಿತವನ್ನೇ ಸ್ವರ್ಗ ಮಾಡಿಕೊಳ್ಳಬಹುದು. –ಭರ್ತೃಹರಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅನ್ನ ದೇವರ ಮುಂದೆ ಇನ್ನು ದೇವರುಂಟೆ?

ನಿಮ್ಮ ಪತ್ರಗಳು

ಜಾವಾ ಕಾರ್ಖಾನೆ ರಸ್ತೆ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಬೃಂದಾವನ ಬಡಾವಣೆಯಿಂದ ಜಾವಾ ಕಾರ್ಖಾನೆ ರಸ್ತೆ ಅಂದರೆ ಕೆಂಪೇಗೌಡ ಕಲ್ಯಾಣ ಮಂಟಪದ ರಸ್ತೆ ದೊಡ್ಡ ದೊಡ್ಡ ಗುಂಡಿಗಳಿಂದ ತೀರಾ ಹದಗೆಟ್ಟು ವರ್ಷಗಳೇ ಕಳೆದಿದೆ. ಈ ರಸ್ತೆಯಲ್ಲಿ ದಿನನಿತ್ಯವೂ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈಗ ವಾಹನಗಳು ಚಲಿಸುವುದು ತ್ರಾಸದಾಯಕವಾಗಿದೆ. ರಸ್ತೆ ಯಾವುದು ಹಳ್ಳ ಯಾವುದೂ ಎಂಬುದೇ ತಿಳಿಯುವುದಿಲ್ಲ. ವಾಹನ ಸವಾರರು ಸರ್ಕಸ್ ಮಾಡಿಕೊಂಡು ಚಲಿಸುವಂತಾಗಿದೆ. ರೋಗಿಗಳು ಈ ರಸ್ತೆಯಲ್ಲಿ ಚಲಿಸಿದರೆ ತೀವ್ರ ಅನಾರೋಗ್ಯಕ್ಕೆ ತುತ್ತಾಗುವುದು ಕಟ್ಟಿಟ್ಟ ಬುತ್ತಿ. ಅಲ್ಲದೆ ಅಪಘಾತಗಳು ಕೂಡ ಸಂಭವಿಸಿರುವುದುಂಟು. ಇದರ ಬಗ್ಗೆ ಪಾಲಿಕೆ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಗಮನಹರಿಸಿ ಶೀಘ್ರ ಕಾಯಕಲ್ಪಕ್ಕೆ ಮುಂದಾಗಬೇಕಿದೆ.

–ಪಡುವಾರಹಳ್ಳಿ ಎಂ ರಾಮಕೃಷ್ಣ, ವಕೀಲರು

ವಾಣಿಜ್ಯ ಎಲ್‌ಪಿಜಿ ದರ ಇಳಿಕೆ ಸ್ವಾಗತಾರ್ಹ

ಮಾನ್ಯರೆ,

ಭಾರತ ಅಭಿವೃದಿ ಹೊಂದುತ್ತಿರುವ ದೇಶವಾಗಿದ್ದು, ಆಯಾ ದಿನ ದುಡಿದು ತಿನ್ನುವ ಕುಟುಂಬಗಳೇ ಹೆಚ್ಚಾಗಿವೆ. ದುಡಿದ ಹಣ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ ಇದರಲ್ಲಿ ಉರುವಲಿಗಾಗಿ ಹಣ ವ್ಯಯಿಸುವುದು ಒಂದು ಹೊರೆಯಾಗಿದೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ನ ದರ 135 ರೂ. ಕಡಿಮೆಯಾಗಿರುವುದು ಫುಟ್‌ಪಾತ್ ಹೋಟೆಲ್ ವ್ಯಾಪಾರಿಗಳಿಗೆ ಮತ್ತು ಬಡ ಹಾಗೂ ಮಧ್ಯಮ ವರ್ಗದ ಕುಟುಂಬ ಗಳಿಗೆ ಕೊಂಚ ನೆಮ್ಮದಿಯನ್ನು ತಂದಿದೆ. ಕೆಲವು ದಿನಗಳ ಹಿಂದೆ ಉಜ್ವಲ ಯೋಜನೆಯಡಿ ಅಡುಗೆ ಅನಿಲ ದರವನ್ನು 200 ರೂ. ಕಡಿಮೆ ಮಾಡಲಾಗಿತ್ತು. ಪ್ರಸ್ತುತ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ ಕಡಿಮೆ ಮಾಡಿರುವುದು ಉತ್ತಮ ಬೆಳವಣಿಗೆ.

ಪ್ರಸ್ತುತ ಬೆಂಗಳೂರಿನಲ್ಲಿ ಎಲ್‌ಪಿಜಿ ಸಿಲಿಂಡರ್‌ನ ದರ 19 ಕೆ.ಜಿ ಸಿಲಿಂಡರ್‌ನ ಬೆಲೆ 2300 ರೂ ಮತ್ತು 14.2 ಕೆ.ಜಿ ಸಿಲಿಂಡರ್‌ನ ದರ 1006 ರೂಗೆ ಇಳಿದಿರುವುದಕ್ಕೆ ಸರ್ಕಾರಕ್ಕೆ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಪ್ರಾದೇಶಿಕ ಸಾರಿಗೆ (ಪಶ್ಚಿಮ) ಕಚೇರಿಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ

ಮಾನ್ಯರೆ,

ಮೈಸೂರಿನ ಬಲ್ಲಾಳ್ ವೃತ್ತದ ಬಳಿ ಇರುವ ಪ್ರಾದೇಶಿಕ ಸಾರಿಗೆ ಕಚೇರಿ (ಆರ್.ಟಿ.ಓ.) ಯಲ್ಲಿ ಮೂಲಭೂತ ಸೌಕರ್ಯಗಳಿಲ್ಲದೇ ಸಾರ್ವಜನಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯವಾಗಿ ಇಲ್ಲಿನ ಶೌಚಾಲಯ ವ್ಯವಸ್ಥೆ ಸಮರ್ಪಕವಾಗಿಲ್ಲ. ವಾಷ್ ಬೇಸಿನ್‌ನಲ್ಲಿ ನಲ್ಲಿಯೇ ಇಲ್ಲ. ಇಲ್ಲಿನ ಸಿಬ್ಬಂದಿಯ ಹತ್ತಿರ ನಮ್ಮ ಅಳಲನ್ನು ತೋಡಿಕೊಂಡರೆ ಅವರು ನಲ್ಲಿಯನ್ನು ಯಾರೋ ಕಳವು ಮಾಡಿದ್ದಾರೆಂದು ಹಾರಿಕೆಯ ಉತ್ತರ ನೀಡುತ್ತಾರೆ. ನಲ್ಲಿ ಇದ್ದರೆ ನೀರು ಯಾವಾಗಲೋ ಬರುತ್ತದೆ. ಇಲ್ಲಿಗೆ ದಿನನಿತ್ಯ ನೂರಾರು ಗ್ರಾಹಕರು ಭೇಟಿ ನೀಡುತ್ತಾರೆ. ಕನಿಷ್ಟ ಪಕ್ಷ ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲದಿದ್ದರೆ ಹೇಗೆ? ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ದಿನಗಳಲ್ಲಾದರೂ ಶೌಚಾಲಯ ವ್ಯವಸ್ಥೆಯನ್ನು ಸಮರ್ಪಕ ರೀತಿಯಲ್ಲಿ ಮಾಡುತ್ತಾರೆಂದು ಆಶಿಸೋಣವೇ?

–ವೆಂಕಟೇಶ ಗುಪ್ತ, ಹಿರಿಯ ನಾಗರೀಕ, ವಿಜಯನಗರ 3ನೇ ಹಂತ, ಮೈಸೂರು

ಪಂಜಾಬ್ ಸಿಎಂ ಭಗವಂತ್ ಮಾನ್ ಮಾದರಿ ನಿರ್ಧಾರ

ಮಾನ್ಯರೆ,

ಪಂಜಾಬ್ ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರ ಮೇಲೆ ಭ್ರಷ್ಟಾಚಾರದ ಆರೋಪ ಕೇಳಿ ಬಂದ ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವುದಲ್ಲದೇ, ಬಂಧನವಾಗುವಂತೆ ಮಾಡಿದ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರ ಕಾರ್ಯ ಇಡೀ ದೇಶವೇ ಹೆಮ್ಮೆಪಡುವಂಥದ್ದು. ಭ್ರಷ್ಟಾಚಾರದ ವಿಚಾರವು ಪ್ರತಿಪಕ್ಷಗಳಿಗೆ, ಮಾಧ್ಯಮಗಳಿಗೆ ಗೊತ್ತಾಗುವುದಕ್ಕಿಂತ ಮುನ್ನವೇ ತಮ್ಮದೇ ಸರ್ಕಾರದ ಸಚಿವರಾಗಿದ್ದವರ ಮೇಲೆ ಕಠಿಣ ನಿರ್ಧಾರ ತೆಗೆದುಕೊಂಡಿದ್ದು ಎಎಪಿ ಪಕ್ಷದ ಮೇಲೆ ದೇಶದ ಜನತೆ ಭರವಸೆ ಇಡುವಂತೆ ಮಾಡಿದೆ. ಆದರೆ, ಭ್ರಷ್ಟಾಚಾರದ ವಿರುದ್ಧವೇ ಸಮರ ಸಾರಿ ಎರಡು ರಾಜ್ಯಗಳಲ್ಲಿ ಅಧಿಕಾರದ ಗದ್ದುಗೆ ಏರಿರುವ ಎಎಪಿ ನಾಯಕರೂ ಅಧಿಕಾರ ಸಿಕ್ಕ ಕೆಲ ತಿಂಗಳುಗಳಲ್ಲೇ ಲಂಚದ ದುಡ್ಡಿಗೆ ಕೈಯೊಡ್ಡಿರುವುದನ್ನು ನೋಡಿದರೆ, ಯಾವುದೇ ಪಕ್ಷವೂ ಭ್ರಷ್ಟಾಚಾರದಿಂದ ಹೊರತಾಗಿಲ್ಲ ಎಂಬ ಮತ್ತೊಂದು ಕೆಟ್ಟ ಸಂದೇಶವೂ ರವಾನೆಯಾಗಿದೆ. ಹಾಗಾದರೆ ಚುನಾವಣೆಗೆ ಸ್ಪರ್ಧಿಸುವಾಗ ಇರುವ ನೈತಿಕತೆ ಚುನಾಯಿತರಾದ ಮೇಲೆ ಏಕೆ ಇರುವುದಿಲ್ಲ ಎಂಬ ಪ್ರಶ್ನೆ ಹುಟ್ಟುತ್ತದೆ. ಜನಪ್ರತಿನಿಧಿಗಳಿಗೆ ಸರ್ಕಾರ ಲಕ್ಷಾಂತರ ರೂಪಾಯಿ ಸಂಬಳ, ಭತ್ಯೆ ನೀಡಿದರೂ ಲಂಚದ ಹಣಕ್ಕೆ ಬಾಯಿ ಹಾಕಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ ಎಂದಾದರೆ ಈ ವ್ಯವಸ್ಥೆ ಸುಧಾರಣೆ ಸರಳ ಪ್ರಕ್ರಿಯೆ ಅಲ್ಲ. ಎಲ್ಲಾ ರಾಜ್ಯಗಳಲ್ಲೂ ಭಗವಂತ್ ಮಾನ್ ಅವರಂತಹ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವ ಮನಸ್ಥಿತಿಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದರೆ ಮಾತ್ರ ಇದು ಸಾಧ್ಯ. ಗುತ್ತಿಗೆದಾರರಿಂದ ಸಚಿವರು ಕಮಿಷನ್ ಬೇಡಿಕೆ ಇಟ್ಟ ವಿಷಯ ರಾಜ್ಯದಲ್ಲೂ ಇತ್ತೀಚೆಗೆ ಭಾರೀ ಸದ್ದು ಮಾಡಿತ್ತು ಆರೋಪ ಎದುರಿಸಿದ್ದ ಸಚಿವರು ರಾಜೀನಾಮೆಯೇನೋ ನೀಡಿದರು. ಆದರೆ ಈ ಪ್ರಕರಣ ಏನಾಯಿತು ಎಂಬುದು ಗೌಪ್ಯವಾಗಿಯೇ ಇದೆ. ರಾಜೀನಾಮೆ ನೀಡಿದ ಸಚಿವರ ವಿರುದ್ಧ ಈವರೆಗೂ ಯಾವ ತನಿಖಾ ಸಂಸ್ಥೆಗಳೂ ಕ್ರಮ ವಹಿಸಿಲ್ಲ. ರಾಜ್ಯದ ಬಹುತೇಕ ಇಲಾಖೆಗಳಲ್ಲಿ ಲಂಚದ ಹಾವಳಿ ಇನ್ನೂ ನಡದೇ ಇದೆ. ಆದರೆ ಯಾರೂ ಪಂಜಾಬ್ ಮಾದರಿಯಲ್ಲಿ ಕ್ರಮ ಕೈಗೊಂಡಿಲ್ಲ. ಪಂಜಾಬ್ ಸಿಎಂ ನಿರ್ಧಾರ ಎಲ್ಲ ರಾಜಕೀಯ ಪಕ್ಷಗಳಿಗೆ, ಜನಪ್ರತಿನಿಧಿಗಳಿಗೆ ಎಚ್ಚರಿಕೆ ಗಂಟೆಯಾಗಬೇಕು. ವ್ಯವಸ್ಥೆ ಸುಧಾರಣೆಯಾಗಬೇಕಾದರೆ ಗಟ್ಟಿ ನಿರ್ಧಾರಗಳನ್ನು ತೆಗೆದುಕೊಳ್ಳಲೇಬೇಕು.



–ಬೇ.ನ. ಶ್ರೀನಿವಾಸಮೂರ್ತಿ, ಹಿರಿಯ ನಾಗರಿಕರು, ತುಮಕೂರು.

ಬಹುಮುಖಿ



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ನಾಡು ಕಟ್ಟಿದ ನಾಲ್ವಡಿ

1910ರ ದಶಕ. ಆಳರಸರ ದರ್ಬಾರಿನಲ್ಲಿ 'ಮೈಸೂರು ದಸರಾ' ವೈಭವದಿಂದ ನಡೆಯುತ್ತಿದ್ದ ಕಾಲವದು. ಆಗ ನವರಾತ್ರಿಯ ಸಂದರ್ಭದಲ್ಲಿ ಯೂರೋಪಿಯನ್ನರಿಗಾಗಿ ವಿಶೇಷ ದರ್ಬಾರು ನಡೆಯುತ್ತಿತ್ತು. ದಿವಾನರಾದಿಯಾಗಿ ಅಲ್ಲಿ ಎಲ್ಲಾ ಗಣ್ಯರೂ ಕೆಳಗೆ ಕೂರುವುದು ಮತ್ತು ಯೂರೋಪಿಯನ್ನರು ಹಾಗೂ ಅತಿಥಿಗಳು ಮಾತ್ರ ವಿಶೇಷವಾದ ಕುರ್ಚಿಯ ಮೇಲೆ ಕೂರುವುದು ಬಹುಕಾಲದಿಂದ ನಡೆದು ಬಂದ ಪದ್ಧತಿಯಾಗಿತ್ತು. ಆದರೆ ಅಂದಿನ ಮಹಾರಾಜರಿಗೆ ಈ ತಾರತಮ್ಯತೆ ಸರಿ ಎನಿಸಲಿಲ್ಲ. ತಕ್ಷಣವೇ ತಲತಲಾಂತರದಿಂದ ನಡೆದು ಬಂದಿದ್ದ ಈ ತಾರತಮ್ಯತೆಗೆ ತಿಲಾಂಜಲಿಯಿತ್ತು ಎಲ್ಲರೂ ಸಮಾನವಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆಗೆ 1910ರಲ್ಲಿ ನಾಂದಿ ಹಾಡಿದರು. ಆ ಕಾಲದಲ್ಲಿದು ಬಹುದೊಡ್ಡ ವಿಷಯವಾಗಿ ಮೈಸೂರಿಗೆ ಮೈಸೂರೇ ಇಂಥ ಸಮಾನ ನೀತಿಜ್ಞ ಮಹಾರಾಜರ ಸಮಾನ ಸಮಾಜದ ಪ್ರಗತಿಪರ ದೃಷ್ಟಿಯನ್ನು ಮನಸಾರೆ ಮೆಚ್ಚಿಕೊಂಡಾಡಿತ್ತು.

ಇದೇ ಮಹಾರಾಜರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂದು ಅರಮನೆಯೊಳಗಿನ ದರ್ಬಾರಿಗೆ ದಲಿತರಿಗೆ ಪ್ರವೇಶವಿಲ್ಲದಂತಿದ್ದ ಕಟ್ಟುಪಾಡನ್ನು ಸ್ವತಃ ತಾವೇ ಮುರಿದು, ದಲಿತರೂ ನಮ್ಮಂತೆಯೇ ಮನುಷ್ಯರೇ ಆಗಿರುವಾಗ ಇಲ್ಲಿ ಬೇಧ-ಭಾವ ಕೂಡದೆಂದರು. ಅಂತೆಯೇ 1936ರಲ್ಲಿ ನಡೆದ ದಸರಾ ಮಹೋತ್ಸವದ ದರ್ಬಾರಿನಲ್ಲಿ ದಲಿತರಿಗೆ ಎಲ್ಲಾ ಸಂದರ್ಭಗಳಲ್ಲೂ ಭಾಗವಹಿಸುವ ಅವಕಾಶ ಕಲ್ಪಿಸಿ, ಮನುಷ್ಯರೆಲ್ಲಾ ಒಂದೇ ಎಂದು ಅವರನ್ನೂ ಗೌರವಿಸಿ ಮಾನವ ಕುಲ ತಾನೊಂದೇ ಎಂದು ಜಗತ್ತಿಗೆ ಸಾರಿ ಸಮಾನತೆಯ ಬೆಳಕು ಚೆಲ್ಲಿದ್ದರು. ಆ ಮಹಾರಾಜರೇ ಎಂದೆಂದಿಗೂ ನಾಡು ಮರೆಯದ ನಾಲ್ವಡಿ ಕೃಷ್ಣರಾಜ ಒಡೆಯರ್!

ದೇಶದ ಯಾವ ಸಂಸ್ಥಾನದ ಮಹಾರಾಜರಿಗೂ ಅಂದು ಇರದಿದ್ದ ಸಮಾನ ನೀತಿ ಅಂದಿನ ಕಾಲದಲ್ಲೇ ಇವರಲ್ಲಿದ್ದು ಸಮಾನತೆಯ ಹರಿಕಾರರಾಗಿ ಎಲ್ಲರಿಗೂ ಮಾದರಿಯಾಗಿದ್ದ ಮಹಾರಾಜರಾಗಿದ್ದರು. ಇದಕ್ಕಾಗಿಯೇ ಇವರನ್ನು ಗಾಂಧೀಜಿ ಅವರು 'ರಾಜರ್ಷಿ' ಎಂದು ಕರೆದು ಕೊಂಡಾಡಿದ್ದಾರೆ. ಹಾಗೆಯೇ ದಸರಾ ದರ್ಬಾರಿಗೆ ದಲಿತರಿಗೆ ಮುಕ್ತ ಅವಕಾಶ ನೀಡಿ ಅಸ್ಪೃಶ್ಯತೆ ಅಳಿಸಲು ಮುಂದಾದ ಇವರ 'ಸಮಾನ ನೀತಿಜ್ಞ' ಆಡಳಿತವನ್ನು 1938ರ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ವಿಶೇಷ ಸಂಪುಟದಲ್ಲಿ ಬಗೆಬಗೆಯಾಗಿ ಬಣ್ಣಿಸಿ ಶ್ಲಾಘಿಸಲಾಗಿದೆ. ಅಂತೆಯೇ ಪ್ಲೇಟೋನ 'ರಿಪಬ್ಲಿಕ್' ಗ್ರಂಥದಲ್ಲಿ ಆದರ್ಶ ತತ್ವಜ್ಞಾನಿ ರಾಜ ಇವರೆಂದು ಪಾಲ್‌ಬ್ರಂಟನ್ ಮೆಚ್ಚುಗೆ ವ್ಯಕ್ತಪಡಿಸಿದ್ದರೆ, ಬ್ರಿಟಿಷ್ ರಾಜನೀತಿಜ್ಞ ಲಾರ್ಡ್ ಸ್ಯಾಮ್ಯುಯೆಲ್ ಇವರನ್ನು ಅಶೋಕ ಚಕ್ರವರ್ತಿಗೆ ಹೋಲಿಸಿದ್ದಾರೆ. ಅಷ್ಟೇ ಅಲ್ಲ ದೇಶ ವಿದೇಶಗಳ ಗಣ್ಯರನೇಕರು 'ರಾಜರ್ಷಿ' ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಆಡಳಿತವನ್ನು ರಾಮರಾಜ್ಯ ಎಂದು ಪ್ರಶಂಸಿಸಿರುವುದು ಇತಿಹಾಸದ ಪುಟಗಳಲ್ಲಿದೆ.

ನಾಡಿನ ಭವ್ಯ ಪರಂಪರೆಯನ್ನು ಉಳಿಸಿ, ಬೆಳೆಸಿ, ಬೆಳಗಿಸಿ, ದೇಶದ ಸಂಸ್ಕೃತಿ ಕಲೆ ಅಳಿಸಿ ಹೋಗದಂತೆ ಕಾಪಾಡಿದ ಮಹಾನ್ ವ್ಯಕ್ತಿ ಮತ್ತು ಸಮಾನ ಸಮಾಜದ ಸಮಾನತಾದೃಷ್ಟಿ ಹೊಂದಿದ್ದ ಮಹಾನ್ ಆದರ್ಶವಾದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಿಸಿದ್ದು 1884ರ ಜೂನ್ 4ರಂದು. ಮೈಸೂರು ರಾಜ್ಯವನ್ನು ಆಳಿದ ಯದುವಂಶದ 23ನೇ ಮಹಾರಾಜರಾದ ಹತ್ತನೆಯ ಚಾಮರಾಜ ಒಡೆಯರ್ ಮತ್ತು ಮಹಾರಾಣಿ ವಾಣಿವಿಲಾಸ ಸನ್ನಿಧಿ ದಂಪತಿಗಳ ಜೇಷ್ಠಪುತ್ರರಾದ ಇವರು ಹುಟ್ಟಿದ್ದು 1886ರಲ್ಲಿ ಬೆಂಕಿಗೆ ಆಹುತಿಯಾದ ಮೈಸೂರಿನ ಹಿಂದಿನ ಹಳೆಯ ಅರಮನೆಯಲ್ಲಿ. ನಂತರದ ದಿನಗಳಲ್ಲಿ ಇವರ ತಾಯಿ ವಾಣಿವಿಲಾಸ ಸನ್ನಿಧಿಯವರೇ ಈಗಿರುವ ಜಗದ್ವಿಖ್ಯಾತ ಮೈಸೂರು ಅರಮನೆಯನ್ನು ಭವ್ಯವಾಗಿ ನಿರ್ಮಿಸಿದರು. ಇದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯ ಅಭೂತಪೂರ್ವ ಸಾಧನೆಯೂ ಹೌದು!


1894ರಲ್ಲಿ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆ ಹತ್ತನೇ ಚಾಮರಾಜ ಒಡೆಯರ್ ಅಕಾಲಿಕ ಮರಣಕ್ಕೆ ತುತ್ತಾದಾಗ ಇವರ ತಾಯಿ ಮಹಾರಾಣಿ ವಾಣಿವಿಲಾಸರು ಕೆಲವು ಕಾಲ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದ್ದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿದ್ಯಾಭ್ಯಾಸ ರಾಜಶಾಲೆಯಲ್ಲಿ ಆರಂಭವಾಗಿತ್ತು. ಇವರು ಪಾಶ್ಚಾತ್ಯ ಅಧ್ಯಯನದ ಜೊತೆಗೆ ಕನ್ನಡ ಮತ್ತು ಸಂಸ್ಕೃತವನ್ನು ಕಲಿತರು. ಬಾಂಬೆ ಸಿವಿಲ್ ಸರ್ವೀಸ್‌ನ ಸರ್ ಸ್ಟೂಯೆರ್ಟ್ ಫ್ರೇಸರ್ ಇವರಿಗೆ ಆಡಳಿತದ ಬಗ್ಗೆ ತರಬೇತಿ ನೀಡಿದ್ದರು. ಆ ಸಂದರ್ಭದಲ್ಲೇ ತಮಗೆ ಬೇಕಾದ ಕುದುರೆ ಸವಾರಿ, ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ ಸೇರಿದಂತೆ ಸಕಲ ಕಲಾ ಶಿಕ್ಷಣವನ್ನೂ ತಮ್ಮದಾಗಿಸಿಕೊಂಡ ನಾಲ್ವಡಿಯವರು ರಾಜ್ಯಾಡಳಿತದ ಚುಕ್ಕಾಣಿ ಹಿಡಿಯಲು ಸರ್ವ ಅರ್ಹತೆಯನ್ನೂ ಪಡೆದುಕೊಂಡು 1902ರ ಆಗಸ್ಟ್ 8ರಂದು ವೈಸ್‌ರಾಯ್ ಲಾರ್ಡ್ ಕರ್ಜನ್ ಅವರಿಂದ ಆಡಳಿತದ ಪೂರ್ಣಾಧಿಕಾರ ತೆಗೆದುಕೊಂಡರು. ಅಲ್ಲಿಂದ ಶುರುವಾಯಿತು ಮೈಸೂರು ಸಂಸ್ಥಾನದ 24ನೇ ಮಹಾರಾಜರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಸುವರ್ಣ ಕಾಲ.

ಮೈಸೂರು ಸಂಸ್ಥಾನವನ್ನು ಆಳಿದ 25 ಮಂದಿ ಮಹಾರಾಜರ ಪೈಕಿ ಅಭಿವೃದ್ಧಿಯ ರಥ ಚಲಿಸಿದ್ದು ನಾಲ್ವಡಿ ಕಾಲದಲ್ಲೇ ಹೆಚ್ಚು. ಹಾಗಾಗಿ ಮೈಸೂರು ಆಳರಸರ ನೂರಾರು ಅತ್ಯದ್ಭುತ ಮಹತ್ಸಾಧನೆಗಳಲ್ಲಿ ಇವರದೇ ಸಿಂಹಪಾಲು. ಇಡೀ ಏಷ್ಯಾದಲ್ಲೇ ಮೊದಲಿಗೆ 1905ರಲ್ಲಿ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನೆ ಆರಂಭಿಸಿದ ಕೀರ್ತಿಯ ಜೊತೆಗೆ 1905ರ ಆಗಸ್ಟ್ 5ರಲ್ಲಿ ಬೆಂಗಳೂರಿಗೆ ವಿದ್ಯುತ್ ಬೀದಿ ದೀಪಗಳನ್ನು ಬೆಳಗಿಸಿ ವಿದ್ಯುತ್ ಬೀದಿದೀಪಗಳನ್ನು ಪಡೆದ ಏಷ್ಯಾದ ಮೊದಲ ನಗರವೆಂಬ ಹೆಗ್ಗಳಿಕೆಯನ್ನು ಬೆಂಗಳೂರಿಗೆ ತಂದುಕೊಟ್ಟರು. ಅಂತೆಯೇ ಶಿವನಸಮುದ್ರ ಜಲವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಇದು ಏಷ್ಯಾದಲ್ಲೇ ಪ್ರಥಮ ಪ್ರಯೋಗವಾಗಿದೆ. ಹಾಗೆಯೇ ಇವರ ದೂರದೃಷ್ಟಿಯ ಫಲವಾಗಿ 1911ರಲ್ಲಿ ಆರಂಭಿಸಿ 1932ರಲ್ಲಿ ಸಂಪೂರ್ಣಗೊಂಡು ನಿರ್ಮಿಸಲ್ಪಟ್ಟ ಕೆಆರ್‌ಎಸ್ ಎಂದೇ ವಿಶ್ವವಿಖ್ಯಾತಿ ಹೊಂದಿರುವ ಕನ್ನಂಬಾಡಿ ಕಟ್ಟೆ ಅಂದಿನಿಂದ ಇಂದಿಗೂ ಲಕ್ಷಾಂತರ ರೈತರ ಪಾಲಿಗೆ ಅಕ್ಷಯಪಾತ್ರೆಯಾಗಿದೆ.

> **ಮೈಸೂರು ಸಂಸ್ಥಾನವನ್ನು ಆಳಿದ 25 ಮಂದಿ ಮಹಾರಾಜರ ಪೈಕಿ ಅಭಿವೃದ್ಧಿಯ ರಥ ಚಲಿಸಿದ್ದು ನಾಲ್ವಡಿ ಕಾಲದಲ್ಲೇ ಹೆಚ್ಚು. ಹಾಗಾಗಿ ಮೈಸೂರು ಆಳರಸರ ನೂರಾರು ಅತ್ಯದ್ಭುತ ಮಹತ್ಸಾಧನೆಗಳಲ್ಲಿ ಇವರದೇ ಸಿಂಹಪಾಲು. ಇಡೀ ಏಷ್ಯಾದಲ್ಲೇ ಮೊದಲಿಗೆ 1905ರಲ್ಲಿ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನೆ ಆರಂಭಿಸಿದ ಕೀರ್ತಿಯ ಜೊತೆಗೆ 1905ರ ಆಗಸ್ಟ್ 5ರಲ್ಲಿ ಬೆಂಗಳೂರಿಗೆ ವಿದ್ಯುತ್ ಬೀದಿ ದೀಪಗಳನ್ನು ಬೆಳಗಿಸಿ ವಿದ್ಯುತ್ ಬೀದಿದೀಪಗಳನ್ನು ಪಡೆದ ಏಷ್ಯಾದ ಮೊದಲ ನಗರವೆಂಬ ಹೆಗ್ಗಳಿಕೆಯನ್ನು ಬೆಂಗಳೂರಿಗೆ ತಂದು ಕೊಟ್ಟರು. ಅಂತೆಯೇ ಶಿವನಸಮುದ್ರ ಜಲವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು ಇದು ಏಷ್ಯಾದಲ್ಲೇ ಪ್ರಥಮ ಪ್ರಯೋಗವಾಗಿದೆ.**

1913ರಲ್ಲಿ ಎಲ್ಲರಿಗೂ ಕಡ್ಡಾಯ ಶಿಕ್ಷಣ ಮತ್ತು ಉಚಿತ ಶಿಕ್ಷಣದ ಆದೇಶ ಹೊರಡಿಸಿದ ಖ್ಯಾತಿಯೂ ಇವರದ್ದೇ ಆಗಿದೆ. ಭಾರತೀಯ ರಾಜ್ಯವೊಂದು ಆರಂಭಿಸಿದ ಮೊದಲ ವಿಶ್ವವಿದ್ಯಾಲಯವೆಂಬ ಹಿರಿಮೆಯೊಡನೆ 1916ರ ಜುಲೈ 27ರಂದು ಇವರು ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯ ಇಂದು ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯವಾಗಿದೆ. ಇದರ ಪ್ರಥಮ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬನಾರಸ್ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿಯೂ ಸೇವೆಗೈದು ತಮ್ಮ ಶೈಕ್ಷಣಿಕ ಸಾಧನೆಯನ್ನು ಮೆರೆದಿದ್ದಾರೆ. 1918ರಲ್ಲಿ ದೇಶದಲ್ಲೇ ಮೊದಲಿಗೆ ನ್ಯಾಯಮೂರ್ತಿ ಮಿಲ್ಲರ್ ಅಧ್ಯಕ್ಷತೆಯಲ್ಲಿ ಹಿಂದುಳಿದ ಆಯೋಗ ರಚಿಸಿ ಮೀಸಲಾತಿಯನ್ನು ಜಾರಿಗೆ ತಂದಿದ್ದ ಕೀರ್ತಿ ಇವರದು.

ಮತದಾನದ ಸಮಯದಲ್ಲಿ ಬೆರಳಿಗೆ ಹಚ್ಚುವ ಬಣ್ಣವನ್ನು ತಯಾರಿಸುವ ದೇಶದ ಏಕೈಕ ಕಾರ್ಖಾನೆಯಾದ ಮೈಸೂರಿನ ಅರಗು ಮತ್ತು ಬಣ್ಣದ ಕಾರ್ಖಾನೆಯನ್ನು 1937ರಲ್ಲಿ ಸ್ಥಾಪಿಸಿದ ಮತ್ತು ಆಗಿನ ಕಾಲಕ್ಕೆ ಇಡೀ ದೇಶದಲ್ಲೇ ಬೃಹತ್ ವಾಣಿಜ್ಯ ಸಂಕೀರ್ಣವೆಂದು ಕರೆಯಲಾದ 882ಅಡಿ ಉದ್ದ ಹಾಗೂ 180ಅಡಿ ಅಗಲದ 726 ಮಳಿಗೆಗಳುಳ್ಳ ದೇವರಾಜ ಮಾರುಕಟ್ಟೆಯನ್ನು 1903ರಲ್ಲಿ ನಿರ್ಮಿಸಿದ ಹೆಗ್ಗಳಿಕೆಯೂ ಇವರದ್ದೆ. ಅಂತೆಯೇ 1906ರಲ್ಲಿ ಚಾಮರಾಜೇಂದ್ರ




ಇಂಜಿನಿಯರಿಂಗ್ ಸಂಸ್ಥೆ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್, 1916ರಲ್ಲಿ ಶ್ರೀಗಂಧದೆಣ್ಣೆ ಕಾರ್ಖಾನೆ, 1930ರಲ್ಲಿ ಮೈಸೂರು ಮೆಡಿಕಲ್ ಕಾಲೇಜು, 1921ರಲ್ಲಿ ತಮ್ಮ ಸೋದರಿ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಹೆಸರಿನಲ್ಲಿ ಪಿ.ಕೆ.ಸ್ಯಾನಿಟೋರಿಯಂ ನಿರ್ಮಿಸಿದ ಗರಿಮೆ ಕೂಡ ಇವರದೇ. ಇವಿಷ್ಟೇ ಸಾಕು, ಸಾವಿರ ಉದಾಹರಣೆ ನೀಡಬೇಕಾಗಿಲ್ಲ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಗಳನ್ನು ಸಾರಲು. ಆಶ್ಚರ್ಯವೆಂದರೆ 1903ರಲ್ಲೇ ಮೈಸೂರು ನಗರದ ವ್ಯವಸ್ಥಿತ ಅಭಿವೃದ್ಧಿಗಾಗಿ ದೇಶದಲ್ಲೇ ಮೊಟ್ಟಮೊದಲಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಇವರು ಸ್ಥಾಪಿಸಿದ್ದರು.

ಮೈಸೂರು ನಗರಕ್ಕೆ ಅರಮನೆಗಳ ನಗರಿ ಎಂಬ ಖ್ಯಾತಿ ಬರಲು ಬಹುಮುಖ್ಯ ಕಾರಣರು ನಾಲ್ವಡಿಯವರು ಇಂದಿಗೂ ಒಂದೊಂದು ಅರಮನೆಯೂ ಒಂದೊಂದು ಕಥೆ ಹೇಳುತ್ತದೆ. ಮೈಸೂರಿನಲ್ಲಿ ಮಿನುಗುತ್ತಿರುವ ಲಲಿತಮಹಲ್ ಅರಮನೆ, ಚೆಲುವಾಂಬ ವಿಲಾಸ್ ಅರಮನೆ, ಜಯಲಕ್ಷ್ಮಿ ವಿಲಾಸ ಅರಮನೆ, ರಾಜೇಂದ್ರವಿಲಾಸ್ ಅರಮನೆ, ಕಾರಂಜಿ ವಿಲಾಸ್ ಅರಮನೆಗಳು ನಾಲ್ವಡಿ ಅವರು ನಿರ್ಮಿಸಿದ್ದೇ ಆಗಿವೆ.

ಮೈಸೂರು ಮತ್ತು ಇದರ ಸುತ್ತಮುತ್ತ ಪುಟ್ಟ ಪುಟ್ಟ ಅರಮನೆಗಳಂತೆ ಕಂಗೊಳಿಸುತ್ತಿರುವ ಪುರಭವನ, ಕ್ರಾಫರ್ಡ್ ಭವನ, ವಿಶ್ವೇಶ್ವರಯ್ಯ ಕಟ್ಟಡ, ಲ್ಯಾನ್ಸ್‌ಡೌನ್ ಕಟ್ಟಡ, ದೊಡ್ಡ ಗಡಿಯಾರ, ಜನತಾ ಬಜಾರ್ ಕಟ್ಟಡ, ಗನ್‌ಹೌಸ್, ಮಹಾನಗರ ಪಾಲಿಕೆ ಕಟ್ಟಡ, ಕೃಷಿ ಇಲಾಖೆ ಕಟ್ಟಡ, ವಾಣಿವಿಲಾಸ ಮಾರುಕಟ್ಟೆ ಮುಂತಾದ ಭವ್ಯ ಭವನಗಳೂ ಇವರ ಕೊಡುಗೆಯೇ. 1914ರಲ್ಲಿ 'ಎಕನಾಮಿಕ್ ಜರ್ನಲ್' ಎಂಬ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಆರಂಭಿಸಿದ್ದ ಇವರು ಪತ್ರಿಕೋದ್ಯಮಕ್ಕೂ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ.

1900ರಲ್ಲಿ ಕಾಥೇವಾಡದ ರಾಜಕುಮಾರಿ ಪ್ರತಾಪಕುಮಾರಿಬಾಯಿ ಅವರೊಡನೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಅದ್ಧೂರಿ ವಿವಾಹ ಸಮಾರಂಭದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದ ನಾಲ್ವಡಿ ಅವರು ತಮ್ಮ ಆಳ್ವಿಕೆಯಲ್ಲಿ 25 ವರ್ಷ ಪೂರೈಸಿದ ಧ್ಯೋತಕವಾಗಿ ರಜತ ಮಹೋತ್ಸವವನ್ನು ಅಷ್ಟೇ ಭವ್ಯವಾಗಿ ಆಚರಿಸಿಕೊಂಡಿದ್ದರು.

'ರಾಜ ಪ್ರತ್ಯಕ್ಷ ದೈವ' ಎಂಬ ಮಾತಿಗೆ ಅನ್ವರ್ಥವಾಗಿ ಬಾಳಿ ಬದುಕಿದ್ದ ಇವರು 1940 ಆಗಸ್ಟ್ 3ರಂದು ಇನ್ನಿಲ್ಲವಾದರೂ ಕೂಡ ತಮ್ಮ ಪ್ರಜಾಪರ ಸಾಧನೆಗಳ ಮೂಲಕ ಅವರಿನ್ನೂ ನಾಡಿನಲ್ಲಿ ಜೀವಂತವಾಗಿಯೇ ಇದ್ದಾರೆ. ರೈತರ ಬಾಳನ್ನು ಹಸಿರುಗೊಳಿಸಿ, ಹಸನುಗೊಳಿಸಲು ಇವರು ಕಟ್ಟಿದ ಕನ್ನಂಬಾಡಿ ಕಟ್ಟೆಯ ಭೋರ್ಗರೆತ ಕಂಡಾಗ ಅದೂ ಸಹ ನಾಲ್ವಡಿ ಕೃಷ್ಣರಾಜ ಒಡೆಯರು ಅಮರರು, ಅಜರಾಮರರೆಂದು ಸಾರಿ ಸಾರಿ ಹೇಳುತ್ತಿರುವಂತೆ ಭಾಸವಾಗುತ್ತದೆ. ನಾಡಿಗೆ ಬೆಳಕು ನೀಡಲು ಇವರು ಸ್ಥಾಪಿಸಿರುವ ಶಿವನಸಮುದ್ರದ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಕಂಡರೆ ಅದೂ ಕೂಡ ನಾಲ್ವಡಿಯವರು ಬೆಳಕಲ್ಲಿ ಬೆಳಕಾಗಿ ನಮ್ಮೊಳಗಿದ್ದಾರೆಂದು ನುಡಿಯುತ್ತಿದೆಯೇನೋ ಎನಿಸುತ್ತದೆ. ಏಕೆಂದರೆ, ಇವೆರಡೂ ನಾಡಿಗೆ ನಾಲ್ವಡಿಯವರ ಅಂಥಾ ಅದ್ಭುತ ಕೊಡುಗೆಗಳು.



ಸರ್ಕಾರಿ ಶಾಲೆಯ ಏಕ್ತಾಳದ್ದು ಅದ್ವಿತೀಯ ಸಾಧನೆ: ನೌಕಾಪಡೆಗೆ ಸೇರುವ ಮಹದಾಸೆ

ಪುತ್ರಿಯ ಸಾಧನೆಗೆ ಕೊಡಗಿನ ಪೋಷಕರ ಹೆಮ್ಮೆ

ಮೈಸೂರು, ಜೂ.2(ಎಂಕೆ)– ಕಷ್ಟಪಟ್ಟು ಇಂಜಿನಿಯರಿಂಗ್ ಓದಿ ನೌಕಾಪಡೆಗೆ ಸೇರಿ ದೇಶ ಸೇವೆ ಮಾಡುವುದೇ ನನ್ನ ಗುರಿ ಎನ್ನುವ ಕೊಡವರ ಕುವರಿ ಎಂ.ಜಿ.ಏಕ್ತಾ, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆಗಳೇನು ಕಡಿಮೆಯಿಲ್ಲ ಎಂಬುದನ್ನು ಸಾಬೀತು ಮಾಡಿದ್ದಾರೆ.

ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯ(ಆಂಗ್ಲ ಮಾಧ್ಯಮ)ದ ವಿದ್ಯಾರ್ಥಿನಿ ಎಂ.ಜಿ.ಏಕ್ತಾ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ವಿಶೇಷವೆಂದರೆ ಈ ಶಾಲೆಯಲ್ಲಿ 625 ಅಂಕ ಪಡೆದ ಮೊದಲ ವಿದ್ಯಾರ್ಥಿನಿ ಎಂಬ ಹಿರಿಮೆ ಗಳಿಸಿದ್ದಾರೆ.

ಮೂಲತಃ ಮಡಿಕೇರಿ ತಾಲೂಕಿನ ಬಿಳಿಗೆರೆಯವರಾದ ಮಡೆಯಂಡ ಎಸ್ ಗಂಗಮ್ಮ (ಎಂ.ಎಸ್. ಗಂಗಮ್ಮ) ಹಾಗೂ ಕೊಡಗಿನಿಂದ ಬಂದು ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿ ನೆಲೆಸಿ, ಎಲ್‌ಐಸಿ ಏಜೆಂಟ್ ಆಗಿರುವ ಮಂಡುಹೊಂಡ ಸಿ.ಗಣಪತಿ (ಎಂ.ಸಿ.ಗಣಪತಿ) ದಂಪತಿಯ ಹಿರಿಯ ಪುತ್ರಿಯಾದ ಏಕ್ತಾಳದ್ದು ಒಂದೇ ಗುರಿ. ಅದು ನೌಕಾಪಡೆಗೆ ಸೇರಿ ದೇಶಸೇವೆ ಮಾಡ ಬೇಕು ಎಂಬುದಾಗಿದೆ.

ತಂದೆ–ತಾಯಿ ಪ್ರೋತ್ಸಾಹ, ಶಿಕ್ಷಕರ ಸಹಕಾರ ಹಾಗೂ ನಿರಂತರ ಓದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆಯಲು ಸಾಧ್ಯವಾಯಿತು ಎನ್ನುವ ಏಕ್ತಾ, ತಮ್ಮ ಮುಂದಿನ ಗುರಿ ಜೊತೆಗೆ ಸವಾಲೊಂದನ್ನು ಗೆಲ್ಲಲು ಪಟ್ಟ ಪರಿಶ್ರಮ, ಗೆದ್ದ ಬಳಿಕ ಆದ ಖುಷಿಯನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ಒತ್ತಡವಿಲ್ಲದ ನಿರಂತರ ಓದು: ಮನೆಯಲ್ಲಿ ಓದು ಓದು ಎಂಬ ಒತ್ತಡ ಏರುತ್ತಿರಲಿಲ್ಲ. ಬದಲಿಗೆ ಆಗಾಗ ಅಪ್ಪ–ಅಮ್ಮ ಪ್ರಶ್ನೆ ಕೇಳುತ್ತಿದ್ದರೇ ಹೊರತು ಇಷ್ಟು ಹೊತ್ತು, ಅಷ್ಟು ಹೊತ್ತು ಓದಬೇಕು ಎನ್ನುತ್ತಿರಲಿಲ್ಲ. ಶಾಲೆಯಲ್ಲಿ ಎಲ್ಲಾ ಶಿಕ್ಷಕರು ಚೆನ್ನಾಗಿ ಹೇಳಿಕೊಡುತ್ತಿದ್ದರು. ಮಾದರಿ ಪ್ರಶ್ನೆ ಪತ್ರಿಕೆಗಳನ್ನು ನೀಡಿ, ಅಭ್ಯಾಸ ಮಾಡಿಸುತ್ತಿದ್ದರು. ಇದರಿಂದಲೇ ಎಲ್ಲಾ ವಿಷಯದಲ್ಲೂ ಗರಿಷ್ಟ ಅಂಕಗಳನ್ನು ಪಡೆಯಲು ಸಾಧ್ಯವಾಯಿತು. ಮುಂದೆ ಇಂಜಿನಿಯರಿಂಗ್ ಮಾಡಿ ನೌಕಾಪಡೆಗೆ ಸೇರಬೇಕು ಎನ್ನುವುದೇ ನನ್ನ ಗುರಿ ಎಂದ ಏಕ್ತಾ ಶಾಸಕ ರಾಮದಾಸ್ ಅವರು ನಮ್ಮ ಶಾಲೆಗೆ ಬಂದಿದ್ದ ವೇಳೆ ಟಾಪರ್ ಆದ ವಿದ್ಯಾರ್ಥಿ ಕುಟುಂಬಕ್ಕೆ ನಿವೇಶನ ನೀಡುವುದಾಗಿ ಹೇಳಿದ್ದರು. ಅವರ ಹೇಳಿದ್ದನ್ನೇ ಸವಾಲಾಗಿಸಿಕೊಂಡು ಓದಿದೆ ಎಂದು ತಮ್ಮ ಯಶಸ್ಸಿನ ಗುಟ್ಟನ್ನು ಹಂಚಿಕೊಂಡರು.

ಅತ್ಯುತ್ತಮ ಶಾಲೆ: ಆದರ್ಶ ವಿದ್ಯಾಲಯದ ವಾತಾವರಣ, ವಿದ್ಯಾಭ್ಯಾಸ ತುಂಬಾ ಚೆನ್ನಾಗಿದೆ. ಸರ್ಕಾರಿ ಆದರ್ಶ ವಿದ್ಯಾಲಯ ಯಾವುದೇ ಖಾಸಗಿ ಶಾಲೆಗಳಿಗೂ ಕಮ್ಮಿ ಇಲ್ಲ. ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನಮ್ಮ ಮಗಳಿಗೆ ದೊರೆತಿದೆ. ಆರ್ಥಿಕವಾಗಿ ಕಷ್ಟದ ಪರಿಸ್ಥಿತಿಯಲ್ಲಿದ್ದಾಗ ಸರ್ಕಾರಿ ಶಾಲೆ ನಮ್ಮ ಮಕ್ಕಳ ಕೈ ಹಿಡಿದಿದೆ. ಖಾಸಗಿ ಶಾಲೆಯಿಂದ ಪ್ರವೇಶ ಪರೀಕ್ಷೆ ಬರೆಸಿ, ಆದರ್ಶ ವಿದ್ಯಾಲಯಕ್ಕೆ ಸೇರಿಸಲಾಯಿತು. ಮಗಳ ಆಸೆಯಂತೆ ನೌಕಾಪಡೆಗೆ ಸೇರಿಸುತ್ತೇವೆ. ಇಲ್ಲವೆ ಮೆಡಿಕಲ್ ಓದುವೆ ಎಂದರೆ ಕಷ್ಟವಾದರೂ ಓದಿಸುತ್ತೇನೆ ಎಂದು ಏಕ್ತಾ ತಂದೆ ಎಂ.ಸಿ.ಗಣಪತಿ ತಮ್ಮ ಮನದಾಸೆಯನ್ನು ಬಿಚ್ಚಿಟ್ಟರು.

ಏಕ್ತಾಳನ್ನು ಬೇರೆ ಮಕ್ಕಳೊಂದಿಗೆ ಹೋಲಿಸಿಲ್ಲ: ಮಕ್ಕಳಲ್ಲಿ ಓದುವ ಹವ್ಯಾಸವನ್ನು ಹೆಚ್ಚಿಸಬೇಕೇ ಹೊರತು ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡಬಾರದು. ನಾವು ಎಂದೂ ಏಕ್ತಾಳನ್ನು ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡಿಲ್ಲ. ಚೆನ್ನಾಗಿ ಓದುತ್ತೀಯಾ ಇದೇ ರೀತಿ ಓದು. ಗೊತ್ತಾಗದಿದ್ದರೇ ಕೇಳು ಎಂದು ಹೇಳಿಕೊಡುತ್ತಿದ್ದೆವು. ಏಕ್ತಾ ಎಸ್‌ಎಸ್‌ಎಲ್‌ಸಿಯಲ್ಲಿ ಶಾಲೆಗೆ ಟಾಪರ್ ಆಗಿರುವುದು ಬಹಳ ಖುಷಿ ತಂದಿದೆ. ಮುಂದೆಯೂ ಇದೇ ರೀತಿ ಓದಿಸುತ್ತೇವೆ ಎಂದು ಏಕ್ತಾ ತಾಯಿ ಎಂ.ಎಸ್.ಗಂಗಮ್ಮ ತಿಳಿಸಿದರು.



ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ಡಿ.ಎಂ.ಸತೀಶ್ ಅವರು ಎಂ.ಜಿ.ಏಕ್ತಾಳನ್ನು ಅಭಿನಂದಿಸುತ್ತಿರುವುದು. ಚಿತ್ರದಲ್ಲಿ ಏಕ್ತಾ ತಂದೆ ಎಂ.ಸಿ.ಗಣಪತಿ, ಸಹೋದರ, ತಾಯಿ ಎಂ.ಎಸ್.ಗಂಗಮ್ಮ, ಶಿಕ್ಷಕಿ ವೀಣಾ ಅವರನ್ನು ಕಾಣಬಹುದು

ಖಂಡಿತವಾಗಿಯೂ ಮನೆ ನೀಡುತ್ತೇವೆ..



ಈ ಮೊದಲು ಮಾತು ಕೊಟ್ಟಂತೆ ನಗರದ ಜಾಕಿ ಕ್ವಾಟ್ರಸ್‌ನ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಏಕ್ತಾಗೆ ಆಶ್ರಯ ಯೋಜನೆಯಡಿ ಮನೆ ನೀಡಲಾಗುವುದು. ದಕ್ಷಿಣ ಪದವೀಧರ ಕ್ಷೇತ್ರ ಚುನಾವಣಾ ನೀತಿ ಸಂಹಿತೆ ಅಂತ್ಯಗೊಂಡ ಕೂಡಲೇ ವಿದ್ಯಾರ್ಥಿನಿ ಏಕ್ತಾ ಅವರ ಮನೆಗೆ ಖುದ್ದು ನಾನೇ ಭೇಟಿ ನೀಡಿ, ಅಭಿನಂದಿಸುವುದರೊಂದಿಗೆ ಭರವಸೆ ಈಡೇರಿಸುವ ವಾಗ್ದಾನ ಮಾಡಲಿದ್ದೇನೆ.

- ಎಸ್.ಎ.ರಾಮದಾಸ್, ಶಾಸಕ, ಕೆ.ಆರ್.ಕ್ಷೇತ್ರ

ಆದರ್ಶ ವಿದ್ಯಾಲಯದಲ್ಲಿ ಎನ್‌ಸಿಇಆರ್‌ಟಿ ಪಠ್ಯಕ್ರಮ ಅಳವಡಿಸಿಕೊಂಡ ಬಳಿಕ ತೇರ್ಗಡೆಯಾದ ಮೊದಲ ಬ್ಯಾಚ್ ಇದಾಗಿದೆ. ಪರೀಕ್ಷಾ ಫಲಿತಾಂಶ ಏನಾಗುತ್ತದೋ ಎಂಬ ಆತಂಕ ಸಹಜವಾಗಿತ್ತು. ಆದರೆ ನಮ್ಮ ವಿದ್ಯಾರ್ಥಿಗಳು ಎಲ್ಲಾ ಆತಂಕಗಳನ್ನು ದೂರವಾಗಿಸಿದ್ದಾರೆ. ಏಕ್ತಾ ಆದರ್ಶ ಶಾಲೆ ಗರಿಷ್ಠ ಅಂಕ ಪಡೆಯುವ ಮೂಲಕ ಯಾರೂ ಆಕೆಯ ಸಾಧನೆಯನ್ನು ಬ್ರೇಕ್ ಮಾಡದಂತೆ ಮಾಡಿದ್ದಾಳೆ. ಏಕ್ತಾ ಮುಂದಿನ ವಿದ್ಯಾಭ್ಯಾಸ ಉಜ್ವಲವಾಗಿರಲಿ ಎಂದು ಹಾರೈಸುತ್ತೇನೆ.

- ಡಿ.ಎಂ.ಸತೀಶ್, ಮುಖ್ಯೋಪಾಧ್ಯಾಯರು, ಸರ್ಕಾರಿ ಆದರ್ಶ ವಿದ್ಯಾಲಯ


ಏಕ್ತಾಳ ಒತ್ತಡವಿಲ್ಲದ ಓದು 625ಕ್ಕೆ 625 ಅಂಕಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು. 5ಕ್ಕೂ ಹೆಚ್ಚು ಬಾರಿ ಮಾದರಿ ಪ್ರಶ್ನೆ ಪತ್ರಿಕೆ ತಯಾರಿಸಿ ಕಲಿಸಲಾಗಿತ್ತು. ಕಷ್ಟದ ಪ್ರಶ್ನೆಗಳಿಗೂ ಉತ್ತರ ನೀಡುತ್ತಿದ್ದ ಏಕ್ತಾ, ಇತರೆ ವಿದ್ಯಾರ್ಥಿಗಳಿಗೂ ಮಾದರಿಯಾಗಿದ್ದಾಳೆ.

- ವೀಣಾ, ಶಿಕ್ಷಕಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಸಂದೇಶ್ ಪ್ರೊಡಕ್ಷನ್ಸ್ ಚಿತ್ರದಲ್ಲಿ ಪ್ರಭುದೇವ




ಕನ್ನಡ ಚಿತ್ರರಂಗಕ್ಕೆ ಹಲವಾರು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಸಂದೇಶ್ ಪ್ರೊಡಕ್ಷನ್ಸ್ ಸಂಸ್ಥೆಯಿಂದ ಮತ್ತೊಂದು ದೊಡ್ಡಮಟ್ಟದ ಪ್ಯಾನ್ ಇಂಡಿಯಾ ಸಿನಿಮಾ ನಿರ್ಮಾಣವಾಗುತ್ತಿದೆ. ಈ ಚಿತ್ರದಲ್ಲಿ ಬಹುಭಾಷಾ ನಟ, ಇಂಡಿಯನ್ ಮೈಕಲ್ ಜಾಕ್ಸನ್ ಅಂತಲೇ ಹೆಸರಾಗಿರುವ ಪ್ರಭುದೇವ ನಾಯಕರಾಗಿ ಕಾಣಿಸಿಕೊಳ್ಳಲಿದ್ದಾರೆ. ಅಲ್ಲದೆ ಹಿರಿಯ ನಟಿ ರಮ್ಯಕೃಷ್ಣ ಸೇರಿದಂತೆ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಲಿದ್ದಾರೆ.

ರಾಷ್ಟ್ರಪ್ರಶಸ್ತಿ ವಿಜೇತ ಸಂದೇಶ್ ನಾಗರಾಜ್ ನೇತೃತ್ವದ ಸಂದೇಶ್ ಪ್ರೊಡಕ್ಷನ್ಸ್ ಸಂಸ್ಥೆಯ 31ನೇ ಚಿತ್ರ ಇದಾಗಿದ್ದು, ಕನ್ನಡ, ತೆಲುಗು, ತಮಿಳು, ಮಲೆಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ನಿರ್ಮಾಣವಾಗಲಿದೆ. ಸಂದೇಶ್ ಎನ್. ಅವರ ನಿರ್ಮಾಣ ಹಾಗೂ ವಿನಿ ವೆಂಕಟೇಶ್ ನಿರ್ದೇಶನದ ಈ ಚಿತ್ರಕ್ಕೆ ಜುಲೈ 5 ರಿಂದ ಬೆಂಗಳೂರು ಅಲ್ಲದೆ ಅಂಡಮಾನ್-ನಿಕೋಬಾರ್, ಬೆಂಗಳೂರು, ಚೆನ್ನೈಯಂಥ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಯಲಿದೆ ಅಂಬರೀಶ್ ಅವರ ಸಂಗೀತ ನಿರ್ದೇಶನವಿರುವ. ಈ ಚಿತ್ರದ ಶೀರ್ಷಿಕೆಯನ್ನು ಸದ್ಯದಲ್ಲೇ ಬಿಡುಗಡೆ ಮಾಡಲಿದ್ದಾರೆ.



ವಿಭಿನ್ನ ಲುಕ್‌ನಲ್ಲಿ ಆಶಿಕಾ ರಂಗನಾಥ್

ಈ ವಾರ ತೆರೆಮೇಲೆ ಓಡಲಿದೆ



ಕಾಮಿಡಿ, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಮೆಟಡೋರ್' ಚಿತ್ರ ಈ ವಾರ ಬಿಡುಗಡೆಯಾಗುತ್ತಿದೆ. ಈಗಾಗಲೇ ತನ್ನ ಟೈಟಲ್, ಟೀಸರ್, ಟ್ರೇಲರ್ ಹಾಗೂ ಹಾಡುಗಳ ಮೂಲಕ ನಿರೀಕ್ಷೆ ಹುಟ್ಟಿಸಿರುವ ಈ ಚಿತ್ರದ ಕುರಿತಂತೆ ಇತ್ತೀಚೆಗಷ್ಟೇ ಸುದ್ದಿಗೋಷ್ಠಿ ನಡೆಸಿದ ಚಿತ್ರತಂಡ ಮಾಹಿತಿ ಹಂಚಿಕೊಂಡಿತು.


ನಿರ್ಮಾಪಕ ಕಿರಣ್ ಕುಮಾರ್ ಮಾತನಾಡಿ, ನಾವೆಲ್ಲ ಮೈಸೂರಿನವರು, ಇಂಜಿನಿಯರಿಂಗ್ ನಂತರ ಒಂದಷ್ಟು ಕಿರು ಚಿತ್ರಗಳನ್ನು ಮಾಡಿ, ಒಂದೊಳ್ಳೆ ಕಂಟೆಂಟ್ ಇಟ್ಟುಕೊಂಡು ಈ ಚಿತ್ರ ನಿರ್ಮಾಣ ಮಾಡಿದ್ದೇವೆ. ನಾವು ಮಾಡಿದ ಕರ್ಮದ ಫಲವನ್ನು ಇಲ್ಲೇ ಅನುಭವಿಸಬೇಕು ಎಂಬ ಸಂದೇಶವನ್ನು ಸಸ್ಪೆನ್ಸ್, ಥ್ರಿಲ್ಲರ್ ಕಂಟೆಂಟ್ ಜೊತೆಗೆ ಹೇಳಿದ್ದೇವೆ. ಬೀದಿನಾಟಕದ ಮೂಲಕ ರಾಜ್ಯಾದ್ಯಂತ ಪ್ರಚಾರ ಮಾಡಿದ್ದೇವೆ ಎಂದು ತಿಳಿಸಿದರು. ನಂತರ ಮಾತನಾಡಿದ ನಿರ್ದೇಶಕ ಸುದರ್ಶನ್, ಚಿತ್ರದಲ್ಲಿ ಅಭಿನಯಿಸಿದವರೆಲ್ಲ ಹೊಸ ಕಲಾವಿದರು. ನಾಟಕದ ಹಿನ್ನೆಲೆಯುಳ್ಳವರು. ಚಿತ್ರದಲ್ಲಿ ಐದು ಕಥೆಗಳನ್ನು ಹೇಳಿದ್ದೇವೆ. ಕೊನೆಯಲ್ಲಿ ಎಲ್ಲಾ ಕಥೆಗಳಿಗೆ ಲಿಂಕ್ ಇದೆ. ಕಾಮಿಡಿ, ಥ್ರಿಲ್ಲರ್ ಎಲ್ಲಾ ಥರದ ಎಲಿಮೆಂಟ್ ನಮ್ಮ ಚಿತ್ರದಲ್ಲಿದೆ ಎಂದರು. ಐದು ಕಥೆಯುಳ್ಳ ಹೈಪರ್ ಲಿಂಕ್ ಸಿನಿಮಾ ಆಗಿರುವ ಮೆಟಡೋರ್ ಚಿತ್ರಕ್ಕೆ ಸುದರ್ಶನ್ ಜಿ ಶೇಖರ್ ನಿರ್ದೇಶನ ಮಾಡಿದ್ದು, ಈ ಹಿಂದೆ ಇವರು 13ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾರೆ. ಚಿತ್ರದಲ್ಲಿ ಕಿರಣ್, ರವಿ ಮೈಸೂರು, ಅರ್ಚನಾ ಮಹೇಶ್, ಮೋಹನ್ ಬಾಬು ಸೇರಿದಂತೆ ಸಾಕಷ್ಟು ಹೊಸ ಕಲಾವಿದರ ತಾರಾಬಳಗವಿದೆ. ಓಂ ಸ್ಟುಡಿಯೋ ಪ್ರೊಡಕ್ಷನ್ ಹೌಸ್ ಬ್ಯಾನರ್ ನಡಿ ಕಿರಣ್ ಕುಮಾರ್ ಎಸ್ ಹೆಚ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 4 ಹಾಡುಗಳಿಗೆ ತಂಗಾಳಿ ನಾಗರಾಜ್ ಅವರ ಸಂಗೀತ, ಗೋಪಿನಾಥ್ ಅವರ ಕ್ಯಾಮೆರಾ, ಕುಮಾರ್ ಸಿಎಚ್ ಅವರ ಸಂಕಲನವಿದೆ.



‘ತೂತು ಮಡಿಕೆ’ ಟೈಟಲ್ ಟ್ರ್ಯಾಕ್ ರಿಲೀಸ್..


ಟೈಟಲ್‌ನಲ್ಲೇ ಕುತೂಹಲ ಹುಟ್ಟಿಸಿರುವ 'ತೂತು ಮಡಿಕೆ' ಸಿನಿಮಾ ಬಿಡುಗಡೆಯ ಹಂತ ತಲುಪಿದ್ದು, ಈಗ ಸಿನಿಮಾದ ಟೈಟಲ್ ಟ್ರ್ಯಾಕ್ ಬಿಡುಗಡೆಯಾಗಿದೆ. ನಿತಿನ್ ನಾರಾಯಣ್ ಸಾಹಿತ್ಯವಿರುವ ಹಾಡಿಗೆ, ಚೇತನ್ ನಾಯ್ಕ್ ಧ್ವನಿಯಾಗಿದ್ದು, ಸ್ವಾಮಿನಾಥನ್ ಆರ್.ಕೆ ಅವರ ಸಂಗೀತವಿದೆ. ಈ ಹಿಂದೆ ಬಿಡುಗಡೆಯಾಗಿದ್ದ ಯಾಮಾರಿದೆ ಹೃದಯ ಹಾಡಿನ ಚಿತ್ರೀಕರಣ ನಡೆದ ಜಾಗದಲ್ಲಿಯೇ ಟೈಟಲ್ ಟ್ರ್ಯಾಕ್ ಕೂಡ ಶೂಟ್ ಆಗಿದ್ದು, ಅಲ್ಲಿನ ಸ್ಥಳೀಯರನ್ನು ಬಳಸಿಕೊಂಡು ಮೋಹನ್ ಮಾಸ್ಟರ್ ಹಾಡಿಗೆ ಕೊರಿಯೋಗ್ರಾಫಿ ಮಾಡಿದ್ದಾರೆ. ಆನಂದ್ ಆಡಿಯೋ ಯೂಟ್ಯೂಬ್‌ನಲ್ಲಿ ಈ ಹಾಡು ಬಿಡುಗಡೆಯಾಗಿದೆ.

ಕಿರುಚಿತ್ರಗಳ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟಿದ್ದ, ಮೂಕವಿಸ್ಮಿತ, ಸಿಲಿಕಾನ್ ಸಿಟಿ, ಕಿಸ್ ಸಿನಿಮಾಗಳಲ್ಲಿ ನಟಿಸಿದ್ದ ಚಂದ್ರ ಕೀರ್ತಿ ತೂತು ಮಡಿಕೆ ಸಿನಿಮಾದ ನಾಯಕನಾಗಿದ್ದಾರೆ. ಜೊತೆಗೆ ಸಿನಿಮಾದ ಕಥೆ ಹಾಗೂ ನಿರ್ದೇಶನದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ನಾಯಕಿಯಾಗಿ ಪಾವನಾ ಗೌಡ ನಟಿಸಿದ್ದು, ಪ್ರಮೋದ್ ಶೆಟ್ಟಿ, ಉಗ್ರಂ ಮಂಜು ಮುಂತಾದವರು ಉಳಿದ ಪಾತ್ರವರ್ಗದಲ್ಲಿದ್ದಾರೆ. ಕಾಮಿಡಿ ಥ್ರಿಲ್ಲರ್ ಸಸ್ಪೆನ್ಸ್ ಕಥೆ ಇರುವ ತೂತುಮಡಿಕೆ ಸಿನಿಮಾಗೆ ಸರ್ವತಾ ಸಿನಿ ಗ್ಯಾರೇಜ್ ಬ್ಯಾನರ್ ನಡಿ ಮಧುಸೂಧನ್ ರಾವ್ ಹಾಗೂ ಶಿವಕುಮಾರ್ ಬಂಡವಾಳ ಹೂಡಿದ್ದು, ನವೀನ್ ಚಲ್ಲ ಅವರ ಛಾಯಾಗ್ರಾಹಣ, ಉಜ್ವಲ್ ಚಂದ್ರ ಸಂಕಲನವಿದೆ.



ಸಿನಿಪದಬಂಧ-010

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______________________

ವಿಳಾಸ ______________________

ದೂರವಾಣಿ ಸಂಖ್ಯೆ ______________________

ಎಡದಿಂದ ಬಲಕ್ಕೆ

1. ಶರಣ್ ನಟನೆಯಲ್ಲಿ ತಾರದೆ ಹಾಗೆ ಬಂದ ವ್ಯಕ್ತಿ (7)
5. ಈತ ಗೋಲ್ಡನ್ ಸ್ಟಾರ್ (3)
6. ಶರವೇಗದಲ್ಲಿ ಬಂದ ಕುಮಾರ್ ಬಂಗಾರಪ್ಪ (4)
7. ದುನಿಯಾ ವಿಜಿ ಅಭಿನಯದ ಒಂಟಿ ಆನೆ (3)
8. 2015ರ ಶ್ರೀಮುರಳಿ-ರಚಿತಾ ರಾಮ್ ಚಿತ್ರ (4)
10. 2012ರಲ್ಲಿ ಉಪೇಂದ್ರ "ಪೊಲೀಸ್" ಆಗಿದ್ದು ಹೀಗೆ (4)
12. 2009ರ ದರ್ಶನ್-ಆರತಿ ಠಾಕೂರ್ ಚಿತ್ರ ಅಂತ್ಯ ಅಸ್ತವ್ಯಸ್ತಗೊಂಡಿದೆ (3)
13. ಹೆಜ್ಜೆಯ ನಿನಾದದಲ್ಲಿ ಬಂದ ರಾಮಕುಮಾರ್ ಚಿತ್ರ (4)
14. ಗಹನವಾದ ಅನಂತನಾಗ್-ಖುಷ್ಬೂ ಚಿತ್ರ (3)
15. ಅನಂತನಾಗ್-ಲಕ್ಷ್ಮೀ ನಟನೆಯ ಹಾರರ್ ಚಿತ್ರ (7)

ಮೇಲಿನಿಂದ ಕೆಳಕ್ಕೆ

1. ಬಹಳ ವ್ಯತ್ಯಾಸಗೊಂಡ ಕಾಶೀನಾಥ್ ಚಿತ್ರ (6)
2. ವಿಷ್ಣುವರ್ಧನ್-ಮಾಧವಿ-ಬಿ ಸರೋಜಾದೇವಿ ಅಭಿನಯದ ಚಿತ್ರ (4)
3. ಅಂಬರೀಶ್-ಸುಮನ್ ರಂಗನಾಥ್ ಚಿತ್ರ (6)
4. ಗಿರೀಶ್ ಕಾರ್ನಾಡ್-ಯು ಆರ್ ಅನಂತಮೂರ್ತಿ ಚಿತ್ರ (3)
7. ಗೌರವಿಸಿದ ಅಂಬರೀಶ್-ಅಂಬಿಕಾ ಚಿತ್ರ (3)
9. ಸುದೀಪ್ ಜೊತೆ ಚಿರಂಜೀವಿ ಸರ್ಜಾ ನಟಿಸಿದ ಚಿತ್ರ (6)
10. ಶುರುವಾದ ಈ ಸಿನಿಮಾಗಳು 1987 ಹಾಗೂ 2015ರಲ್ಲಿ ತೆರೆಕಂಡವು (3)
11. ಪುಟ್ಟಣ್ಣ ನಿರ್ದೇಶನದಲ್ಲಿ ಡಾ.ರಾಜ್-ಕಲ್ಪನಾ ನಟಿಸಿದ ಚಿತ್ರ (6)
12. ಶಿವಣ್ಣ-ರಮ್ಯಕೃಷ್ಣ ಅಭಿನಯಿಸಿದ ಯಾರೇ ನೀ..... (4)
13. ಪ್ರಜ್ವಲ್ ದೇವರಾಜ್ ಅಭಿನಯದ ಸ್ನೇಹಿತ (3)

ಸಿನಿ ಪದಬಂಧ 009ರ ಸರಿ ಉತ್ತರ

ಅ	ನಂ	ತ	ನ	ಅ	ವಾಂ	ತ	ರ		ಅ	ಪ್ಪು
ಗ್ನಿ					ಟೆ		ಹ		ದೃ	
ಪಂ	ಚ	ರಂ	ಗಿ		ಡ್		ಸ್ಯ		ಷ್ಟ	ಇ
ಜ		ಗಿ		ಮೊ					ವಂ	
ರ		ತ		ಮ್ಮ			ಮಾ	ರು	ತ	
		ರಂ		ಗ	ರ್ಜ	ನೆ		ದ್ರ		
	ಸಂ	ಗ	ಮ್			ನ		ತಾಂ		ಯು
	ಸಾ					ಪು		ಡ		ಗಾ
ಬ	ರ		ಜ್		ರು		ಜೀ	ವ	ನ	ದಿ
	ನೌ		ರೆಂ		ರೂ					ಹ
ಜೋ	ಕೆ		ಆ	ಸೆ	ಗೊ	ಬ್ಬ	ಮೀ	ಸೆ	ಗೊ	ಬ್ಬ

ವಿಜೇತರು: ಎಂ. ರಕ್ಷಿತಾ D/O ಜೆ. ಮಾದೇಶ್
ನಂ. 3482/ಬಿ, 6ನೇ ಕ್ರಾಸ್, 4ನೇ ಮುಖ್ಯ ರಸ್ತೆ,
ತಿಲಕ್‌ನಗರ, ಮೈಸೂರು

ತಂದೆ-ಮಗನ ಬಾಂಧವ್ಯದ ಕ್ಷೇತ್ರಪತಿ



ತಂದೆ ಮಗನ ನಡುವಿನ ಭಾವನಾತ್ಮಕ ಸಂಬಂಧರ ಕಥಾಹಂದರವಿರುವ, ಶ್ರೀಕಾಂತ್ ಕಟಗಿ ಅವರ ನಿರ್ದೇಶನದ ಚಿತ್ರ ಕ್ಷೇತ್ರಪತಿ. ಗುಲ್ಟು ನವೀನ್‌ಶಂಕರ್ ನಾಯಕನಾಗಿ ನಟಿಸಿರುವ ಈ ಚಿತ್ರದ ಫಸ್ಟ್‌ಲುಕ್ ಪೋಸ್ಟರನ್ನು ಇತ್ತೀಚೆಗೆ ನಟ ಡಾಲಿ ಧನಂಜಯ, ಸಿಂಪಲ್‌ಸುನಿ ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ಶ್ರೀಕಾಂತ್ ಕಟಗಿ, ನಾನು ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಗುಲ್ಟು ಚಿತ್ರ ನೋಡಿ ನವೀನ್‌ರ ಅಭಿಮಾನಿಯಾದೆ. ನಮ್ಮ ದೇಶದ ಬೆನ್ನೆಲುಬು ರೈತ, ಆತನನ್ನೇ ಇಟ್ಟುಕೊಂಡು ಈ ಚಿತ್ರದ ಕಥೆ ಮಾಡಿದ್ದೇನೆ. ಸಂಸ್ಕೃತ ಭಾಷೆಯಲ್ಲಿ ರೈತನಿಗಿರುವ 21 ಹೆಸರುಗಳಲ್ಲಿ ಕ್ಷೇತ್ರಪತಿ ಎನ್ನುವುದೂ ಒಂದು. ರೈತನನ್ನು ಕ್ಷೇತ್ರಪತಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇದರಲ್ಲಿ ಅಪ್ಪ-ಮಗನ ಬಾಂಧವ್ಯದ ಕಥೆಯೂ ಇದೆ. ಗದಗಿನ ತಿಮ್ಮಾಪುರ ಎಂಬ ಗ್ರಾಮದಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಿದ್ದೇವೆ ಎಂದರು.

ನಂತರ ಚಿತ್ರದ ನಾಯಕ ಕಂ ನಿರ್ಮಾಪಕರೂ ಆದ ನವೀನ್ ಶಂಕರ್ ಮಾತನಾಡುತ್ತ ನಿರ್ದೇಶಕ ಶ್ರೀಕಾಂತ್ ಬಂದು ಈ ಕಥೆ ಹೇಳಿದಾಗ, ನಾನು ಹುಡುಕುತ್ತಿದ್ದಂಥ ಕಂಟೆಂಟೇ ಅದರಲ್ಲಿತ್ತು. ತಕ್ಷಣ ಅಭಿನಯಿಸಲು ಒಪ್ಪಿದೆ, ನಂತರ ನಿರ್ಮಾಪಕರನ್ನು ಹುಡುಕಾಡಿದೆವು. ಯಾರೂ ಸಿಗದಿದ್ದಾಗ, ನನ್ನ ಕೆಲವು ಸ್ನೇಹಿತರೇ ಸೇರಿ ನಿರ್ಮಾಣ ಸಂಸ್ಥೆಯೊಂದನ್ನು ಹುಟ್ಟುಹಾಕಿ, ಅದರಡಿ ಈ ಚಿತ್ರದ ಚಿತ್ರೀಕರಣವನ್ನು ಪ್ರಾರಂಭಿಸಿದೆವು. ನಂತರ ಸಾಕಷ್ಟು ಸ್ನೇಹಿತರು ನಿರ್ಮಾಣದಲ್ಲಿ ಜೊತೆಯಾದರು. ಸಂಗೀತ ನಿರ್ದೇಶಕ ರವಿ ಬಸ್ರೂರ್ ಅವರೂ ಕಥೆಯನ್ನು ಕೇಳಿ ಅದ್ಭುತವಾಗಿದೆ ಎಂದು ಮೆಚ್ಚಿ ಸಂಗೀತ ಮಾಡಿಕೊಡಲು ಒಪ್ಪಿದರು. ಇನ್ನು, ಈ ಚಿತ್ರದ ಕಥೆಯ ಬಗ್ಗೆ ಹೇಳಬೇಕೆಂದರೆ ಚಿತ್ರದ ನಾಯಕ ಬಸವ ಒಬ್ಬ ಇಂಜಿನಿಯರಿಂಗ್ ವಿದ್ಯಾರ್ಥಿ. ತನ್ನಿಷ್ಟಕ್ಕೆ ತಾನು ಇರುವಾತ. ಆತನ ಜೀವನದಲ್ಲಿ ನಡೆಯುವ ಅನಿರೀಕ್ಷಿತ ಘಟನೆಯೊಂದರ ಮೂಲಕ ಈತ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ. ಈ ಬಸವ ನನ್ನೊಳಗೆ, ನಿಮ್ಮೊಳಗೆ ಕೂಡ ಇದ್ದಾನೆ. ಕೆಲವರಿಗೆ ಅವನು ಜೀವಂತ. ಇನ್ನೂ ಕೆಲವರಿಗೆ ಆತ ಇಲ್ಲ. ಚಿತ್ರ ನೋಡಿದ ನಂತರವಷ್ಟೇ ಅದರ ಬಗ್ಗೆ ತಿಳಿಯುತ್ತದೆ ಎಂದು ನವೀನ್‌ಶಂಕರ್ ಕಥೆಯ ವಿಶೇಷತೆ ಬಗ್ಗೆ ವಿವರಿಸಿದರು. ಈಗಾಗಲೇ ಕ್ಷೇತ್ರಪತಿ ಚಿತ್ರದ ಚಿತ್ರೀಕರಣ ಪೂರ್ಣವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ.

ಇದು ಮೆಟ್ರೋಸಿಟಿ ಕಥೆ ಸ್ಟ್ರೀಟ್ಸ್ ಆಫ್ ಬೆಂಗಳೂರು



ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಬೇರೆ ಬೇರೆ ಉದ್ಯಮಗಳಲ್ಲಿ ತೊಡಗಿದವರೂ ಬಂದು ಬಂಡವಾಳ ಹೂಡುವ ಮೂಲಕ ಬಿಗ್ ಬಜೆಟ್ ಚಿತ್ರಗಳನ್ನು ನಿರ್ಮಿಸುತ್ತಿದ್ದಾರೆ. ಅದೇರೀತಿ ಈಗ ಮತ್ತೊಂದು ಬಿಗ್ ಪ್ರೊಡಕ್ಷನ್ ಹೌಸ್ ತಲೆಯೆತ್ತಿದ್ದು, ಕನ್ನಡದಲ್ಲಿ ಹಲವಾರು ಸಿನಿಮಾಗಳನ್ನು ನಿರ್ಮಿಸುವ ಆಶಯ ಹೊಂದಿದೆ. ಅದು ಹೆಸರು ಗುಲಾಬ್ ಪ್ರೊಡಕ್ಷನ್ಸ್, ದೊಡ್ಡ ಮನೆತನಕ್ಕೆ ಸೇರಿದ ಶ್ರೀಮತಿ ಗುಲಾಬ್ ಪದ್ಮನಾಭ ಖೋಡೆ ಅವರೊಬ್ಬ ಆದರ್ಶ ಮಹಿಳೆ. ಈಗ ಅವರ ಮೊಮ್ಮಗ ಕೆ.ಆರ್.ಕೃಷ್ಣ(ನಿಖಿಲ್) ತನ್ನ ಅಜ್ಜಿಯ ನೆನಪಿಗಾಗಿ ಗುಲಾಬ್ ಪ್ರೊಡಕ್ಷನ್ಸ್ ಎಂಬ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದ್ದಾರೆ. ಇದರ ಮೊದಲ ಪ್ರಯತ್ನವಾಗಿ 'ಸ್ಟ್ರೀಟ್ಸ್ ಆಫ್ ಬೆಂಗಳೂರು' ಎಂಬ ಕುತೂಹಲಕರ ಕಥಾಹಂದರವುಳ್ಳ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅದ್ದೂರಿ ಬಜೆಟ್‌ನಲ್ಲಿ ಚಲನಚಿತ್ರಗಳನ್ನು ನಿರ್ಮಾಣ ಮಾಡುವ ಗುರಿಯನ್ನೂ ಸಹ ಕೃಷ್ಣ ಅವರು ಇಟ್ಟುಕೊಂಡಿದ್ದಾರೆ.

ಕಳೆದ ವಾರ ಗುಲಾಬ್ ಪ್ರೊಡಕ್ಷನ್ಸ್ ಸಂಸ್ಥೆಯ ಲೋಗೋ ಅನಾವರಣ ಕಾರ್ಯಕ್ರಮ ನಡೆಯಿತು. ಕೃಷ್ಣ ಅವರ ತಾತ ಪದ್ಮನಾಭ ಖೋಡೆ ಅವರು ಸಂಸ್ಥೆಯ ಉದ್ಘಾಟನೆ ನೆರವೇರಿಸಿದರು. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಕೆ.ಹೆಚ್.ಮುನಿಯಪ್ಪ, ಯೂತ್ ಕಾಂಗ್ರೆಸ್ ಮುಖಂಡರಾದ ಬಿ.ವಿ. ಶ್ರೀನಿವಾಸ್, ಲಹರಿ ವೇಲು, ನಿರ್ದೇಶಕರಾದ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಟಿ.ಎಸ್.ನಾಗಾಭರಣ, ನಾಗತಿಹಳ್ಳಿ ಚಂದ್ರಶೇಖರ್, ಹಿರಿಯ ಕಲಾವಿದರಾದ ದೊಡ್ಡಣ್ಣ, ಜೈಜಗದೀಶ್, ವಿಜಯಲಕ್ಷ್ಮಿಸಿಂಗ್, ಪ್ರಮೀಳಾ ಜೋಷಾಯ್, ಕುಮಾರ್ ಗೋವಿಂದ್, ಟೆನ್ನಿಸ್‌ಕೃಷ್ಣ ಸೇರಿದಂತೆ ಕನ್ನಡ ಚಿತ್ರರಂಗದ ಅನೇಕ ಕಲಾವಿದರು ಆಗಮಿಸಿ ನೂತನ ನಿರ್ಮಾಣ ಸಂಸ್ಥೆಗೆ ಶುಭ ಕೋರಿದರು.

ಇದೇ ಸಂದರ್ಭದಲ್ಲಿ ಅನಂತಾಮೃತ ಎಂಬ ಭಕ್ತಿಗೀತೆಗಳ ಸಿಡಿಯನ್ನೂ ಸಹ ಬಿಡುಗಡೆ ಮಾಡಲಾಯಿತು. ಪ್ರೀತಮ್ ಶಿವಕುಮಾರ್ ನಿರ್ದೇಶನದ ಸ್ಟ್ರೀಟ್ಸ್ ಆಫ್ ಬೆಂಗಳೂರು ಎಂಬ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವು ಮೆಟ್ರೋಸಿಟಿಯ ವಿವಿಧ ಮುಖಗಳನ್ನು ಅನಾವರಣಗೊಳಿಸಲಿದೆ. ಗೌತಂ ಈ ಚಿತ್ರದ ಕಥೆ, ಚಿತ್ರಕಥೆ ರಚಿಸಿದ್ದು, ಶಶಿಕುಮಾರ್ ಸಂಭಾಷಣೆ ಹೆಣೆದಿದ್ದಾರೆ. ನಂದನ ಶ್ರೀನಿವಾಸ್ ಅವರ ಸಂಗೀತ ಸಂಯೋಜನೆ, ಜೀವನ್ ಅವರ ಛಾಯಾಗ್ರಹಣ ಹಾಗೂ ಸಂಕಲನ ಈ ಚಿತ್ರಕ್ಕಿದೆ. ಯುವನಟ ಜೈಕೃಷ, ಪ್ರಜ್ವಲ್‌ಗೌಡ, ಅಭಿಲಾಶ್ ಮುಂತಾದವರ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 3 ಜೂನ್ 2022

ನಾಲ್ಕು ಕ್ಷೇತ್ರದಲ್ಲೂ ಬಿಜೆಪಿ ಜಯಭೇರಿ: ಸಿ.ಟಿ.ರವಿ ವಿಶ್ವಾಸ



ಮಂಡ್ಯ, ಜೂ.2(ಮೋಹನ್‌ರಾಜ್)– 4 ವಿಧಾನ ಪರಿಷತ್ ಕ್ಷೇತ್ರಗಳ ಚುನಾವಣೆಯಲ್ಲೂ ಬಿಜೆಪಿ ಅಭ್ಯರ್ಥಿಗಳು ಜಯಭೇರಿ ಬಾರಿಸಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.13 ರಂದು 2 ಶಿಕ್ಷಕರ ಕ್ಷೇತ್ರ ಹಾಗೂ 2 ಪದವೀಧರ ಕ್ಷೇತ್ರದ ಚುನಾವಣೆ ನಡೆಯಲಿದ್ದು, ಬಿಜೆಪಿ ಅಭ್ಯರ್ಥಿಗಳು ಜಯಭೇರಿ ಬಾರಿಸಲಿದ್ದಾರೆಂದು ನುಡಿದರು.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಬಗ್ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕಳೆದ ಬಾರಿ ಅವರು 183 ಮತಗಳ ಅಂತರದಿಂದ ಪರಾಭವಗೊಂಡಿದ್ದು, ಈ ಬಾರಿ ಅತಿ ಹೆಚ್ಚು ಮತ ಗಳಿಸಿ ಆಯ್ಕೆಯಾಗಲಿದ್ದಾರೆ ಎಂದರು.

ನರೇಂದ್ರ ಮೋದಿ ಪ್ರಧಾನಿಯಾಗಿ 8 ವರ್ಷ ಪೂರೈಸಿದ್ದು, ದೇಶದಲ್ಲಿ ಸಕಾರಾತ್ಮಕ ಬದಲಾವಣೆ ತಂದಿದ್ದಾರೆ. ಅಂತ್ಯೋದಯ ಯೋಜನೆ ಮೂಲಕ ಎಲ್ಲರಿಗೂ ಲಾಭ ತಲುಪುವಂತೆ ಮಾಡಿದ್ದಾರೆ ಎಂದ ಅವರು, ದೇಶದ 84 ಕೋಟಿ ಜನರಿಗೆ ಎರಡೂವರೆ ವರ್ಷದಿಂದ ಉಚಿತವಾಗಿ ರೇಷನ್ ನೀಡಲಾಗುತ್ತಿದೆ. ಜನಧನ್ ಯೋಜನೆ ಮೂಲಕ 42 ಕೋಟಿ ಜನರನ್ನು ಬ್ಯಾಂಕಿಂಗ್ ಯೋಜನೆಗೆ ಸೇರಿಸಲಾಗಿದೆ. 1.22 ನಗರ ಪ್ರದೇಶ ಮತ್ತು 2.30 ಲಕ್ಷ ಗ್ರಾಮಾಂತರ ಪ್ರದೇಶದ ಜನರಿಗೆ ಪ್ರಧಾನಮಂತ್ರಿ ಅವಾಸ್ ಯೋಜನೆ ಲಾಭ ಸಿಕ್ಕಿದೆ. ದೇಶದಲ್ಲಿ 11 ಕೋಟಿ ಶೌಚಾಲಯ ನಿರ್ಮಿಸಲಾಗಿದೆ. 6.20 ಕೋಟಿ ಜನರ ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗಿದೆ. 20 ಲಕ್ಷ ಬೀದಿ ವ್ಯಾಪಾರಿಗಳಿಗೆ 10 ಸಾವಿರ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ಶಿವಣ್ಣ, ಹೆಚ್.ಪಿ.ಮಹೇಶ್ ಇತರರಿದ್ದರು.

ಪಾಂಡವಪುರದಲ್ಲಿ ಮಧು ಜಿ.ಮಾದೇಗೌಡ ಪ್ರಚಾರ



ಪಾಂಡವಪುರ, ಜೂ.2– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪಟ್ಟಣದಲ್ಲಿ ಪ್ರಚಾರ ನಡೆಸಿದರು.

ಜಿಪಂ ಮಾಜಿ ಸದಸ್ಯ ಹೆಚ್.ತ್ಯಾಗರಾಜು ನೇತೃತ್ವದಲ್ಲಿ ಪಟ್ಟಣದ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜು, ವಕೀಲರ ಸಂಘ, ನ್ಯಾಯಾಲಯ ಸೇರಿದಂತೆ ಹಲವೆಡೆ ಪ್ರಚಾರ ನಡೆಸಿ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಮನವಿ ಮಾಡಿದರು.

ನಂತರ ಮಾತನಾಡಿದ ಅಭ್ಯರ್ಥಿ ಮಧು ಜಿ.ಮಾದೇಗೌಡ, ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. 80 ಸಾವಿರಕ್ಕೂ ಹೆಚ್ಚು ಪದವೀಧರರನ್ನು ನೋಂದಣಿ ಮಾಡಿಸಿದ್ದೇನೆ. ಪ್ರಚಾರಕ್ಕೆ ಹೋದಲ್ಲೆಲ್ಲಾ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದರು.

ಜಿಪಂ ಮಾಜಿ ಸದಸ್ಯ ಹೆಚ್.ತ್ಯಾಗರಾಜು ಮಾತನಾಡಿ, ಜಿಲ್ಲೆಯ ಹೋರಾಟಗಾರ ಮಾದೇಗೌಡರ ಪುತ್ರ ಮಧು ಜಿ.ಮಾದೇಗೌಡರು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಕ್ಷೇತ್ರದ ಮತದಾರರು ಒಗ್ಗಟ್ಟಿನಿಂದ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಕೆಪಿಸಿಸಿ ಕಿಸಾನ್ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ಕುಬೇರ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಲ್.ಸಿ.ಮಂಜುನಾಥ್, ಟಿಎಪಿಸಿಎಂಎಸ್ ನಿರ್ದೇಶಕ ಶ್ರೀಕಾಂತ್, ಮುಖಂಡರಾದ ಮಹೇಶ್, ಚಂದ್ರಶೇಖರ್, ಸ್ವಾಮಿ, ದೊಡ್ಡವೆಂಕಟಯ್ಯ ಇನ್ನಿತರರಿದ್ದರು.

ನಾಳೆ ಶ್ರೀರಂಗಪಟ್ಟಣದಲ್ಲಿ ಹಿಂದೂಪರ ಸಂಘಟನೆಗಳ ಜಾಥಾ

ನಿಷೇಧಾಜ್ಞೆ ಆದೇಶದಲ್ಲಿ ಆದ ಯಡವಟ್ಟು ತಕ್ಷಣ ಮಾರ್ಪಾಡು

ಶ್ರೀರಂಗಪಟ್ಟಣ, ಜೂ.2– ಶ್ರೀರಂಗಪಟ್ಟಣದಲ್ಲಿರುವ ಜಾಮಿಯಾ ಮಸೀದಿಯು ಶ್ರೀಮೂಡಲ ಬಾಗಿಲು ಆಂಜನೇಯಸ್ವಾಮಿ ಮೂಲ ಮಂದಿರ ಎಂದು ಪ್ರತಿಪಾದಿಸುತ್ತಿರುವ ಹಿಂದೂಪರ ಸಂಘಟನೆಗಳು ಜೂ.4ರಂದು ಶ್ರೀರಂಗಪಟ್ಟಣದ ಕುವೆಂಪು ವೃತ್ತದಿಂದ ಶ್ರೀಮೂಡಲಬಾಗಿಲು ಆಂಜನೇಯಸ್ವಾಮಿ ಮೂಲ ಮಂದಿರ ಚಲೋ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಪ್ರಕಟಿಸಿದೆ.

ಈ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜೂ.1ರಂದು ನಿಷೇಧಾಜ್ಞೆ ಹೊರಡಿಸಿದ ತಾಲೂಕು ದಂಡಾಧಿಕಾರಿಗಳೂ ಆದ ತಹಸೀಲ್ದಾರ್ ಶ್ವೇತಾ ರವೀಂದ್ರ ಅವರು 'ಜಾಮಿಯಾ ಮಸೀದಿ(ಶ್ರೀಮೂಡಲ ಬಾಗಿಲು ಆಂಜನೇಯಸ್ವಾಮಿ ಮೂಲ ಮಂದಿರ)' ಎಂದು ನಮೂದಿಸುವ ಮೂಲಕ ಮಹಾ ಎಡವಟ್ಟು ಮಾಡಿದ್ದರು. ಆನಂತರ ತಪ್ಪಿನ ಅರಿವಾಗಿ ಜೂ.2ರಂದು ತಮ್ಮ ಆದೇಶವನ್ನು ಮಾರ್ಪಾಡು ಮಾಡಿ 'ಜಾಮಿಯಾ ಮಸೀದಿ' ಎಂದು ಉಲ್ಲೇಖಿಸಿ ಆದೇಶ ಹೊರಡಿಸಿದ್ದಾರೆ.

ತಹಸೀಲ್ದಾರರ ಈ ಎಡವಟ್ಟಿಗೆ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಇನ್ಸ್‌ಪೆಕ್ಟರ್ ನೀಡಿದ ವರದಿಯೇ ಕಾರಣ ಎಂದು ಹೇಳಲಾಗಿದ್ದು, ತಹಸೀಲ್ದಾರ್‌ಗೆ ಮೇ 25ರಂದು ಪೊಲೀಸ್ ಇನ್ಸ್‌ಪೆಕ್ಟರ್ ನೀಡಿದ ವರದಿಯಲ್ಲಿ ಜಾಮಿಯಾ ಮಸೀದಿ ಎಂಬ ಪದವನ್ನು ಬಳಸದೇ 'ದಿನಾಂಕ 4–6–2022 ರಂದು ವಿಶ್ವ ಹಿಂದೂ ಪರಿಷತ್ ಮಂಡ್ಯ ಜಿಲ್ಲೆ ರವರು ಮೂಡಲ ಬಾಗಿಲು ಆಂಜನೇಯಸ್ವಾಮಿ ಮೂಲ ಮಂದಿರಕ್ಕೆ ಭೇಟಿ ನೀಡುವ ಸಂಬಂಧ ನೀಡಿರುವ ಅರ್ಜಿಯ ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಿ' ಎಂದು ನಮೂದಿಸಿದ್ದಾರೆ. ಇವರ ವರದಿಯನ್ನು ಉಲ್ಲೇಖಿಸಿ ನಿಷೇಧಾಜ್ಞೆ ಹೊರಡಿಸಿದ ತಹಸೀಲ್ದಾರರು ಜಾಮಿಯಾ ಮಸೀದಿ(ಶ್ರೀಮೂಡಲ ಬಾಗಿಲು ಆಂಜನೇಯಸ್ವಾಮಿ ಮೂಲ ಮಂದಿರ) ಎಂದು ನಮೂದಿಸಿದ್ದರು. ಆದರೆ ಅವರ ಈ ಆದೇಶದ ಪ್ರತಿ ಇಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ತಹಸೀಲ್ದಾರರು ತಮ್ಮ ಆದೇಶವನ್ನು ಮಾರ್ಪಡಿಸಿದ್ದಾರೆ.

ಗೃಹಿಣಿ ಆತ್ಮಹತ್ಯೆ

ಮಂಡ್ಯ, ಜೂ.2– ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಹೊರವಲಯದ ಕೆಂಪೇಗೌಡ ಬಡಾವಣೆಯಲ್ಲಿ ನಡೆದಿದೆ. ಬಡಾವಣೆ ನಿವಾಸಿ, ದೈಹಿಕ ಶಿಕ್ಷಕ ರವಿಕುಮಾರ್ ಅವರ ಪತ್ನಿ ಕವಿತಾ(36) ಆತ್ಮಹತ್ಯೆ ಮಾಡಿಕೊಂಡವರು. 9 ವರ್ಷದ ಹಿಂದೆ ಮದುವೆಯಾಗಿದ್ದ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಕವಿತಾ ಬುಧವಾರ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದ ವೇಳೆ ಮಗುವಿಗೆ ಕಟ್ಟಿದ್ದ ಜೋಕಾಲಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದು, ಸಂಜೆ ಮಗು ಅಳುತ್ತಿದ್ದದ್ದನ್ನು ಗಮನಿಸಿದ ಅಕ್ಕಪಕ್ಕದ ಮನೆಯವರು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯದಲ್ಲಿ ಚಲುವರಾಯಸ್ವಾಮಿ ಹುಟ್ಟುಹಬ್ಬ ಆಚರಣೆ



ಮಂಡ್ಯ, ಜೂ.2(ಮೋಹನ್‌ರಾಜ್)– ಮಾಜಿ ಸಚಿವ ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಎನ್.ಚಲುವರಾಯಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ನಗರದ ಕಾವೇರಿ ನರ್ಸಿಂಗ್ ಹೋಂನಲ್ಲಿ ಕಾಂಗ್ರೆಸ್ ಮುಖಂಡ ಹಾಗೂ ಖ್ಯಾತ ವೈದ್ಯ ಡಾ.ಕೃಷ್ಣ ನೇತೃತ್ವದಲ್ಲಿ ರಕ್ತದಾನ ಮತ್ತು ಆರೋಗ್ಯ ತಪಾಸಣಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ರಕ್ತದಾನ ಕಾರ್ಯಕ್ರಮದಲ್ಲಿ ಮಿಮ್ಸ್ ಆಸ್ಪತ್ರೆ ರಕ್ತನಿಧಿ ಕೇಂದ್ರದ ಸಿಬ್ಬಂದಿ ರಕ್ತದಾನಿಗಳು ನೀಡಿದ ರಕ್ತ ಸಂಗ್ರಹಿಸಿಕೊಂಡರು. 300ಕ್ಕೂ ಹೆಚ್ಚು ಮಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಬಳಿಕ ಮಾತನಾಡಿದ ಡಾ.ಕೃಷ್ಣ, ಕೆಪಿಸಿಸಿ ಉಪಾಧ್ಯಕ್ಷ ಎನ್.ಚಲುವರಾಯಸ್ವಾಮಿ ಅವರ ಮುಂದಿನ ರಾಜಕೀಯ ಭವಿಷ್ಯ ಉಜ್ವಲವಾಗಲಿ ಮತ್ತು ಆಯುಸ್ಸು ಆರೋಗ್ಯ ಹೆಚ್ಚಾಗಲಿ. ಮುಂದಿನ ದಿನಗಳಲ್ಲಿ ಅವರಿಗೆ ಮಂತ್ರಿ ಸ್ಥಾನ ಲಭಿಸಿ ರಾಜ್ಯದ ಜನತೆ ಸೇವೆ ಮಾಡುವ ಅವಕಾಶ ಸಿಗುವಂತಾಗಲಿ ಎಂದು ಶುಭ ಹಾರೈಸಿದರು.

ತದ ನಂತರ ಮಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಹಂಪಲು ವಿತರಿಸಲಾಯಿತು. ಇದಕ್ಕೂ ಮುನ್ನ ನಗರದ ಗಣಪತಿ ದೇಗುಲದಲ್ಲಿ ಎನ್.ಚಲುವರಾಯಸ್ವಾಮಿ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮಹಿಳಾಧ್ಯಕ್ಷೆ ಅಂಜನಾ, ಮುಖಂಡರಾದ ತ್ಯಾಗರಾಜು ಮತ್ತಿತರರಿದ್ದರು.

ಅಂಬರೀಶ್ ಹುಟ್ಟುಹಬ್ಬ ಹಿನ್ನೆಲೆ: ಮಕ್ಕಳಿಗೆ ನೋಟ್‌ಬುಕ್ ವಿತರಣೆ



ಕೆ.ಆರ್.ಪೇಟೆ, ಜೂ.2(ಶ್ರೀನಿವಾಸ್)– ತಾಲೂಕು ಅಂಬರೀಶ್ ಸೇನಾ ಸಮಿತಿಯಿಂದ ಮಾಜಿ ಸಚಿವ, ನಟ ಅಂಬರೀಶ್ ಅವರ 70ನೇ ಹುಟ್ಟುಹಬ್ಬದ ಅಂಗವಾಗಿ ತಾಲೂಕಿನ ಅಗ್ರಹಾರಬಾಚಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಉಚಿತವಾಗಿ ನೋಟ್‌ಬುಕ್ ವಿತರಿಸಲಾಯಿತು.

ಅಂಬರೀಶ್ ಸೇನಾ ಸಮಿತಿ ತಾಲೂಕು ಅಧ್ಯಕ್ಷ ರೆಬೆಲ್ ಜಬೀಉಲ್ಲಾ ನೇತೃತ್ವದಲ್ಲಿ ಶಾಲೆಯ 1ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗೆ ತಲಾ 2 ಲಾಂಗ್ ನೋಟ್‌ಬುಕ್ ವಿತರಣೆ ಮಾಡುವ ಮೂಲಕ ಅಂಬರೀಶ್ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಲೆ ಮುಖ್ಯಶಿಕ್ಷಕ ಎ.ಹೆಚ್.ಯೋಗೇಶ್, ಸಹ ಶಿಕ್ಷಕರಾದ ತಮ್ಮಯ್ಯ, ಶಾಂತಕುಮಾರಿ, ನಂಜಪ್ಪ, ಟಿ.ಜೆ.ವಿಮಲಾ, ಪಿಡಿಓ ದೇವೇಗೌಡ, ನಿವೃತ್ತ ಪ್ರಾಂಶುಪಾಲ ಡಿ.ರಾಜೇಗೌಡ, ಮುಖಂಡರಾದ ಎ.ಬಿ.ಕುಮಾರ್, ನಾಗರಾಜು, ಯಜಮಾನ್ ಸಂತೋಷ್, ಪ್ರಸನ್ನ, ದೇವರಾಜು ಸೇರಿದಂತೆ ಹಲವು ಗಣ್ಯರ ಸಮ್ಮುಖದಲ್ಲಿ ನೋಟ್‌ಬುಕ್ ವಿತರಿಸಿ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತರುವಂತೆ ಮಕ್ಕಳಿಗೆ ಸಲಹೆ ನೀಡಲಾಯಿತು.

ಶ್ರೀವೆಂಕಟೇಶ್ವರಸ್ವಾಮಿ ದೇವಾಲಯ ಉದ್ಘಾಟನೆ ಹಿನ್ನೆಲೆ

ಅಧಿಕಾರಿಗಳೊಂದಿಗೆ ಶಾಸಕ ತಮ್ಮಣ್ಣ ಸಭೆ

ಭಾರತೀನಗರ, ಜೂ.2(ಅ.ಸತೀಶ್)– ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯ ಉದ್ಘಾಟನೆ ಹಾಗೂ ಪ್ರತಿಷ್ಠಾಪನಾ ಕಾರ್ಯಕ್ರಮ ಅಂಗವಾಗಿ ದೇವಾಲಯದ ಆವರಣದಲ್ಲಿ ಶಾಸಕ ಡಿ.ಸಿ.ತಮ್ಮಣ್ಣ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಪೂರ್ವಭಾವಿ ಸಭೆ ನಡೆಯಿತು.



ಶಾಸಕ ಡಿ.ಸಿ.ತಮ್ಮಣ್ಣ ಮಾತನಾಡಿ, ಯಾವುದೇ ಲೋಪದೋಷವಾಗದಂತೆ ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸಬೇಕು. 30 ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ಹಿನ್ನೆಲೆಯಲ್ಲಿ ಜನದಟ್ಟಣೆ ಉಂಟಾಗುವ ಸಾಧ್ಯತೆ ಇದ್ದು, ವಾಹನ ಸಂಚಾರ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡುವಂತೆ ಆರಕ್ಷಕ ಇಲಾಖೆಗೆ ಸೂಚಿಸಿದ ಅವರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಭದ್ರತೆಗಾಗಿ ಸಿಬ್ಬಂದಿ ನಿಯೋಜಿಸುವಂತೆ ತಿಳಿಸಿದರು.

ಸ್ಥಳದಲ್ಲಿ ಆಂಬುಲೆನ್ಸ್ ವ್ಯವಸ್ಥೆ, ಸಿದ್ಧವಾಗಿರಬೇಕು. ಬರುವ ಭಕ್ತರ ಆರೋಗ್ಯದಲ್ಲಿ ಏರುಪೇರಾದರೆ ತಕ್ಷಣ ಚಿಕಿತ್ಸೆ ನೀಡಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದಲ್ಲದೆ, ಡಿಹೆಚ್‌ಓ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸೂಚಿಸಿದರು.

3 ದಿನಗಳ ಕಾಲ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಬೇಕು. ಉದ್ಘಾಟನೆ ಸಂದರ್ಭ ಯಾವುದೇ ಅಡಚಣೆ ಉಂಟಾಗಬಾರದು. ಎಲ್ಲವನ್ನೂ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ಸೆಸ್ಕಾಂ ಇಲಾಖೆಗೆ ತಿಳಿಸಿದರು.

ಭಾರತೀನಗರ, ಅಣ್ಣೂರು, ದೊಡ್ಡರಸಿನಕೆರೆ ಗ್ರಾಪಂ ವ್ಯಾಪ್ತಿಗೆ ಒಳಪಡುವುದರಿಂದ ಸ್ವಚ್ಛತೆಗೆ ಆದ್ಯತೆ ನೀಡಬೇಕು.3 ದಿನಗಳ ಕಾಲ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಕುಡಿಯುವ ನೀರು, ಸ್ವಚ್ಛತೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಸಭೆಯ ನಂತರ ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳ, ಅನ್ನ ಸಂತರ್ಪಣಾ ಸ್ಥಳ ಹಾಗೂ ದೇವಸ್ಥಾನದಲ್ಲಿ ಹೋಮ ನಡೆಯುವ ಸ್ಥಳಗಳನ್ನು ಪರಿಶೀಲಿಸಿದರು.

ಸಭೆಯಲ್ಲಿ ಸೆಸ್ಕಾಂ, ಆರಕ್ಷಕ, ಆರೋಗ್ಯ, ಕಂದಾಯ ಇಲಾಖೆ ಸೇರಿದಂತೆ ದೊಡ್ಡರಸಿಕೆರೆ, ಭಾರತೀನಗರ ಗ್ರಾಪಂ ಅಧಿಕಾರಿಗಳು ಭಾಗವಹಿಸಿದ್ದರು.

ಈ ವೇಳೆ ಶ್ರೀವೆಂಕಟೇಶ್ವರ ಸೇವಾ ಟ್ರಸ್ಟ್‌ನ ಅಧ್ಯಕ್ಷ ವೆಂಕಟೇಗೌಡ, ಕಾರ್ಯಾಧ್ಯಕ್ಷ ವೆಂಕಟೇಶ್, ಕಾರ್ಯದರ್ಶಿ ನಾಗಪ್ಪ, ರಾಜಣ್ಣ, ವೆಂಕಟೇಶ್, ಸತೀಶ್, ಕಾಳಿಪ್ರಸಾದ್, ವೆಂಕಟೇಶ್, ವಿಶ್ವ, ಗಿರಿಯಣ್ಣ, ಬಸವರಾಜು ಸೇರಿದಂತೆ ಟ್ರಸ್ಟ್ ಪದಾಧಿಕಾರಿಗಳಿದ್ದರು.

ಇಂದು ಸಿಎಆರ್ ಗ್ರೌಂಡ್‌ನಲ್ಲಿ ಪೊಲೀಸ್ ಆಯುಕ್ತರಿಂದ ಪರೇಡ್

ಪ್ರಧಾನಿ ನರೇಂದ್ರ ಮೋದಿ ಅವರ ಆಗಮನ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ಬಂದೋಬಸ್ತ್ ಸಂಬಂಧ ಸೂಚನೆ

ಮೈಸೂರು, ಜೂ.2(ಆರ್‌ಕೆ)–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸಿಎಆರ್ ಮೈದಾನದಲ್ಲಿ ನಾಳೆ(ಜೂ.3) ಬೆಳಗ್ಗೆ 7 ಗಂಟೆಗೆ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರು ಬ್ರೀಫಿಂಗ್ ಪರೇಡ್ ನಡೆಸುವರು. ಜೂನ್ 21ರಂದು ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸುತ್ತಿರುವುದರಿಂದ ಬಂದೋಬಸ್ತ್ ಕರ್ತವ್ಯ ಕುರಿತು ಮೈಸೂರು ನಗರದ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಿದ್ದು, ಸುಗಮ ಸಂಚಾರ ಮತ್ತು ಕಾನೂನು–ಸುವ್ಯವಸ್ಥೆ ಕಾಪಾಡುವ ಬಗ್ಗೆ ಸಲಹೆ ನೀಡುವರು. ಪ್ರಧಾನಿಗಳು ಬರುವ ಮಾರ್ಗ, ವಾಸ್ತವ್ಯ ಸ್ಥಳ, ನಿರ್ಗಮನ, ಕಾರ್ಯಕ್ರಮ ನಡೆಯುವ ಅರಮನೆ ಆವರಣ ಹಾಗೂ ಸುತ್ತಲಿನ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸುವುದು, ಕೇಂದ್ರ ಗುಪ್ತಚಾರ ವಿಭಾಗ, ಎಸ್‌ಪಿಜಿ ನಿರ್ದೇಶನಗಳ ಅನುಷ್ಠಾನ, ಅತೀ ಗಣ್ಯರಿಗೆ ನೀಡುವ ಭದ್ರತಾ ಶಿಷ್ಟಾಚಾರಗಳ ಅನುಷ್ಠಾನಗಳ ಬಗ್ಗೆ ಎಲ್ಲಾ ಸಿವಿಲ್ ಹಾಗೂ ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಪೊಲೀಸ್ ಆಯುಕ್ತರು ಸಲಹೆ–ಸೂಚನೆಗಳನ್ನು ನೀಡುವರು.

ಸ್ಕೂಟರ್‌ಗೆ ಇನ್ನೋವಾ ಡಿಕ್ಕಿ: ಚಾ.ಬೆಟ್ಟದ ರಸ್ತೆಯಲ್ಲಿ ಕೆಲಕಾಲ ಟ್ರಾಫಿಕ್ ಜಾಮ್

ಮೈಸೂರು, ಜೂ.2(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಯಲ್ಲಿನ ಜೆ.ಸಿ.ನಗರ ಬಳಿ ಸ್ಕೂಟರ್‌ಗೆ–ಇನ್ನೋವಾ ಕಾರು ಡಿಕ್ಕಿ ಹೊಡೆದು ಸ್ಕೂಟರ್ ಸವಾರರು ಗಾಯಗೊಂಡ ಘಟನೆ ಗುರುವಾರ ರಾತ್ರಿ ನಡೆದಿದೆ. ಚಾಮುಂಡಿಬೆಟ್ಟದ ಕಡೆ ಹೋಗುತ್ತಿದ್ದ ಇನ್ನೋವಾ ಕಾರು ಎದುರುಗಡೆಯಿಂದ ಬರುತ್ತಿದ್ದ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಕೂಟರ್ ಸವಾರನಿಗೆ ಸಣ್ಣಪುಟ್ಟಗಾಯಗಳಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಅರ್ಧಗಂಟೆಗೂ ಅಧಿಕ ಕಾಲ ಟ್ರಾಫಿಕ್ ಜಾಮ್ ಆಗಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಪರಿಸ್ಥಿತಿಯನ್ನು ತಿಳಿಗೊಳಿಸಿ, ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.




ಗಾಂಜಾ ಮಾರಾಟ: ಮಹಿಳೆ ಬಂಧನ

ಮೈಸೂರು,ಜೂ.2(ಎಸ್‌ಬಿಡಿ)–ಹೆಚ್.ಡಿ.ಕೋಟೆ ತಾಲೂಕು ಕೇರಳ ಗಡಿ ಗ್ರಾಮದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮಹಿಳೆಯನ್ನು ಬಂಧಿಸಿ, 2.28 ಕೆಜಿ ಸೊಪ್ಪು ಹಾಗೂ 800 ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಆರ್.ಚೇತನ್ ತಿಳಿಸಿದರು.

ಕೇರಳ ಗಡಿಯ ಡಿ.ಬಿ.ಕುಪ್ಪೆ ಗ್ರಾಮದ ಮನೆಯೊಂದರಲ್ಲಿ ಗಾಂಜಾ ಸೊಪ್ಪನ್ನು ದಾಸ್ತಾನು ಮಾಡಿಕೊಂಡು, ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮೀದಾರರು ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಅಂತರಸಂತೆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಡಿ.ಬಿ.ಜಯಪ್ರಕಾಶ್, ಸಿಬ್ಬಂದಿ ಶಿವಕುಮಾರ್, ಸುರೇಶ್, ವಿಶ್ವನಾಥ್ ಹಾಗೂ ಸರಸ್ವತಿ ಮೇ 30ರಂದು ಕಾರ್ಯಾಚರಣೆ ನಡೆಸಿ, ಗಾಂಜಾ ಮಾರಾಟ ಮಾಡುತ್ತಿದ್ದ ಮಹಿಳೆಯನ್ನು ಬಂಧಿಸಿದ್ದು, ಈ ಸಂಬಂಧ ಎನ್‌ಡಿಪಿಎಸ್ ಕಾಯ್ದೆಯನ್ವಯ ಪ್ರಕರಣ ದಾಖಲಿಸಲಾಗಿದೆ ಎಂದರು.


112 ಕರೆ ಮಾಡಿ: ಗಾಂಜಾ ದಾಸ್ತಾನು ಅಥವಾ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದರೆ ಸಾರ್ವಜನಿಕರು ಕೂಡಲೇ '112'ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಅಂತಹವರ ಬಗ್ಗೆ ಗೌಪ್ಯತೆ ಕಾಪಾಡಲಾಗುವುದು ಎಂದು ಅವರು ತಿಳಿಸಿದರು.

ಬಿ.ಎಸ್.ನಾಗರತ್ನಮ್ಮ ನಿಧನ



ರಾಮನಗರ,ಜೂ.2–ಜಿಲ್ಲೆಯ ಮಾಗಡಿ ತಾಲೂಕು ಸೋಲೂರು ಗ್ರಾಮದ ಎಸ್.ಪಾಲಾಕ್ಷಯ್ಯ ಅವರ ಧರ್ಮಪತ್ನಿ ಬಿ.ಎಸ್.ನಾಗರತ್ನಮ್ಮ (78) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ಮುಂಜಾನೆ ನಿಧನರಾದರು. ಮೃತರು ಪತಿ, 'ಮೈಸೂರು ಮಿತ್ರ' ವರದಿಗಾರ ಎಸ್.ಪಿ.ನಂಜಪ್ಪ ಸೇರಿದಂತೆ ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೊಲೀಸ್ ಅಧಿಕಾರಿಗಳಿಂದ ಮಟ್ಕಾ ದಂಧೆ ನಡೀತಿದೆ: ಹೆಚ್.ಡಿ.ರೇವಣ್ಣ



ಹಾಸನ, ಜೂ.2– ಹಾಸನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿವೈಎಸ್‌ಪಿ ಮಟ್ಕಾ ದಂಧೆ ನಡೆಸುತ್ತಿದ್ದಾರೆ. ಪೊಲೀಸ್ ಠಾಣೆಯನ್ನು ರೌಡಿಗಳ ಅಡ್ಡೆಯಾಗಿ ಮಾಡಿಕೊಂಡು ದಿನಕ್ಕೆ ಲಕ್ಷ ರೂ. ವಸೂಲಿ ಮಾಡುತ್ತಿದ್ದಾರೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆರೋಪ ಮಾಡಿದ್ದಾರೆ. ಪೆನ್ಷನ್ ಮೊಹಲ್ಲಾ ಇನ್ಸ್‌ಪೆಕ್ಟರ್ ರೇಣುಕಾಪ್ರಸಾದ್, ನಗರ ಠಾಣೆ ಇನ್ಸ್‌ಪೆಕ್ಟರ್ ಆರೋಗ್ಯಪ್ಪ ಮತ್ತು ಡಿವೈಎಸ್‌ಪಿ ಉದಯ ಭಾಸ್ಕರ್ ಅವರನ್ನು ಅಮಾನತುಪಡಿಸಬೇಕು. ಅವರ ಮೊಬೈಲ್‌ಗಳನ್ನು ವಶಪಡಿಸಿಕೊಂಡು ಅವರು ಯಾವ್ಯಾವ ರೌಡಿ ಜೊತೆ ಸಂಪರ್ಕ ಹೊಂದಿದ್ದಾರೆ ಎಂಬುದನ್ನು ಪರಿಶೀಲನೆ ನಡೆಸಬೇಕು. ಈ ಅಧಿಕಾರಿಗಳು 18 ಕೇಸ್‌ಗಳನ್ನು ಮುಚ್ಚಿ ಹಾಕಿದ್ದಾರೆ. ಶಾಸಕರ ಪ್ರಕರಣಕ್ಕೆ ಬಿ–ರಿಪೋರ್ಟ್ ಹಾಕಿದ್ದೀನಿ ಎಂದು ಇನ್ಸ್‌ಪೆಕ್ಟರ್ ರೇಣುಕಾಪ್ರಸಾದ್ ಬರೆದಿರುವುದು ನಮಗೆ ಸಿಕ್ಕಿದೆ. ಇವರು 4 ಕೋಟಿ ಮೌಲ್ಯದ ಮನೆ ಕಟ್ಟಿಸುತ್ತಿದ್ದಾರೆ. ತಮ್ಮ ವಾಟ್ಸಾಪ್‌ನಲ್ಲಿ 3 ವರ್ಷದಲ್ಲಿ ಸಾಕಷ್ಟು ಹಣ ಮಾಡಿಬಿಡಬೇಕು ಎಂದು ಅವರೇ ಬರೆದುಕೊಂಡಿದ್ದಾರೆ. ಜೆಡಿಎಸ್ ಕಾರ್ಯಕರ್ತರ ವಿರುದ್ಧ ಅಧಿಕಾರಿಗಳು ಅನೇಕ ಸುಳ್ಳು ಕೇಸುಗಳನ್ನು ಹಾಕಿದ್ದಾರೆ. ಇವರ ಬಗ್ಗೆ ನಮ್ಮಲ್ಲಿರುವ ದಾಖಲೆಗಳನ್ನು ಹಿರಿಯ ಅಧಿಕಾರಿಗಳಿಗೆ ಕೊಡುತ್ತಿದ್ದೇವೆ. ಈ ಮೂವರನ್ನೂ ಅಮಾನತುಪಡಿಸಿ ದಕ್ಷಿಣ ವಲಯ ಐಜಿಪಿಯವರು ಬೇರೆ ಅಧಿಕಾರಿಗಳಿಂದ ತನಿಖೆ ನಡೆಸಬೇಕು ಎಂದರು.



ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಪ್ರಚಾರ ಮೇಯರ್ ಸುನಂದಾ ಪಾಲನೇತ್ರ ಅವರು ವಕೀಲರಾದ ರಾಜಶೇಖರಮೂರ್ತಿ, ಉಷಾರಾಣಿ, ನಂಜುಂಡಸ್ವಾಮಿ, ರವಿಚಂದ್ರ, ರವಿಕುಮಾರ್ ಅವರ ಕಚೇರಿಗಳಲ್ಲಿ ಮತಯಾಚಿಸಿದರು. ಈ ವೇಳೆ ಶ್ರೀ ಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಶಿವರಾಜ್ ಇದ್ದರು.

ಶಿಕ್ಷಣದಲ್ಲಿ ಸತ್ಯ ಇರಬೇಕೇ ಹೊರತು ಯಾವುದೇ ಸಿದ್ಧಾಂತಗಳಲ್ಲ

ಒಂದನೇ ಪುಟದಿಂದ

ಪ್ರಾಮಾಣಿಕತೆ ಇಲ್ಲವೇ ಇಲ್ಲ. ಆದ್ದರಿಂದ ಅಕಾಡೆಮಿ ಪ್ರಶಸ್ತಿ ವಾಪಸ್ಸು ಕೊಡುತ್ತೇವೆ' ಎಂದು ಹೇಳತೊಡಗಿದರು ಎಂದು ತಿಳಿಸಿದರು.

ಆಗ ಅಕಾಡೆಮಿ ಅಧ್ಯಕ್ಷರು, ಏನು ಮಾಡಬೇಕೆಂದು ನನ್ನ ಸಲಹೆ ಕೇಳಿದ್ದರು. ಅದಕ್ಕೆ ನಾನು, 'ಪ್ರಶಸ್ತಿ ವಾಪಸ್ಸು ಕೊಟ್ಟರೆ ಸ್ವೀಕರಿಸಿ' ಎಂದಿದ್ದೆ. ಜೊತೆಗೆ ಪ್ರಶಸ್ತಿ ನೀಡುವಾಗ ಕೊಟ್ಟಿರುವ ನಗದು ವಾಪಸ್ಸು ನೀಡುವಂತೆಯೂ ಅವರಿಗೆ ಪತ್ರ ಬರೆಯಿರಿ' ಎಂದಿದ್ದೆ. ಆದರೆ ಅವರು ಸುಮ್ಮನಾದರು. ಈಗಿನ ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿಸಿ ಗಲಾಟೆಗಳನ್ನು ಬೇರೆ ಬೇರೆ ರೂಪದೊಳಗೆ ಆಗುವಂತೆ ಮಾಡಿಸಿಯೇ ಮಾಡಿಸುತ್ತಾರೆ. ಇದರೊಳಗೆ ಹೊಸದೇನಿಲ್ಲ ಎಂದು ಹೇಳಿದರು.

ಮಹಾರಾಷ್ಟ್ರದಲ್ಲಿ ಮಹಾಬಲೇಶ್ವರ ಎಂಬ ಹಿಲ್‌ಸ್ಟೇಷನ್ ಇದೆ. ಇದಕ್ಕೆ 21 ಮೈಲಿ ದೂರದಲ್ಲಿ ಪ್ರತಾಪ್ ಗಢ್ ಕೋಟೆ ಇದೆ. ನಾನು ಅದನ್ನು ನೋಡಲು ಹೋಗಿದ್ದೆ. ಅಫ್ಜಲ್‌ಖಾನ್‌ನನ್ನು ಶಿವಾಜಿ ಹತ್ಯೆ ಮಾಡಿದ ಸ್ಥಳ ಪ್ರತಾಪ್‌ಗಢ್. ಶಿವಾಜಿ ಸೋಲಿಸಲು ಬೀಜಾಪುರದ ಸುಲ್ತಾನ ತನ್ನ ಸೇನಾಧಿಕಾರಿ ಅಫ್ಜಲ್‌ಖಾನ್ ಕಳುಹಿಸಿದ್ದ. ಆತ ಆರೂವರೆ ಅಡಿ ಎತ್ತರದ ವ್ಯಕ್ತಿ. ಈತ ಯುದ್ಧಕ್ಕೆ ಬದಲು ಮಾತುಕತೆ ನಡೆಸಲು ಬರಬೇಕೆಂದು ಶಿವಾಜಿ ಬಳಿ ಹೇಳಿ ಕಳುಹಿಸಿದ್ದ. ಶಿವಾಜಿ ಬಹಳ ಬುದ್ಧಿವಂತ. ತನ್ನ ಮೇಲೆ ದಾಳಿ ನಡೆಯುವ ಬಗ್ಗೆ ಮೊದಲೇ ಊಹಿಸಿ, ವ್ಯಾಘ್ರನಖ ಇಟ್ಟುಕೊಂಡು ಭೇಟಿಗೆ ಹೋಗಿದ್ದ. ಅಫ್ಜಲ್ ಖಾನ್, ಶಿವಾಜಿಯನ್ನು ಕೊಲ್ಲಲು ಯತ್ನಿಸಿದಾಗ, ಶಿವಾಜಿಯೇ ವ್ಯಾಘ್ರನಖದ ಮೂಲಕ ಹತ್ಯೆ ಮಾಡಿದ. ನಾನು ಪ್ರೌಢಶಾಲೆಯಲ್ಲಿದ್ದಾಗ ಇದನ್ನು ಓದಿದ್ದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಗೈಡ್ ಹತ್ಯೆ ಮಾಡಿದ ಸ್ಥಳವನ್ನು ಮೊದಲಿಗೆ ತೋರಿಸಲಿಲ್ಲ ಎಂದು ತಿಳಿಸಿದರು.

ವ್ಯಾಘ್ರನಖದ ಮೂಲಕ ಹತ್ಯೆ ಮಾಡಿದ ಸ್ಥಳ ತೋರಿಸಲೇ ಇಲ್ಲವಲ್ಲ ಎಂದು ಗೈಡ್ ಅನ್ನು ಕೇಳಿದ್ದೆ. ಅದಕ್ಕೆ ಆತ ನನಗೆ ಗೊತ್ತಿಲ್ಲ ಎಂದ. ಅವನಿಗೆ ಐದು ರೂಪಾಯಿ ಕೊಟ್ಟ ಬಳಿಕ ತೋರಿಸಲು ಮುಂದಾದ, ಅಫ್ಜಲ್‌ಖಾನ್ ಹತ್ಯೆ ಬಗ್ಗೆ ಇಲ್ಲಿ ದೊಡ್ಡ ಬೋರ್ಡ್ ಇತ್ತು. ಆದರೆ ಕಳೆದ ಚುನಾವಣೆ ಸಂದರ್ಭದಲ್ಲಿ ಮುಸಲ್ಮಾನರು ಈ ಬೋರ್ಡ್ ತೆಗೆದು ತಮಗೆ ಕೊಟ್ಟರೆ ದರ್ಗಾ ಕಟ್ಟುತ್ತೇವೆ ಎಂದಿದ್ದರು. ಇದಕ್ಕೆ ಸರ್ಕಾರ ಸಮ್ಮತಿಸಿತು. ಈಗ ಇದನ್ನು ದರ್ಗಾ ಮಾಡಿದ್ದಾರೆ ಎಂದು ಆತ ಹೇಳಿದ. ದರ್ಗಾ ಎಂದರೆ ದೇವರ ಪ್ರಾರ್ಥನೆ ಮಾಡುವವರ ಹೆಸರಿನಲ್ಲಿ ಕಟ್ಟುವುದು ಇದೆ. ಆದರೆ ಈತ ಸೇನಾಧಿಕಾರಿ ಆಗಿದ್ದವ ಎಂದರು.

ನಾನು ಅಲ್ಲೇ ಯೋಚನೆ ಮಾಡಿದ್ದೆ ನೇಂದರೆ, ಚುನಾವಣೆ ಬಂದರೆ ನಾವು ಏನು ಬೇಕಾದರೂ ಮಾಡುತ್ತೇವೆ. ಹೆತ್ತ ತಾಯಿ ಜುಟ್ಟು ಹಿಡಿದು ಬೇಕಾದರೂ ಕೊಟ್ಟು ಬಿಡುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನಿಮಗೊಂದು ಪುಸ್ತಕ ತೋರಿಸುತ್ತೇನೆ ಎಂದು `My Frozen Turbulence in Kashmir ಎಂಬ ಪುಸ್ತಕ ಪ್ರದರ್ಶಿಸಿದ ಅವರು, ಇದನ್ನು ಜಗಮೋಹನ್ ಎನ್ನುವವರು ಬರೆದಿದ್ದಾರೆ. ಅವರು ಕಾಶ್ಮೀರ ಗೌರ್ನರ್ ಆಗಿದ್ದವರು. ಕಾಶ್ಮೀರದಲ್ಲಿ ಇಂದು ಏನಾಗಿದೆ, ದೆಹಲಿಯಲ್ಲಿ ಇದ್ದ ಆಡಳಿತಗಾರರು ಓಟಿಗಾಗಿ ಏನೆಲ್ಲಾ ಮಾರಿಕೊಂಡ ಬಗ್ಗೆ ಇದರಲ್ಲಿ ಬರೆದಿದ್ದಾರೆ. ಈ ಪುಸ್ತಕವನ್ನು ಈಗ ನಾನು ಓದುತ್ತಿದ್ದೇನೆ. ನೀವು ಓದಬೇಕು ಎಂದು ಸಲಹೆ ನೀಡಿದರು.

ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರ ವಿರುದ್ಧ ವಿನಾಕಾರಣ ವಿರೋಧ ವ್ಯಕ್ತಪಡಿಸಲಾಯಿತು. ಅವರು ಕೊಡಗಿನವರು. ಟಿಪ್ಪು ಕೊಡಗಿನಲ್ಲಿ ಎಷ್ಟೋ ಜನ ಬಡವರನ್ನು ಹತ್ಯೆ ಮಾಡಿ, ಎಷ್ಟೋ ಜನರನ್ನು ಮತಾಂತರ ಮಾಡಿದ. ತಮ್ಮ ಮನೆತನದವರು ಎಷ್ಟೊ ಜನ ಟಿಪ್ಪುವಿನಿಂದ ಸಾವನ್ನಪ್ಪಿದರು ಎಂಬುದು ಕಾರ್ಯಪ್ಪನವರಿಗೆ ಗೊತ್ತಿತ್ತು. ಅವರು ಭಾಷಣದಲ್ಲಿ ಅದನ್ನು ಹೇಳಿದ್ದರು. ಅದಕ್ಕೆ ಇವರಿಗೆ ಕೋಪ ಬಂದಿತು. ರಂಗಾಯಣದ ಈ ಹಿಂದಿನ ನಿರ್ದೇಶಕರು ರಂಗಾಯಣಕ್ಕೆ ಬಂದು ಚಳವಳಿಯನ್ನೇ ಆರಂಭಿಸಿದರು ಎಂದರು. ಕಾರ್ಯಪ್ಪರನ್ನು ವಜಾಗೊಳಿಸಬೇಕು ಎಂದು ಹೋರಾಟ ಮಾಡಿದರು. ಮುಖ್ಯಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಮನವಿ ಸಲ್ಲಿಸಿದರು. ದಿನ ಕಳೆದಂತೆ ಹೋರಾಟ ಕೈಬಿಟ್ಟರು. ನಾಟಕದ ಮೂಲಕ ಚಳವಳಿ ಮಾಡಬೇಕೆಂದು ಅವರು ಮುಕ್ತವಾಗಿಯೇ ಹೇಳುತ್ತಾರೆ. ಕಾಳಿದಾಸ ನಾಟಕ ಬರೆದಿದ್ದು ಚಳುವಳಿ ಮಾಡಲೇ? ಎಂದು ಪ್ರಶ್ನಿಸಿದ ಅವರು, ಇಲ್ಲಿ ರಸಾನುಭವ ಮುಖ್ಯ. ಚಳುವಳಿ ಮಾಡದವರು ಸಾಹಿತಿಯೇ ಅಲ್ಲ ಎಂದು ಇವರು ಪ್ರತಿಪಾದಿಸುತ್ತಾರೆ. ಕಾರ್ಯಪ್ಪರನ್ನು ರಂಗಾಯಣದ ನಿರ್ದೇಶಕ ಸ್ಥಾನದಿಂದ ತೆಗೆಸಬೇಕು ಎಂದು ಬಹಳ ಪ್ರಯತ್ನಿಸಿದರು. ಆದರೆ ಅವರು ಬಗ್ಗಲಿಲ್ಲ. ಸರ್ಕಾರವೂ ಗಟ್ಟಿಯಾಗಿತ್ತು ಎಂದರು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್ ಮತ್ತಿತರರು ಹಾಜರಿದ್ದರು.

ಪಠ್ಯಪುಸ್ತಕ ಪರಿಷ್ಕರಣೆ ಸದಸ್ಯ ಸ್ಥಾನದಿಂದ ನನ್ನ ಕೈಬಿಟ್ಟರು!

'ನಮ್ಮ ಪಠ್ಯಪುಸ್ತಕಗಳು ಕಲುಷಿತವಾಗಿವೆ. ಅವುಗಳನ್ನೆಲ್ಲಾ ನಾವು ತೆಗೆಯಬೇಕಿದೆ. ದೇಶದ ಏಕತೆ ಸಾಧಿಸಲು ಅದನ್ನು ಮಾಡಬೇಕಿದೆ. ಅದು ಈಗಿನ ನಮ್ಮ ಕರ್ತವ್ಯ' ಎಂದು ಹೇಳಿದರು. ಅವರು ಸುಮ್ಮನೆ ಪಠ್ಯಪುಸ್ತಕ ಸ್ವಚ್ಛಗೊಳಿಸಬೇಕು ಎಂದು ಹೇಳುತ್ತಿದ್ದರೇ ಹೊರತು ಸ್ಪಷ್ಟವಾಗಿ ಏನನ್ನೂ ಹೇಳುತ್ತಿರಲಿಲ್ಲ. ಹೀಗಾಗಿ ನಾನು ತಾವು ಹೇಳುವುದನ್ನು ಉದಾಹರಣೆ ಸಹಿತ ಹೇಳಬೇಕೆಂದು ಕೇಳಿದೆ.

ಅದಕ್ಕೆ ಅವರು, 'ಉದಾಹರಣೆಗೆ ಮೊಘಲ್ ಚಕ್ರವರ್ತಿ ಔರಂಗಜೇಬನು ದೇವಾಲಯಗಳನ್ನು ನೆಲಸಮ ಮಾಡಿದ. ಅಲ್ಲೆಲ್ಲಾ ಮಸೀದಿ ಕಟ್ಟಿದ ಎಂದೆಲ್ಲಾ ಇದೆ. ಅವುಗಳನ್ನು ತೆಗೆಯಬೇಕು. ಮಕ್ಕಳ ಮನಸ್ಸಿನೊಳಗೆ ಅದೆಲ್ಲಾ ಏಕೆ ಬೇಕು' ಎಂದರು. ಇದಕ್ಕೆ ನಾನು 'ಔರಂಗಜೇಬ್ ಹಾಗೆ ಮಾಡಿದ್ದೂ ನಿಜವೋ ಸುಳ್ಳೋ ಹೇಳಿ' ಎಂದೆ. ಅವರಿಂದ ಸರಿಯಾದ ಉತ್ತರ ದೊರೆಯಲಿಲ್ಲ ಎಂದು ತಿಳಿಸಿದರು.

ನಾನು ಅವರಿಗೆ 'ಮಸೀದಿ ಬಳಿ ಬಸವನ ಪ್ರತಿಮೆ ಮಸೀದಿ ಇದ್ದರೆ, ಅದು ಏನು ಸೂಚಿಸುತ್ತದೆ ಹೇಳಿ' ಎಂದು ಹೇಳಿದೆ. ಅದಕ್ಕೆ ಅವರು, 'ನೀವೇ ಹೇಳಿ' ಎಂದಾಗ, ನಾನು, 'ಅಲ್ಲಿ ದೇವಸ್ಥಾನ ಇತ್ತು ಎಂಬುದನ್ನು ತೋರಿಸುತ್ತದೆ' ಎಂದೆ. 'ನಾಳೆ ವಿದ್ಯಾರ್ಥಿಗಳು ಭೇಟಿ ನೀಡಿದಾಗ, ಬಸವ ಇದ್ದ ಮೇಲೆ ದೇವಸ್ಥಾನ ಇರಬೇಕಲ್ಲವೇ? ಎಂದು ಪ್ರಶ್ನೆ ಮಾಡಿದರೆ, ಏನು ಹೇಳುವುದು ಎಂದು ನಾನು ಅವರಿಗೆ ಮತ್ತೆ ಪ್ರಶ್ನಿಸಿದಾಗ, ಅವರಿಗೆ ಉತ್ತರ ಕೊಡಲಾಗಲಿಲ್ಲ ಎಂದು ಹೇಳಿದರು.

ಇದಾದ ಬಳಿಕ ಊಟದ ವೇಳೆಯಲ್ಲಿ ನನ್ನನ್ನು ಪ್ರತ್ಯೇಕವಾಗಿ ಕರೆದುಕೊಂಡು ಹೋದ ಪಾರ್ಥಸಾರಥಿಯವರು, ನನ್ನ ಹೆಗಲ ಮೇಲೆ ಕೈ ಹಾಕಿ, 'ನೀವು ಬುದ್ಧಿವಂತರು ಎಂದು ಕೇಳಿದ್ದೇನೆ. ದೇಶ ಆಳುವಾಗ ವಾದ ಮಾಡಿಕೊಂಡು ಹೋಗಲು ಸಾಧ್ಯವಿಲ್ಲ. ಅರ್ಥ ಮಾಡಿಕೊಳ್ಳಿ' ಎಂದು ಹೇಳಿ ಹೋದರು. ಬಳಿಕ ಮತ್ತೆ ಸಭೆ ಆರಂಭವಾದಾಗ, 'ಮುಂದಿನ ಹಂತದ ಚರ್ಚೆಗೆ ಹೋಗೋಣವೇ?' ಎಂದು ಪಾರ್ಥಸಾರಥಿಯವರು ಕೇಳಿದರು. ಈ ವೇಳೆ 'ಮೊದಲ ಹಂತದ ಚರ್ಚೆಗೆ ಉತ್ತರ ಹೇಳಬೇಕೆಂದು' ನಾನು ಆಗ್ರಹಿಸಿದೆ. ಅವರಿಗೆ ಕೋಪ ಬಂದಿತು. ಸ್ವಲ್ಪ ಸಮಯದ ಬಳಿಕ 'ಇನ್ನೊಂದು ದಿನ ಸಭೆಯಲ್ಲಿ ಚರ್ಚಿಸೋಣ' ಎಂದು ಸಭೆ ಮುಕ್ತಾಯಗೊಳಿಸಿದರು.

ಇದಾದ 15 ದಿನಗಳಲ್ಲಿ ಸಮಿತಿಯಿಂದ ನನ್ನನ್ನು ಕೈಬಿಟ್ಟು ಉಳಿದಂತೆ ಅದೇ ಸದಸ್ಯರು ಇರುವ ಸಮಿತಿಯ ಪುನರ್‌ರಚನೆ ಮಾಡಿರುವ ಸುತ್ತೋಲೆ ಬಂದಿತು. ನನ್ನ ಜಾಗಕ್ಕೆ ಕಮ್ಯೂನಿಸ್ಟ್ ಒಬ್ಬನನ್ನು ಹಾಕಲಾಗಿತ್ತು. ಆತ ಸಮಾಜ ವಿಜ್ಞಾನ, ಸಾಹಿತ್ಯ, ಅರ್ಥಶಾಸ್ತ್ರ ಮತ್ತು ಇತಿಹಾಸ ಸೇರಿದಂತೆ ಎಲ್ಲೆಡೆಯೂ ತಿದ್ದು ಹಾಕಿದ. ಇದನ್ನು ಎನ್‌ಸಿಇಆರ್‌ಟಿ ಪ್ರಕಟಣೆ ಮಾಡಿತು. ಆವಾಗ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಿತು. ನಮ್ಮ ರಾಜ್ಯವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ಅದನ್ನೇ ಅಳವಡಿಸಿಕೊಳ್ಳಲಾಯಿತು. ಇದನ್ನು ಹೇಳಲು ಕಾರಣ, ಪಠ್ಯಪುಸ್ತಕ ಸಂಬಂಧ ಈ ರೀತಿ ಮಾಡಿದ್ದು ಪ್ರಾಮಾಣಿಕವೇ? ಎಂಬ ಪ್ರಶ್ನೆ ಮೂಡುತ್ತದೆ ಎಂದರು.

ಈ ಬಳಿಕ ನಮ್ಮ ದೇಶದೊಳಗಿನ ಸತ್ಯಸಂಗತಿ ಬಗ್ಗೆ ಓದಲು ಶುರು ಮಾಡಿದೆ. ನಾಲ್ಕೈದು ವರ್ಷಗಳ ಕಾಲ ಓದಿದೆ. ಇದರ ಪರಿಣಾಮ ವಾಗಿ 'ಆವರಣ' ಕಾದಂಬರಿ ಬರೆದೆ. ಆವರಣ ಬಂದಾಗ, ಅನಂತಮೂರ್ತಿ ಸೇರಿದಂತೆ ಹಲವರು ಗಲಾಟೆ ಶುರು ಮಾಡಿ, ಈ ಭೈರಪ್ಪನವರಿಗೆ ಕಾದಂಬರಿ ಬರೆಯಲೇ ಬರುವುದಿಲ್ಲ. ಬರೀ ಸುಳ್ಳು ಬರೆದಿದ್ದಾರೆ ಎಂದು ಟೀಕೆ ಮಾಡಿದ್ದಲ್ಲದೇ ವಿಚಾರ ಸಂಕಿರಣವನ್ನೂ ಮಾಡಿದ್ದರು ಎಂದು ಹೇಳಿದರು.

ಇದರಿಂದ ಜನತೆಯಲ್ಲಿ ಕಾದಂಬರಿ ಬಗ್ಗೆ ಆಕರ್ಷಣೆ ಹುಟ್ಟಿತು. ಪರಿಣಾಮವಾಗಿ 4 ದಿನಕ್ಕೆ ಹೊಸ ಮುದ್ರಣ ಬರುವಂತಾಯಿತು. ಈಗ ರಾಜ್ಯದಲ್ಲಿ 'ಆವರಣ' 65ನೇ ಮುದ್ರಣ ಬಂದಿದೆ. ಮಹಾರಾಷ್ಟ್ರದಲ್ಲಿ 19ನೇ ಮುದ್ರಣ ಕಂಡಿದೆ. ಇಂಗ್ಲಿಷ್ ಭಾಷಾಂತರದಲ್ಲಿ 18ನೇ ಮುದ್ರಣ ಬಂದಿದ್ದು, ಭಾರತದ ಬಹುತೇಕ ಎಲ್ಲಾ ಭಾಷೆಗಳಲ್ಲಿ ಇದು ಮುದ್ರಣ ಕಂಡಿದೆ ಎಂದು ತಿಳಿಸಿದರು.

ದಾಳಿಗೆ ಖಂಡನೆ

ಎಂದಾಗ, ಹೋರಾಟಕ್ಕಿಳಿದವರಿಗೆ ಏನು ಸಲಹೆ ಕೊಡುತ್ತೀರಾ? ಎಂಬ ಪ್ರಶ್ನೆಗೆ, ನಾನು ಏನೂ ಹೇಳುವುದಿಲ್ಲ ಎಂದರು. ಕೆಲ ಸಾಹಿತಿಗಳು ಪಠ್ಯಪುಸ್ತಕರಿಂದ ತಮ್ಮ ಪಠ್ಯ ಕೈಬಿಡಲು ಬೇಡಿಕೆ ಇಟ್ಟಿದ್ದಾರೆ. ಈ ಬಗ್ಗೆ ಹೇಳಿ ಎಂದಾಗ, ಈ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ ಎಂದು ಹೆಚ್ಚು ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಇಂದು ನಾನು ಪತ್ರಿಕಾಗೋಷ್ಠಿ ಮಾಡುತ್ತಿಲ್ಲ. ಪತ್ರಿಕಾ ಹೇಳಿಕೆ ನೀಡುತ್ತೇನಷ್ಟೇ. ಆದ್ದರಿಂದ ನಾನು ಹೇಳಬೇಕಿರುವುದನ್ನು ಹೇಳುತ್ತೇನೆ. ನೀವು ನನಗೆ ಪ್ರಶ್ನೆ ಕೇಳಬೇಡಿ ಎಂದು ಮಾಧ್ಯಮದವರೊಂದಿಗೆ ಮಾತು ಆರಂಭಿಸುವ ಮುನ್ನವೇ ಭೈರಪ್ಪ ಹೇಳಿದ್ದರು. ಹಾಗಾಗಿ ಕೊನೆಯಲ್ಲಿಯೂ ಅವರು ಪ್ರಶ್ನೆಗಳಿಗೆ ಹೆಚ್ಚು ಉತ್ತರಿಸಲು ನಿರಾಕರಿಸಿದರು.

ಮೈಸೂರು ಮಿತ್ರ ಶುಕ್ರವಾರ 3 ಜೂನ್ 2022

ಜೂ.14ಕ್ಕೆ ಚಾಮುಲ್ ಚುನಾವಣೆ

ಬಿಜೆಪಿ-ಕಾಂಗ್ರೆಸ್ ನಡುವೆ ಹಣಾಹಣಿ

ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಜೂ.2-ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಚಾಮುಲ್)ದ ಎರಡನೇ ಅವಧಿಯ ನಿರ್ದೇಶಕರ ಸ್ಥಾನಗಳಿಗೆ ಜೂ.14ರಂದು ಚುನಾವಣೆ ನಡೆಯಲಿದ್ದು, ಅಧಿಕಾರಕ್ಕಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ತೀವ್ರ ಹಣಾಹಣಿ ಏರ್ಪಟ್ಟಿದೆ.

ಚಾಮರಾಜನಗರ ತಾಲೂಕಿನ 2 ಸ್ಥಾನ, ಗುಂಡ್ಲುಪೇಟೆ ತಾಲೂಕು 2, ಹನೂರು ತಾಲೂಕು 2, ಕೊಳ್ಳೇಗಾಲ, ಯಳಂದೂರು ಹಾಗೂ ಮಹಿಳಾ ಸಂಘಗಳ ಕ್ಷೇತ್ರಗಳ ತಲಾ ಒಂದೊಂದು ಸ್ಥಾನ ಸೇರಿದಂತೆ ಒಟ್ಟು 9 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈಗಾಗಲೇ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದ್ದು, ಈವರೆಗೆ ಒಟ್ಟು 8 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ಜೂ.6, ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾಗಿದ್ದು, ಜೂ.7ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಜೂ.8 ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದೆ.

ಜೂ.14ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದ ಬಳಿ ಇರುವ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಸಂಕೀರ್ಣದಲ್ಲಿ ಮತದಾನ ನಡೆಯಲಿದೆ. ಅಂದೇ(ಜೂ.14) ಮತ ಎಣಿಕೆ ಕಾರ್ಯ ನಡೆದು, ಫಲಿತಾಂಶ ಪ್ರಕಟವಾಗಲಿದೆ.

2015ರಲ್ಲಿ ಅಸ್ತಿತ್ವಕ್ಕೆ ಬಂದ ಚಾಮುಲ್‌ನ ಮೊದಲ ಆಡಳಿತ ಮಂಡಳಿಗೆ 2017ರ ಜೂನ್‌ನಲ್ಲಿ 8 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಆಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಬೆಂಬಲಿತರು ಗೆಲುವು ಸಾಧಿಸಿ ಅಧಿಕಾರ ನಡೆಸಿದ್ದರು. ಈಗ ಹನೂರು ತಾಲೂಕಿನ 1 ನಿರ್ದೇಶಕ ಸ್ಥಾನ ಹೆಚ್ಚಾಗಿ ರುವ ಕಾರಣ ಒಟ್ಟು 9 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ರಾಜ್ಯ ಸರ್ಕಾರ ಒಬ್ಬರನ್ನು ನಾಮನಿರ್ದೇಶನದ ಮೂಲಕ ನೇಮಕ ಮಾಡಲಿದ್ದು, ಪಶುಸಂಗೋಪನಾ ಇಲಾಖೆಯ ಪ್ರತಿನಿಧಿ, ಸಹಕಾರ ಇಲಾಖೆಯ ಪ್ರತಿನಿಧಿ ಹಾಗೂ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳಿಯ ಪ್ರತಿನಿಧಿಗೆ ಅಧ್ಯಕ್ಷರ ನೇಮಕದ ಸಂದರ್ಭದಲ್ಲಿ ಮತದಾನದ ಹಕ್ಕಿದ್ದು, ಅಧ್ಯಕ್ಷರ ಆಯ್ಕೆ ವೇಳೆ ಒಟ್ಟು 13 ಮಂದಿಗೆ ಮತದಾನದ ಹಕ್ಕು ಇದೆ.

ಚುನಾವಣೆಯಲ್ಲಿ ಗೆದ್ದು, ಅಧಿಕಾರವನ್ನು ಮತ್ತೊಮ್ಮೆ ಹಿಡಿಯಬೇಕೆಂದು ಪಣತೊಟ್ಟಿರುವ ಕಾಂಗ್ರೆಸ್, ಜಿಲ್ಲೆಯ ಎಲ್ಲಾ ಸ್ಥಾನಗಳಿಗೆ ತನ್ನ ಬೆಂಬಲಿತ ಅಭ್ಯರ್ಥಿಗಳನ್ನು ಈಗಾಗಲೇ ಆಯ್ಕೆ ಮಾಡಿದೆ. ಆದರೆ ಬಿಜೆಪಿ ತನ್ನ ಬೆಂಬಲಿತರನ್ನು ಇನ್ನು ಸಹ ಅಂತಿಮಗೊಳಿಸಿಲ್ಲ. ಕಾಂಗ್ರೆಸ್ ತನ್ನ ಬೆಂಬಲಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದರಿಂದ ಆ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಮತದಾರರನ್ನು ಭೇಟಿ ಮಾಡಿ ಮತಯಾಚನೆಯಲ್ಲಿ ತೊಡಗಿದ್ದಾರೆ. ಬಿಜೆಪಿ ಬೆಂಬಲಿತರಾಗಿ ಸ್ಪರ್ಧಿಸಲು ಇಚ್ಛಿಸಿರುವವರೂ ಸಹ ಮತ ಬೇಟೆಯಲ್ಲಿ ತೊಡಗಿದ್ದಾರೆ. ಚುನಾವಣೆಗೆ ಇನ್ನು ಕೆಲವೇ ದಿನಗಳು ಮಾತ್ರ ಬಾಕಿ ಇರುವುದರಿಂದ ಹಾಗೂ ನಾಮಪತ್ರ ಸಲ್ಲಿಕೆ ಪೂರ್ಣಗೊಂಡ ನಂತರ ಚುನಾವಣೆಯ ಕಾವು ಮತ್ತಷ್ಟು ಏರಿಕೆ ಆಗಲಿದೆ.



ಮತದಾರರ ಸಂಖ್ಯೆ

- ಚಾಮರಾಜನಗರ ತಾಲೂಕು- 116
- ಗುಂಡ್ಲುಪೇಟೆ ತಾಲೂಕು - 117
- ಹನೂರು ತಾಲೂಕು - 73
- ಕೊಳ್ಳೇಗಾಲ ತಾಲೂಕು - 46
- ಯಳಂದೂರು ತಾಲೂಕು - 13
- ಮಹಿಳಾ ಕ್ಷೇತ್ರ - 84
- ಒಟ್ಟು - 449

"ಚಾಮುಲ್‌ನ ಅಧಿಕಾರವನ್ನು ಕಾಂಗ್ರೆಸ್ ತನ್ನ 'ಕೈ' ವಶ ಮಾಡಿಕೊಳ್ಳಬೇಕಾದರೆ ಚುನಾವಣೆ ನಡೆಯಲಿರುವ 9 ಸ್ಥಾನಗಳ ಪೈಕಿ 7 ಸ್ಥಾನಗಳಲ್ಲಿ ಗೆಲುವು ಸಾಧಿಸಲೇಬೇಕಾಗಿದೆ. ಆದರೆ ಬಿಜೆಪಿ ಕಮಲವನ್ನು ಮೊದಲ ಬಾರಿಗೆ ಅರಳಿಸಲು ಚುನಾವಣೆ ನಡೆಯುವ 9 ಕ್ಷೇತ್ರಗಳಲ್ಲಿ 3 ಕ್ಷೇತ್ರಗಳಲ್ಲಿ ಗೆದ್ದರೆ ಸಾಕು. ಏಕೆಂದರೆ ಸರ್ಕಾರ ನಾಮನಿರ್ದೇಶನ ಮಾಡುವ ಒಬ್ಬರು ಹಾಗೂ ಮೂವರು ಅಧಿಕಾರಿಗಳಿಗೆ ಮತದಾನದ ಹಕ್ಕು ಇರುವುದರಿಂದ (ಅಧಿಕಾರಿಗಳು ಯಾವ ಪಕ್ಷ, ಸರ್ಕಾರ ಅಧಿಕಾರಿದಲ್ಲಿ ಇರುತ್ತದೆ ಆ ಪಕ್ಷದ ಬೆಂಬಲಿತ ಅಭ್ಯರ್ಥಿಗೆ ಮತ ನೀಡುವುದು ವಾಡಿಕೆ) ಚಾಮುಲ್‌ನ ಅಧಿಕಾರವನ್ನು ಹಿಡಿಯಬಹುದು ಎಂದು ಬಿಜೆಪಿ ಮುಖಂಡರು ಲೆಕ್ಕಾಚಾರ ಹಾಕಿದ್ದಾರೆ.

"ಜಿಲ್ಲೆಯ ಚಾಮುಲ್‌ನ 9 ನಿರ್ದೇಶಕರ ಸ್ಥಾನಗಳಿಗೆ ಜೂ.14ರಂದು ಮತದಾನ ನಡೆಯಲಿದೆ. ಜಿಲ್ಲೆಯ 5 ತಾಲೂಕಿನಿಂದ 365 ಮತದಾರರು ಮತದಾನ ಮಾಡಲು ಅರ್ಹರಾಗಿದ್ದಾರೆ. ಮಹಿಳಾ ಸಂಘಗಳ ಕ್ಷೇತ್ರದಿಂದ 84 ಮತದಾರರು ಹಕ್ಕು ಚಲಾಯಿಸಲು ಅರ್ಹರಾಗಿದ್ದು, ಜಿಲ್ಲೆಯಲ್ಲಿ ಒಟ್ಟು 449 ಮಂದಿ ಮತದಾನ ಮಾಡಬಹುದಾಗಿದೆ. ಸರ್ಕಾರ ಒಬ್ಬರನ್ನು ನಾಮ ನಿರ್ದೇಶಿತ ನಿರ್ದೇಶಕರನ್ನು ನೇಮಕ ಮಾಡಲಿದೆ. ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಚುನಾಯಿತರಾದ 9 ನಿರ್ದೇಶಕರು, ಒಬ್ಬರು ನಾಮನಿರ್ದೇಶಕರು ಹಾಗೂ ಮೂವರು ಅಧಿಕಾರಿಗಳು ಸೇರಿದಂತೆ ಒಟ್ಟು 13 ಜನರಿಗೆ ಮತದಾನ ಮಾಡಬಹುದಾಗಿದೆ.

-ಎಂ.ರಾಜಶೇಖರಮೂರ್ತಿ,
ಚಾಮುಲ್ ವ್ಯವಸ್ಥಾಪಕ ನಿರ್ದೇಶಕ.

ಐವರು ನಾಮಪತ್ರ ಸಲ್ಲಿಕೆ

ಚಾಮರಾಜನಗರ, ಜೂ.2(ಎಸ್‌ಎಸ್)- ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಚಾಮುಲ್) ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಕ್ಕೆ ಗುರುವಾರ ಐವರು ನಾಮಪತ್ರ ಸಲ್ಲಿಸಿದರು.

ಉಮೇದುವಾರಿಕೆ ಸಲ್ಲಿಸಲು ಜೂ.6 ಕೊನೆ ದಿನವಾಗಿದ್ದು, ಜೂ.14 ರಂದು ಚುನಾವಣೆ ನಡೆಯಲಿದೆ. ಜಿಲ್ಲೆಯ ಹಾಲು ಉತ್ಪಾದಕರ ಸಂಘಗಳ ಮಹಿಳಾ ಕ್ಷೇತ್ರದಿಂದ ಆಯ್ಕೆ ಬಯಸಿ ಶೀಲಾ ಪುಟ್ಟರಂಗಶೆಟ್ಟಿ ನಾಮಪತ್ರ ಸಲ್ಲಿಸಿದರು. ಇವರು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪುತ್ರಿ, ಇವರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಿದರು.

ಚಾಮರಾಜನಗರ ತಾಲೂಕಿನಿಂದ ಆಯ್ಕೆ ಬಯಸಿ ಕುಲಗಾಣ ಗ್ರಾಮದ ಕೆ.ಎಲ್. ರವಿಕುಮಾರ್ ಅವರು ನಾಮಪತ್ರ ಸಲ್ಲಿಸಿದರು. ಇವರಿಗೆ ಪುಟ್ಟಬುದ್ದಿ ಸೂಚಕರಾಗಿದ್ದಾರೆ. ರವಿಕುಮಾರ್ ಅವರು ತಾ.ಪಂ. ಮಾಜಿ ಸದಸ್ಯರು.

ಯಳಂದೂರು ತಾಲೂಕಿನಿಂದ ಆಯ್ಕೆ ಬಯಸಿ ಯರಗಂಬಳ್ಳಿ ವೈ.ಸಿ. ನಾಗೇಂದ್ರ ಅವರು ಅವರು ನಾಮಪತ್ರ ಸಲ್ಲಿಸಿದರು. ಇವರಿಗೆ ಜಿ.ವಿ.ಮಹದೇವಸ್ವಾಮಿ ಇವರಿಗೆ ಸೂಚಕರು. ಇವರು ಬಿಜೆಪಿ ಬೆಂಬಲಿತ ಅಭ್ಯರ್ಥಿ. ಹನೂರು ತಾಲೂಕಿನ ಆಯ್ಕೆ ಬಯಸಿ ಸಿ.ಎಸ್. ಗುರುಮಲ್ಲಪ್ಪ ಹಾಗೂ ಶಾಹುಲ್ ಅಹಮದ್ ಉಮೇದುವಾರಿಕೆ ಸಲ್ಲಿಸಿದರು. ಗುರುಮಲ್ಲಪ್ಪ ಚಾಮುಲ್ ಮಾಜಿ ಅಧ್ಯಕ್ಷರು. ಇವರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿದ್ದಾರೆ. ಇವರಿಗೆ ರಾಘವನ್ ಸೂಚಕರಾದರೆ, ಅಹಮದ್ ಅವರಿಗೆ ಪುಟ್ಟಸ್ವಾಮಿ ಸೂಚಕರು. ಇಂದು ಒಟ್ಟು ಐವರು ನಾಮಪತ್ರ ಸಲ್ಲಿಸಿರುವುದು ಸೇರಿ ಈವರೆಗೆ ಒಟ್ಟು 8 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಭೇಟಿ, ಪರಿಶೀಲನೆ



ಚಾಮರಾಜನಗರ, ಜೂ.2- ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ ಅವರು ಇಂದು ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಭಾಗೀರಥಿ, ಸ್ಥಾನಿಕ ವೈದ್ಯಾಧಿಕಾರಿಗಳಾದ ಡಾ. ಕೃಷ್ಣಪ್ರಸಾದ್ ಹಾಗೂ ಸಂಸ್ಥೆಯ ನರ್ಸಿಂಗ್ ಅಧೀಕ್ಷಕರಾದ ಡಾ. ಗೀತಾ ಅವರೊಂದಿಗೆ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಆಸ್ಪತ್ರೆಯ ಎಲ್ಲಾ ಕೊಠಡಿಗಳಿಗೂ ಖುದ್ದು ಭೇಟಿ ನೀಡಿ, ವೀಕ್ಷಿಸಿದರು.

ಆಸ್ಪತ್ರೆಯ ಆವರಣ, ಎಲ್ಲಾ ವಾರ್ಡ್‌ಗಳು ಹಾಗೂ ಹೊರಾಂಗಣದ ಸ್ವಚ್ಛತೆ ಬಗ್ಗೆ ವಿಶೇಷವಾಗಿ ಪರಿಶೀಲಿಸಿದರು. ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳಿಗೆ ದೊರೆಯುತ್ತಿರುವ ಚಿಕಿತ್ಸಾ ಸೌಲಭ್ಯಗಳು ಮತ್ತು ಹೊರರೋಗಿಗಳಿಗೆ ನೀಡಲಾಗುತ್ತಿರುವ ವೈದ್ಯಕೀಯ ಸೇವೆಗಳ ಬಗ್ಗೆ ಪರಿಶೀಲಿಸಿ ಮಾಹಿತಿ ಪಡೆದುಕೊಂಡರು. ಇದೇ ವೇಳೆ ರೋಗಿಗಳಿಗೆ ವಿತರಿಸಲಾಗುವ ಊಟವನ್ನೂ ಸಹ ಪರಿಶೀಲಿಸಿದರು.

ರೋಗಿಗಳಿಗೆ ಔಷಧ ಹಾಗೂ ಪೌಷ್ಟಿಕ ಆಹಾರವನ್ನು ಸಮರ್ಪಕವಾಗಿ ನೀಡುವಂತೆ ಸೂಚಿಸಿದರು. ಆಸ್ಪತ್ರೆಯ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡಿ ರೋಗಿಗಳಿಂದ ಕುಂದು ಕೊರತೆಗಳ ಬಗ್ಗೆ ಮಾಹಿತಿ ಪಡೆದರು. ತುರ್ತು ಚಿಕಿತ್ಸೆಗಾಗಿ ರೋಗಿಗಳು ಬಂದಾಗ ದಾಖಲಾತಿಗಾಗಿ ಒತ್ತಾಯ ಮಾಡದೇ ಮೊದಲು ಚಿಕಿತ್ಸೆಗೆ ಪ್ರಾಧಾನ್ಯತೆ ನೀಡಬೇಕು. ತದ ನಂತರ ನೋಂದಣಿ ಇನ್ನಿತರ ಪ್ರಕ್ರಿಯೆ ಕೈಗೊಳ್ಳಬೇಕು. ತುರ್ತು ಸಂದರ್ಭದಲ್ಲಿ ಹಾಗೂ ಹಿರಿಯ ನಾಗರಿಕರು ಅನಾರೋಗ್ಯದಿಂದ ಆಸ್ಪತ್ರೆಗೆ ಬಂದಾಗ ಮಾನವೀಯತೆಯಿಂದ ಶೀಘ್ರವಾಗಿ ಸ್ಪಂದಿಸಬೇಕು. ಆಸ್ಪತ್ರೆಗೆ ಬರುವ ರೋಗಿ ಹಾಗೂ ಸಾರ್ವಜನಿಕರೊಂದಿಗೆ ಜನಸ್ನೇಹಿಯಾಗಿ ವರ್ತಿಸಿ ಕರ್ತವ್ಯ ನಿರ್ವಹಿಸಬೇಕೆಂದು ನ್ಯಾಯಾಧೀಶರಾದ ಎಂ. ಶ್ರೀಧರ ಅವರು ಆಸ್ಪತ್ರೆಯ ಸಿಬ್ಬಂದಿಗೆ ತಿಳಿಸಿದರು.

ಕನ್ನಹಳ್ಳಿಮೋಳೆ ರವಿ ನಿಧನ



ಯಳಂದೂರು, ಜೂ.2- ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಕನ್ನಹಳ್ಳಿಮೋಳೆ ಗ್ರಾಮದ ರತ್ನಮ್ಮ ರಂಗಶೆಟ್ಟಿ ಎಂಬುವರ ಪುತ್ರ ರವಿ (40) ಅನಾರೋಗ್ಯ ನಿಮಿತ್ತ ಬುಧವಾರ ಮೃತಪಟ್ಟಿದ್ದಾರೆ.


ಕೊತ್ತೇಗಾಲ ಗ್ರಾಮ ಪಂಚಾಯಿತಿಯಲ್ಲಿ ನೀರುಗಂಟಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಬುಧವಾರ ಚಾಮರಾಜನಗರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ನಿಧನರಾದರು.

ಸ್ವಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ಬುಧವಾರ ಸಂಜೆ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆಯಿಂದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಕುಂಭಾಭಿಷೇಕ

ಚಾಮರಾಜನಗರ, ಜೂ.2(ಎಸ್‌ಎಸ್)- ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಜೂ.4 ರಿಂದ 6 ರವರೆಗೆ ರಾಜಗೋಪುರ, ವಿಮಾನ ಗೋಪುರಗಳ ಕಳಸ ಹಾಗೂ ಕುಂಭಾಭಿಷೇಕ ಜರುಗಲಿದೆ. ಇದಕ್ಕಾಗಿ ದೇವಸ್ಥಾನಕ್ಕೆ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಆಕರ್ಷಿತವಾಗಿದೆ.

ಜೂ.4 ರಂದು ಸಂಜೆ 5 ಗಂಟೆಗೆ ದೇವತಾ ಪ್ರಾರ್ಥನೆ ಗಣಪತಿ ಪೂಜೆ ಸೇರಿದಂತೆ ಹೋಮ ಇತ್ಯಾದಿ ಪೂಜೆಗಳು ನಡೆಯಲಿವೆ. 5 ರಂದು ಬೆಳಗ್ಗೆ 8.30ಕ್ಕೆ ನೂತನ ವಿಗ್ರಹಗಳಿಗೆ ನೇತ್ರೋಮಿಲನ, ಜಲಾಧಿವಾಸ, ಕಳಸಾ ಸ್ಥಾಪನೆ ಸೇರಿದಂತೆ ಇತರ ಪೂಜೆಗಳು ಜರುಗಲಿವೆ. 6 ರಂದು ಬೆಳಗ್ಗೆ 6.30ಕ್ಕೆ ಪುಣ್ಯಹ, ಕಳಶಾರ್ಚನೆ. ಬೆಳಗ್ಗೆ 10 ರಿಂದ 10.30 ರವರೆಗೆ ಕುಂಭಾಭಿಷೇಕ ನಡೆಯಲಿದೆ. ಇದರಿಂದ ಪಟ್ಟಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ದೀಪಾಲಂಕಾರ ನೋಡಲು ಜನರು ಗುಂಪು ಗುಂಪಾಗಿ ಬರುತ್ತಿದ್ದಾರೆ.



ಮೈ.ವಿ.ರವಿಶಂಕರ್ ಪರ ವಿ.ಸೋಮಣ್ಣ ಮತಯಾಚನೆ

ಚಾಮರಾಜನಗರ, ಜೂ.2(ಎಸ್‌ಎಸ್)- ದಕ್ಷಿಣ ಪದವೀಧರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮೈ.ವಿ. ರವಿಶಂಕರ್ ಅವರ ಪರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ನಗರದಲ್ಲಿ ಗುರುವಾರ ಮತಯಾಚನೆ ಮಾಡಿದರು.

ನಗರದ ಜೆಎಸ್‌ಎಸ್ ಕಾಲೇಜು, ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಜಿಲ್ಲಾ ವರ್ತಕ ಸಂಘ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘ ಸೇರಿದಂತೆ ವಿವಿಧ ಕಡೆಗಳಿಗೆ ತೆರಳಿ ಪ್ರಚಾರ ಸಭೆ ನಡೆಸಿ ಮೈ.ವಿ. ರವಿಶಂಕರ್ ಅವರಿಗೆ ತಮ್ಮ ಮೊದಲ ಪ್ರಾಶಸ್ತ್ಯ ಮತ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ವಿ. ಸೋಮಣ್ಣ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಜನಪರ ಆಡಳಿತ ನಡೆಸುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೇಶದ ಅಭಿವೃದ್ಧಿಗೆ ನಾನಾ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಹಾಗಾಗಿ ಮತದಾರರು ಬಿಜೆಪಿ ಬೆಂಬಲಿಸುವಂತೆ ವಿನಂತಿಸಿದರು.

ಶಾಸಕ ಎನ್. ಮಹೇಶ್, ಮೈಲ್ಯಾಕ್ ಅಧ್ಯಕ್ಷ ವಿ.ಫಣೀಶ್, ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕೇಂದ್ರ ಬರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್. ಸುಂದರ್, ಪ್ರಧಾನ ಕಾರ್ಯದರ್ಶಿಗಳಾದ ನಾಗಶ್ರೀ ಪ್ರತಾಪ್, ಮಂಗಲ ಶಿವಕುಮಾರ್ ಇತರರಿದ್ದರು.



ವಿ.ಪೇಟೆ ಪಪಂ ವಿರುದ್ಧ ಕಾಂಗ್ರೆಸ್, ಜೆಡಿಎಸ್ ಪ್ರತಿಭಟನೆ

ವಿರಾಜಪೇಟೆ ಜೂ.2- ವಿರಾಜಪೇಟೆ ಪಟ್ಟಣ ಪಂಚಾಯಿತಿ ಆಡಳಿತ ವೈಫಲ್ಯದಿಂದ ಅಭಿವೃದ್ಧಿ ಕಾಮಗಾರಿಗಳು ಶೂನ್ಯವಾಗಿದ್ದು, ಪಟ್ಟಣ ವ್ಯಾಪ್ತಿಯಲ್ಲಿ ಸಮಸ್ಯೆಗಳು ತಾಂಡವವಾಡುತ್ತಿದ್ದರೂ ಮಾಸಿಕ ಸಭೆಗಳನ್ನು ನಡೆಸದಿರುವುದನ್ನು, ಖಂಡಿಸಿ ಕಾಂಗ್ರೆಸ್ ಮತ್ತು ಜೆಡಿಎಸ್ ವತಿಯಿಂದ ಪಟ್ಟಣ ಪಂಚಾಯಿತಿ ಎದುರು ಪ್ರತಿಭಟನೆ ನಡೆಸಿ ಆಡಳಿತಾರೂಡ ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ ಮಾತನಾಡಿ, ವಿರಾಜಪೇಟೆ ಪಟ್ಟಣ ವ್ಯಾಪ್ತಿಯ ನಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸಲಾಗದೆ ಪಂಚಾಯಿತಿಯ ಮಾಸಿಕ ಸಭೆಗಳೇ ನಡೆಯುತ್ತಿಲ್ಲ, ಕಳೆದ ವಾರ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಮಾಡಲು ಸಭೆ ಕರೆದು ಅಧ್ಯಕ್ಷರಾದಿಯಾಗಿ ಬಿಜೆಪಿ ಸದಸ್ಯರು ಗೈರು ಹಾಜರಿಯಾದ್ದರಿಂದ ಸಭೆ ಮುಂದೂಡಲಾಯಿತು. ಪಟ್ಟಣದ ಜನರಿಗೆ ಉತ್ತಮ ಆಡಳಿತ ನೀಡದೆ 20 ವರ್ಷಗಳ ಹಿಂದಿನ ಚಿತ್ರಣವನ್ನೇ ಪಂಚಾಯಿತಿ ಇಂದು ಕಾಣುತ್ತಿದೆ. ಪಟ್ಟಣದ ಸುತ್ತಲೂ ಹಲವಾರು ಗ್ರಾಮಾಂತರ ಪ್ರದೇಶ ಇದ್ದು ಬಹುತೇಕ ಜನ ಪಟ್ಟಣಕ್ಕೆ ಬಂದು ಹೋಗುವವರು ನಡೆದಾಡಲು ಫುಟ್‌ಪಾತ್ ಇಲ್ಲ, ವಿರಾಜಪೇಟೆಗೆ ಪ್ರವಾಸಿಗರು ಬರಲು ವೀಕ್ಷಣೆಗೆ ಏನೂ ಇಲ್ಲದಂತಾಗಿದೆ. ಕೆರೆಗಳ ಅಭಿವೃದ್ಧಿ ಇಲ್ಲ, ಮಲೆತಿರಿಕೆ ಬೆಟ್ಟದಲ್ಲಿ ಬಟರ್ ಫ್ಲೈ ಪಾರ್ಕ್ ಮಾಡುವುದಾಗಿ ಹೇಳಿ ಅನೇಕ ವರ್ಷಗಳು ಕಳೆದಿವೆ, ಈ ಎಲ್ಲಾ ಕಾರಣದಿಂದ ಪಟ್ಟಣದಲ್ಲಿ ವ್ಯಾಪಾರ ವಹಿವಾಟು ಕುಸಿದಿದೆ ಎಂದು ತಿಮ್ಮಯ್ಯ ದೂರಿದರು.

ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮಾತನಾಡಿ, ಪಟ್ಟಣ ಪಂಚಾಯಿತಿಯ ಕಾಮಗಾರಿ ಸ್ಥಾಯಿ ಸಮಿತಿ ಚುನಾವಣೆಯಲ್ಲಿ ಸೋಲು ನಿಶ್ಚಿತ ಎಂದು ಬಿಜೆಪಿ ಸದಸ್ಯರು ಬಾರದೆ ಸಭೆಗೆ ಅಗೌರವ ತೋರಿದ್ದಾರೆ. ಪಟ್ಟಣದ ನಿವಾಸಿಗಳ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯುತ್ತಿಲ್ಲ. ಮಳೆಗಾಲ ಆರಂಭವಾಗುತ್ತಿದೆ. ಕಳೆದ ಎರಡು ವರ್ಷದ ಮಳೆ ಹಾನಿ ಸಂತ್ರಸ್ತರಿಗೆ ಸೂರಿನ ವ್ಯವಸ್ಥೆ ಆಗಿಲ್ಲ. ಅಗತ್ಯ ಕ್ರಮದ ಬಗ್ಗೆ ನಿರ್ಧಾರ ಕೈಗೊಂಡಿಲ್ಲ. ಕಾವೇರಿ ನದಿ ನೀರು ಪಟ್ಟಣಕ್ಕೆ ಬಂದರೂ ಸಮರ್ಪಕ ಪೂರೈಕೆ ಆಗುತ್ತಿಲ್ಲ, ಕುಡಿಯುವ ನೀರಿನ ಸಮಸ್ಯೆ ಇದ್ದರೂ ನೀರಿನ ಕಂದಾಯ ಹೆಚ್ಚು ಮಾಡಿ ನಿವಾಸಿಗಳಿಗೆ ಹೊರೆಯಾಗಿದೆ, ಚರಂಡಿ ವ್ಯವಸ್ಥೆ ಸರಿಯಾಗಿಲ್ಲ, ರಸ್ತೆಗಳು ಗುಂಡಿಗಳಾಗಿವೆ ಜನರ ಸಮಸ್ಯೆಗೆ ಸ್ಪಂದಿಸುವಲ್ಲಿ ಪಂಚಾಯಿತಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಹೆಚ್. ಮತ್ತೀನ್ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಚರ್ಚೆಗಳು ನಡೆಯಬೇಕಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಲಾಗದ ನೋವು ನನಗಿದೆ. ಮೂರು ನಾಲ್ಕು ತಿಂಗಳಿಗೊಮ್ಮೆ ಸಾಮಾನ್ಯ ಸಭೆ ನಡೆಯುತ್ತದೆ. ಕಳೆದ ಬಾರಿ ಸ್ಥಾಯಿ ಸಮಿತಿ ಸ್ಥಾನ ಸಿಗುವುದಿಲ್ಲ ಎಂದಾಗ ಬಿಜೆಪಿ ಸದಸ್ಯರು ಸಭೆಗೆ ಗೈರಾಗಿದ್ದಾರೆ. ಈ ಸಂದರ್ಭ ನಿಯಮದಂತೆ ಸಭೆ ನಡೆಸಿ ಎಂದು ಮುಖ್ಯಾಧಿಕಾರಿಯನ್ನು ಮನವಿ ಮಾಡಿದರು.



ಅವರು ಬಿಜೆಪಿ ವಕ್ತಾರರಂತೆ ವರ್ತಿಸಿದರು. ಪಟ್ಟಣದ ಗಡಿ ಭಾಗದ ಸಮಸ್ಯೆಯನ್ನು ಮುಂದಿಟ್ಟು ಅಧಿಕಾರ ವರ್ಗ ಹಣ ಮಾಡುತ್ತಿದೆ ಎಂದು ದೂರಿದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಕಾನೂನು ಘಟಕದ ಡಿ.ಸಿ.ಧ್ರುವಕುಮಾರ್ ಮಾತನಾಡಿ, ಪಟ್ಟಣದ ಮುಖ್ಯ ರಸ್ತೆ ಬದಿಯಲ್ಲಿ ಚರಂಡಿಯ ಸ್ಲಾಬ್‌ಗಳ ಮೇಲೆ ಪಾದಚಾರಿಗಳು ನಡೆದಾಡುತ್ತಾರೆ. ಆದರೆ ಸ್ಲಾಬ್‌ಗಳೆ ಮುರಿದುಬಿದ್ದಿವೆ ಇದರಿಂದ ಅನೇಕರು ಬಿದ್ದು ಕೈ ಕಾಲು ಮುರಿದುಕೊಳ್ಳುತ್ತಿದ್ದಾರೆ ಹಾಗೂ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇಲ್ಲದಂತಾಗಿದೆ ಎಂದರು.

ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಆರ್.ಕೆ ಸಲಾಂ. ನಗರ ಮಾಜಿ ಅಧ್ಯಕ್ಷ ಜಿ.ಜಿ. ಮೋಹನ್, ಪ.ಪಂ.ಸದಸ್ಯರಾದ ಮಹ್ಮದ್ ರಾಫಿ, ಡಿ.ಪಿ.ರಾಜೇಶ್, ರಜನಿಕಾಂತ್ ಮಾತನಾಡಿದರು.

ಬಳಿಕ ಈ ಕುರಿತು ಸಮಸ್ಯೆಗಳನ್ನು ಬಗೆಹರಿಸುವಂತೆ ಪಂಚಾಯಿತಿ ಅಧ್ಯಕ್ಷೆ ಸುಸ್ಮಿತಾ ಹಾಗೂ ಮುಖ್ಯಾಧಿಕಾರಿ ಚಂದ್ರಕುಮಾರ್ ಮತ್ತು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭ ಕಾಂಗ್ರೆಸ್ ವಕ್ತಾರ ಎಂ.ಎಸ್.ಪೂವಯ್ಯ, ಸಿ.ಎ. ನಾಸೀರ್, ಜೆಡಿಎಸ್ ಜಿಲ್ಲಾ ಕಾರ್ಯದರ್ಶಿ ಆಯೂಬ್ ಹಾಗೂ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಶಿಕ್ಷಣ ಸಚಿವರ ಮನೆ ಮೇಲಿನ ದಾಳಿಗೆ ಬಿಜೆಪಿ ಖಂಡನೆ

ಮಡಿಕೇರಿ,ಜೂ.2- ಪಠ್ಯ ಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಬಹಿರಂಗ ಚರ್ಚೆಗೆ ಶಿಕ್ಷಣ ಸಚಿವರು ಸಿದ್ಧವಿದ್ದರೂ ಎನ್‌ಎಸ್‌ಯುಐ ಕಾರ್ಯಕರ್ತರು ಕಾನೂನು ಮೀರಿ ಸಚಿವರ ಮನೆ ಮೇಲೆ ದಾಳಿ ನಡೆಸಿದ್ದಾರೆ ಎಂದು ಜಿಲ್ಲಾ ಬಿಜೆಪಿ ಯುವಮೋರ್ಚಾ ಅಸಮಾಧಾನ ವ್ಯಕ್ತಪಡಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ದರ್ಶನ್ ಜೋಯಪ್ಪ, ಸಚಿವರಾಗಿದ್ದರೂ ಯಾವುದೇ ಪೊಲೀಸ್ ರಕ್ಷಣೆಯನ್ನು ಪಡೆಯದೆ ಸಾಮಾನ್ಯ ವ್ಯಕ್ತಿಯಂತೆ ನಡೆದುಕೊಳ್ಳುವ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಸೇವೆ ಮತ್ತು ರಾಜಕೀಯ ಬೆಳವಣಿಗೆಯನ್ನು ಸಹಿಸದ ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ ಹೀನಾಯವಾಗಿ ನಡೆದುಕೊಂಡಿದೆ ಎಂದು ದೂರಿದರು.

ಪಠ್ಯ ಪರಿಷ್ಕರಣೆ ವಿಚಾರವಾಗಿ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರು ಚರ್ಚೆಗೆ ಸಿದ್ಧವಿದ್ದಾರೆ. ಆದರೆ ಕೆಲವು ಕಿಡಿಗೇಡಿಗಳು ಸಚಿವರ ಮನೆ ಮೇಲೆ ದಾಳಿ ನಡೆಸಿರುವುದು ಖಂಡನೀಯ. ಪೊಲೀಸರ ಸಮಯಪ್ರಜ್ಞೆಯಿಂದ ಹೆಚ್ಚಿನ ಅನಾಹುತ ತಪ್ಪಿದೆ ಎಂದರು.

ದೇಶವ್ಯಾಪಿ ಅಧಿಕಾರ ಕಳೆದುಕೊಂಡು ಹತಾಶಗೊಂಡಿರುವ ಕಾಂಗ್ರೆಸ್‌ಗೆ ಪಠ್ಯ ಪರಿಷ್ಕರಣೆಯ ವಿಷಯದ ಕುರಿತು ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ದರ್ಶನ್ ಜರಿದರು.


ಯುವ ಮೋರ್ಚಾದ ರಾಜ್ಯ ಸಮಿತಿ ಸದಸ್ಯ ಮಹೇಶ್ ತಿಮ್ಮಯ್ಯ ಮಾತನಾಡಿ, ನೆಲೆ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್ ಜನರ ಹಾದಿ ತಪ್ಪಿಸುತ್ತಿದೆ. ಪಠ್ಯ ಪರಿಷ್ಕರಣೆಯ ವಿಚಾರದ ನೆಪದಲ್ಲಿ ಗೂಂಡಾಗಿರಿ ಮಾಡುತ್ತಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಯುವ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ವಿನಯ್ ರಾಜ್, ರಾಮನಾಥನ್ ಹಾಗೂ ಕಾರ್ಯದರ್ಶಿ ನವನೀತ್ ಪೊನ್ನೆಟಿ ಉಪಸ್ಥಿತರಿದ್ದರು.



ಕಾಂಗ್ರೆಸ್ ಪಕ್ಷದ್ದು ಗೂಂಡಾ ಸಂಸ್ಕೃತಿ

ಮಡಿಕೇರಿ,ಜೂ.2- ಕಾಂಗ್ರೆಸ್ ಪಕ್ಷ ಗೂಂಡಾ ಸಂಸ್ಕೃತಿಯ ಪ್ರತೀಕವಾಗಿದ್ದು, ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಮನೆಯ ಮೇಲಿನ ದಾಳಿ ಖಂಡನೀಯವೆಂದು ಶಾಸಕ ಕೆ.ಜಿ.ಬೋಪಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಗೂಂಡಾ ಸಂಸ್ಕೃತಿಯ ಪ್ರತೀಕ ಕಾಂಗ್ರೆಸ್, ಅದರ ಬಹುತೇಕ ನಾಯಕರು ಗೂಂಡಾರಾಜ್ಯ ಮಾಡುವ ಕನಸು ಹೊತ್ತಿದ್ದಾರೆ. ಎನ್.ಎಸ್.ಯು.ಐ.ನ ಇಂದಿನ ದಾಳಿಯನ್ನು ನೋಡಿದಾಗ ಡಿಜೆಹಳ್ಳಿ, ಕೆಜಿ ಹಳ್ಳಿ ದಾಳಿಗೆ ಹೋಲಿಕೆ ಕಂಡು ಬರುತ್ತಿದೆ ಎಂದು ದೂರಿದ ಅವರು, ಪ್ರಕರಣದ ಕುರಿತು ಸಮಗ್ರ ತನಿಖೆಯಾಗಬೇಕೆಂದು ಒತ್ತಾಯಿಸಿದ್ದಾರೆ. ಮನೆಗೆ ಬೆಂಕಿ ಹಚ್ಚುವಂತಹ ದಾಳಿಕೋರರು ಲಾಠಿಯ ಸದ್ದಿನಿಂದ ಪಾಠ ಕಲಿಯುವವರಲ್ಲ ಎಂದ ಬೋಪಯ್ಯ, ಕಿಡಿಗೇಡಿ ಕ್ರಿಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಇಂದು ವಿಶ್ವ ಬೈಸಿಕಲ್ ದಿನಾಚರಣೆ

ಮಡಿಕೇರಿ, ಜೂ.2- ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ನಗರಸಭೆ, ನೆಹರು ಯುವ ಕೇಂದ್ರ, ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಯುವ ಒಕ್ಕೂಟ, ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ ತಾಲೂಕು ಯುವ ಒಕ್ಕೂಟ ಹಾಗೂ ಮಡಿಕೇರಿ ಕಾವೇರಿ ಕಲಾವೃಂದ ಸಂಯುಕ್ತಾಶ್ರಯದಲ್ಲಿ 'ವಿಶ್ವ ಬೈಸಿಕಲ್ ದಿನಾಚರಣೆ' ಅಂಗವಾಗಿ ಬೈಸಿಕಲ್ ಜಾಥಾ ನಡೆಯಲಿದೆ.

ಜಾಥಾಕ್ಕೆ ಜೂ.3 ರಂದು ಬೆಳಗ್ಗೆ 8.30 ಗಂಟೆಗೆ ನಗರದ ಕೋಟೆ ಆವರಣದಲ್ಲಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಚಾಲನೆ ನೀಡಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಜಿರ ಅಯ್ಯಪ್ಪ, ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ ಇತರರು ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮವು ಬೆಳಗ್ಗೆ 10 ಗಂಟೆಗೆ ಕೋಟೆ ಆವರಣದಲ್ಲಿ ನಡೆಯಲಿದೆ.

ನಕ್ಸಲ್ ಆರೋಪಿ ಪೊಲೀಸ್ ಕಸ್ಟಡಿಗೆ

ಗೋಣಿಕೊಪ್ಪ, ಜೂ.2- ನಕ್ಸಲ್ ಚಟುವಟಿಕೆ ಹಿನ್ನೆಲೆಯಲ್ಲಿ ಬಂಧಿಸಲಾಗಿದ್ದ ಬಿ.ಜಿ. ಕೃಷ್ಣಮೂರ್ತಿಯನ್ನು ಪೊನ್ನಂಪೇಟೆ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಿ, ನಂತರ ಪೊಲೀಸ್ ಕಸ್ಟಡಿಗೆ ನೀಡಲಾಯಿತು.

ನಕ್ಸಲ್ ಚಟುವಟಿಕೆಯಲ್ಲಿ ತೊಡಗಿದ್ದ ಹಿನ್ನೆಲೆಯಲ್ಲಿ ಕಳೆದ 7 ತಿಂಗಳ ಹಿಂದೆ ಕೇರಳದಲ್ಲಿ ಈತನನ್ನು ಬಂಧಿಸಲಾಗಿತ್ತು. ನಂತರ ಹೆಚ್ಚಿನ ವಿಚಾರಣೆಗೆ ಚಿಕ್ಕಮಗಳೂರು ಪೊಲೀಸರ ವಶಕ್ಕೆ ನೀಡಲಾಗಿತ್ತು. ಕೊಡಗು-ಕೇರಳ ಗಡಿಯಲ್ಲೂ ಕೂಡ ನಕ್ಸಲ್ ಚಟುವಟಿಕೆ ನಡೆಸಿರುವ ಆರೋಪದಿಂದ ಜಿಲ್ಲೆಗೆ ಕರೆತಂದು ನ್ಯಾಯಾಧೀಶರಾದ ಆಶಾ ಅವರ ಎದುರು ಹಾಜರುಪಡಿಸಿ ಕಸ್ಟಡಿಗೆ ನೀಡುವಂತೆ ಪೊಲೀಸರು ಮನವಿ ಮಾಡಿದರು. ನ್ಯಾಯಾಧೀಶರು ಕಸ್ಟಡಿಗೆ ನೀಡಿದರು. ನಂತರ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ನಡೆಸಲಾಯಿತು. ಪ್ರಕರಣ ತನಿಖಾಧಿಕಾರಿಯಾಗಿರುವ ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ತಂಡದ ವಶಕ್ಕೆ ನೀಡಲಾಯಿತು.

ಅಪ್ಪು ಸ್ಮರಣಾರ್ಥ ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿ

ಸೋಮವಾರಪೇಟೆ, ಜೂ.2- ಜಿಲ್ಲಾ ಅಪ್ಪು ಅಭಿಮಾನಿಗಳ ಬಳಗದ ವತಿಯಿಂದ ಚಿತ್ರನಟ ದಿ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಜೂನ್ 4 ಮತ್ತು 5 ರಂದು ರಾಜ್ಯ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಇಲ್ಲಿನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಆಯೋಜಿಸಲಾಗಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಳಗದ ಜಿಲ್ಲಾಧ್ಯಕ್ಷ ಎಸ್.ವಿ.ರಾಜಶೇಖರ್ ಈ ಕುರಿತು ಮಾಹಿತಿ ನೀಡಿದರು. ಮೊದಲ ಬಹುಮಾನ ರೂ.1 ಲಕ್ಷ ನಗದು, ಎರಡನೇ ಬಹುಮಾನ ರೂ. 50 ಸಾವಿರ, ಮೂರನೇ ಬಹುಮಾನ ರೂ.25 ಸಾವಿರ ನಗದಿನೊಂದಿಗೆ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದು ಹೇಳಿದರು.

ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನಲ್ಲಿ ನೋಂದಾಯಿತ ತಂಡಗಳು, ಜಿಲ್ಲಾ ಮಟ್ಟದ ತಂಡಗಳು ಹಾಗೂ ಅಂತರ್‌ಜಿಲ್ಲಾ ಮಟ್ಟದ ತಂಡಗಳು ಭಾಗವಹಿಸಲು ಮಾತ್ರ ಅವಕಾಶವಿರುತ್ತದೆ. ನಾಲ್ಕು ಗುಂಪುಗಳಲ್ಲಿ ಪಂದ್ಯಾಟ ನಡೆಯಲಿದೆ. ಸರಣಿ ಪುರುಷೋತ್ತಮ ವಿಜೇತರಿಗೆ ಎಲ್‌ಇಡಿ ಕಲರ್ ಟಿವಿ, ಉತ್ತಮ ಬ್ಯಾಟ್ಸ್‌ಮೆನ್, ಬೌಲರ್, ಫೀಲ್ಡರ್, ಕೀಪರ್, ಕ್ಯಾಚರ್‌ಗಳಿಗೆ ಸ್ಪೋರ್ಟ್ಸ್ ವಾಚ್ ನೀಡಲಾಗುವುದು. 6 ಓವರ್‌ಗಳಿಗೆ ಪಂದ್ಯ ಸೀಮಿತವಾಗಿರುತ್ತದೆ.

ಜೂ.4ರಂದು ಬೆಳಗ್ಗೆ 9 ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ಬಸವಾಪಟ್ಟಣ ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ಸ್ವತಂತ್ರ ಬಸವಲಿಂಗ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ದಾನಿಗಳಾದ ಶಾಸಕ ಅಪ್ಪಚ್ಚು ರಂಜನ್, ಮಾಜಿ ಸಚಿವ ಬಿ.ಎ. ಜೀವಿಜಯ, ಜೆಡಿಎಸ್ ಮುಖಂಡ ನಾಪಂಡ ಮುತ್ತಪ್ಪ, ಕಾಂಗ್ರೆಸ್ ಮುಖಂಡ ಡಾ. ಮಂತರ್‌ಗೌಡ ಮತ್ತು ಕನ್ನಡಪರ ಹೋರಾಟಗಾರ ಸಾ.ರಾ. ಗೋವಿಂದು, ಚಿತ್ರನಟಿ ತಾರಾ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಹೆಚ್ಚಿನ ಮಾಹಿತಿಗಾಗಿ ಮೊ. 8618739179, 9164173223 ಸಂಪರ್ಕಿಸಲು ಕೋರಿದ್ದಾರೆ.



ಕೊಡಗು ಪತ್ರಕರ್ತರ ಸಂಘದ ಕ್ಷೇಮನಿಧಿ ಸಮಿತಿಗೆ ಆಯ್ಕೆ



ಮಡಿಕೇರಿ ಜೂ.2- ಕೊಡಗು ಪತ್ರಕರ್ತರ ಸಂಘದ ಕ್ಷೇಮನಿಧಿ ಸಮಿತಿ ಅಧ್ಯಕ್ಷರಾಗಿ ಹೆಚ್.ಆರ್.ಹರೀಶ್ ಕುಮಾರ್ ಹಾಗೂ ಕಾರ್ಯದರ್ಶಿಯಾಗಿ ಎಂ.ಕೆ.ಅರುಣ್ ಕೂರ್ಗ್ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಮಹಾಸಭೆಯಲ್ಲಿ ಇವರನ್ನು ಆಯ್ಕೆ ಮಾಡಲಾಯಿತು ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಇಂದಿನಿಂದ ಮಾವು ಮೇಳ

ಮಡಿಕೇರಿ, ಜೂ.2- ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ಹಾಗೂ ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ವತಿಯಿಂದ 'ಮಾವು ಮೇಳ'ವು ಜೂ.3 ರಿಂದ 6 ರವರೆಗೆ ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ಕಟ್ಟಡದ ಆವರಣದಲ್ಲಿ ನಡೆಯಲಿದೆ.

ಜೂ.3 ರಂದು ಬೆಳಗ್ಗೆ 10 ಗಂಟೆಗೆ ಶಾಸಕ ಕೆ.ಜಿ.ಬೋಪಯ್ಯ ಅವರು ಚಾಲನೆ ನೀಡಲಿದ್ದಾರೆ. ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಳಿಗೆ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಪಶ್ಚಿಮಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ರವಿಕುಶಾಲಪ್ಪ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ, ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾ ಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಹೇಮಾ, ಮೈಸೂರು ವಿಭಾಗದ ತೋಟಗಾರಿಕಾ ಜಂಟಿ ನಿರ್ದೇಶಕರಾದ ಎಚ್.ಎಂ.ನಾಗರಾಜ್, ತೋಟಗಾರಿಕೆ ಉಪ ನಿರ್ದೇಶಕಿ ಸಿ.ಎಂ.ಪ್ರಮೋದ್, ಕೊಡಗು ಜಿಲ್ಲಾ ಹಾಪ್‌ಕಾಮ್ಸ್‌ನ ಅಧ್ಯಕ್ಷ ಬಿದ್ದಾಟಂಡ ರಮೇಶ್ ಚಂಗಪ್ಪ, ಉಪಾಧ್ಯಕ್ಷ ಮಲ್ಲಂಡ ಮಧುದೇವಯ್ಯ, ಇತರರು ಪಾಲ್ಗೊಳ್ಳಲಿದ್ದಾರೆ.

ಜೂ.5, ಬಾಳುಗೋಡಿನಲ್ಲಿ ನಿಸರ್ಗ ಜೆಸಿಐ ಶೂಟಿಂಗ್ ಫೆಸ್ಟ್

ಪೊನ್ನಂಪೇಟೆ, ಜೂ.2- ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕದ ವತಿಯಿಂದ ಮುಂದೂಡಲ್ಪಟ್ಟಿದ್ದ ತೆಂಗಿನಕಾಯಿಗೆ ಗುಂಡು ಹೊಡೆಯುವ ಮುಕ್ತ ಸ್ಪರ್ಧೆ 'ನಿಸರ್ಗ ಜೆಸಿಐ ಶೂಟಿಂಗ್ ಫೆಸ್ಟ್-2022' ಅನ್ನು ಜೂ.5ರಂದು ಭಾನುವಾರ ಬಾಳುಗೋಡಿನಲ್ಲಿರುವ ಕೊಡವ ಸಮಾಜಗಳ ಒಕ್ಕೂಟದ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಎ.ಪಿ. ದಿನೇಶ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವನಾಯಕರ ಮತ್ತು ಉದ್ಯಮಶೀಲರ ವಿಶ್ವವ್ಯಾಪ್ತಿ ಒಕ್ಕೂಟದ ಭಾಗವಾಗಿರುವ ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕದ ವತಿಯಿಂದ ಗ್ರಾಮೀಣ ಕ್ರೀಡೆಗೆ ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ದಾನಿಗಳ ನೆರವಿನೊಂದಿಗೆ ಮೊದಲ ಬಾರಿಗೆ ತೆಂಗಿನಕಾಯಿಗೆ ಗುಂಡು ಹೊಡೆಯುವ ಮುಕ್ತ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಮಾಹಿತಿಗಾಗಿ ದೂ.ಸಂಖ್ಯೆಗಳಾದ 9148978919, 9972538030 ಅಥವಾ 9449255081ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಗೊಬ್ಬರ ಪೂರೈಸಿ

ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಲಭ್ಯವಿದೆ. ಆದರೆ ನಕಲಿ ಬೀಜಗಳ ಹಾವಳಿಯನ್ನು ತಪ್ಪಿಸಲು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಈ ಕುರಿತು ಯಾವುದೇ ಲೋಪವಾದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು. ನಕಲಿ ಬೀಜ ಪೂರೈಕೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 114.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಇದರೊಂದಿಗೆ ಕಂದಾಯ ಇಲಾಖೆ ಹಾಗೂ ಜಲ ಸಂಪನ್ಮೂಲ ಇಲಾಖೆಗಳಿಂದ, ಬಂಜರು ಭೂಮಿ ಹಾಗೂ ಸವಳು-ಜವಳು ಭೂಮಿಯ ಮಾಹಿತಿ ಪಡೆದು, ಈ ವರ್ಷ ಕನಿಷ್ಠ ತಲಾ ಒಂದು ಲಕ್ಷ ಹೆಕ್ಟೇರ್‌ನಷ್ಟು ಬಂಜರು ಭೂಮಿ ಹಾಗೂ ಸವಳು-ಜವಳು ಭೂಮಿಯನ್ನು ಕೃಷಿಯೋಗ್ಯವಾಗಿ ಪರಿವರ್ತಿಸುವಂತೆ ಸೂಚಿಸಿದರು.

ಸಭೆಯ ಮುಖ್ಯಾಂಶಗಳು: ಸೆಕೆಂಡರಿ ಕೃಷಿ ನಿರ್ದೇಶನಾಲಯವು ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಎಂಎಸ್‌ಎಂಇಗಳು, ಅಗ್ರಿಗೇಟರುಗಳು, ಸ್ವಸಹಾಯ ಸಂಘಗಳು, ಆಂಕರ್ ಬ್ಯಾಂಕಿಂಗ್ ಜೊತೆಗೆ ನಿಕಟ ಸಂಪರ್ಕ ಬೆಳೆಸಿ ಕಾರ್ಯ ನಿರ್ವಹಿಸಬೇಕು. ರೈತರಿಂದ ಕೃಷಿ ಉತ್ಪನ್ನ ಖರೀದಿಸುವಂತೆ ಹಲವು ಅಗ್ರಿಗೇಟರುಗಳಿಗೆ ವಿವಿಧ ಸಂದರ್ಭಗಳಲ್ಲಿ ಸಲಹೆ ನೀಡಿದ್ದೇನೆ. ಈ ಕುರಿತು ಸಮನ್ವಯ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯದಲ್ಲಿ ಸಿರಿಧಾನ್ಯ ಮತ್ತು ಎಣ್ಣೆಕಾಳು ಬೆಳೆಗಳ ಉತ್ಪಾದಕತೆಯನ್ನು ಸುಸ್ಥಿರ ಅಭಿವೃದ್ಧಿ ಗುರಿಯ ಮಟ್ಟಕ್ಕೆ ಹೆಚ್ಚಿಸಲು ಕ್ರಿಯಾ ಯೋಜನೆ ರೂಪಿಸುವಂತೆಯೂ ಸೂಚಿಸಿದರು. ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಹಂಚಿಕೆ ಮಾಡುವಾಗ ರೈತ ಉತ್ಪಾದಕ ಸಂಸ್ಥೆಗಳಿಗೆ ಆದ್ಯತೆ ನೀಡಲು ಮುಖ್ಯಮಂತ್ರಿಗಳು ನಿರ್ದೇಶನ ನೀಡಿದರು.

956.71 ಕೋಟಿ ಸಹಾಯಧನ

ವರ್ಗಾವಣೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಎಲ್ಲಾ ಪಾವತಿಗಳನ್ನು ಸಾಧ್ಯವಾದಷ್ಟು ಆಧಾರ್ ಆಧಾರಿತ ಡಿಬಿಟಿ ಮುಖಾಂತರ ಮಾಡಲಾಗಿದೆ. ದೇಶದ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕ ರಾಜ್ಯವು ಅತೀ ಹೆಚ್ಚು ಅಂದರೆ ಶೇ.96ರಷ್ಟು ಆಧಾರ್ ಆಧಾರಿತ ಪಾವತಿಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದ ರಾಜ್ಯವಾಗಿದ್ದು, ಕಳೆದ ಬಾರಿ 2020-21ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯದ ಕೃಷಿ ಇಲಾಖೆಗೆ ಪ್ರಶಸ್ತಿಯು ಲಭಿಸಿದೆ. 2019 ರಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಪಿಎಂ ಕಿಸಾನ್ ಯೋಜನೆಯ ಅರ್ಹ ರೈತರಿಗೆ ಹೆಚ್ಚುವರಿಯಾಗಿ 4 ಸಾವಿರ ರೂ.ಗಳ ಆರ್ಥಿಕ ನೆರವನ್ನು 2 ಕಂತುಗಳಲ್ಲಿ ಮುಖ್ಯಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ನೀಡುತ್ತಿದೆ. ಆಧಾರ್ ಗುರುತಿನ ಸಂಖ್ಯೆಯಾಧಾರದ ಮೇಲೆ ನೇರ ನಗದು ವರ್ಗಾವಣೆ ಪ್ರಕ್ರಿಯೆ ಮೂಲಕ ರೈತರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತಿದೆ.

ಬರ್ಬರ ಹತ್ಯೆಯಿಂದ ಹಾಸನ ಪ್ರಕ್ಷುಬ್ಧ

ಶವಾಗಾರಕ್ಕೆ ಸಾಗಿಸಿದರು. ಪ್ರಶಾಂತ್ ಹತ್ಯೆಯಿಂದ ಹಾಸನ ನಗರದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದ್ದು, ಗುರುವಾರ ಅಂಗಡಿ-ಮುಂಗಟ್ಟುಗಳು ಮುಚ್ಚಿದ್ದವು. ಮುಖ್ಯ ರಸ್ತೆಗಳಲ್ಲಿ ಜನ ಸಂಚಾರವೂ ಕಡಿಮೆಯಾಗಿತ್ತು. ಆದರೆ ಪ್ರಶಾಂತ್ ಮೃತದೇಹ ವಿದ್ದ ಜಿಲ್ಲಾಸ್ಪತ್ರೆ ಮುಂದೆ ಮಾಜಿ ಸಚಿವ ರೇವಣ್ಣ ಹಾಗೂ ಅವರ ಪುತ್ರ ಸಂಸದ ಪ್ರಜ್ವಲ್ ರೇವಣ್ಣ ಪ್ರತಿಭಟನೆ ಆರಂಭಿಸಿದರು. ಈ ಹತ್ಯೆಗೆ ಪೆನ್ಷನ್ ಮೊಹಲ್ಲಾ ಠಾಣೆಯ ಇನ್‌ಸ್ಪೆಕ್ಟರ್ ರೇಣುಕಾಪ್ರಸಾದ್ ಹಾಗೂ ಡಿವೈಎಸ್‌ಪಿ ಉದಯ ಭಾಸ್ಕರ್ ನೇರ ಕಾರಣಕರ್ತರಾಗಿದ್ದು, ಅವರನ್ನು ಕೂಡಲೇ ಅಮಾನತು ಮಾಡಬೇಕೆಂದೂ, ಅಮಾನತು ಮಾಡುವವರೆಗೂ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ ಎಂದು ರೇವಣ್ಣ ಪಟ್ಟು ಹಿಡಿದು, ಕುಳಿತಿದ್ದರು.

ಡಿವೈಎಸ್‌ಪಿ ಉದಯ ಭಾಸ್ಕರ್ ಹತ್ಯೆ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ ರೇವಣ್ಣ, ಪ್ರಶಾಂತ್ ಪತ್ನಿ ಸೌಮ್ಯ ದೂರು ನೀಡಲು ಹೋದಾಗ ಡಿವೈಎಸ್‌ಪಿ ಅವರು ಮೊದಲಿಗೆ ದುಷ್ಕರ್ಮಿಗಳು ಎಂದು ದೂರು ಬರೆಸಿಕೊಂಡು ಆನಂತರ ಮೂವರ ಹೆಸರನ್ನು ಮಾತ್ರ ಬರೆಯಬೇಕು ಎಂದು ಒತ್ತಡ ಹೇರಿ ಬೇರೆ ದೂರು ಬರೆಸಿಕೊಂಡಿದ್ದಾರೆ. ಇದು ಪ್ರಕರಣವನ್ನು ಮುಚ್ಚಿಹಾಕಲು ನಡೆಸಿರುವ ಕುತಂತ್ರ ಎಂದು ಆರೋಪಿಸಿದರು. ಜಿಲ್ಲಾ ಎಸ್ಪಿ ಶ್ರೀನಿವಾಸಗೌಡ, ಅಡಿಷನಲ್ ಎಸ್ಪಿ ನಂದಿನಿ ಅವರು ರೇವಣ್ಣರನ್ನು ಸಮಾಧಾನಪಡಿಸಿ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವಂತೆ ಮನವಿ ಮಾಡಿದಾಗ, ಮೂವರು ಅಧಿಕಾರಿಗಳು ಅಮಾನತ್ತಾಗುವವರೆಗೂ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ. ಅವರನ್ನು ಅಮಾನತುಪಡಿಸಿ ಅವರ ಮೊಬೈಲ್‌ಗಳನ್ನು ವಶಪಡಿಸಿಕೊಂಡು ಪರಿಶೀಲನೆ ನಡೆಸಬೇಕು. ಈ ಅಧಿಕಾರಿಗಳು ಪೊಲೀಸ್ ಠಾಣೆಗಳನ್ನು ರೌಡಿಗಳ ಅಡ್ಡೆಗಳಾಗಿ ಮಾಡಿಕೊಂಡಿದ್ದಾರೆ ಎಂದು ಪಟ್ಟು ಹಿಡಿದರು. ಕೊನೆಗೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಐಜಿಪಿಯವರು ಆದೇಶ ನೀಡುತ್ತಿದ್ದಾರೆ ಎಂದು ತಿಳಿಸಿದ ನಂತರ ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣ ಮರಣೋತ್ತರ ಪರೀಕ್ಷೆಗೆ ಅನುವು ಮಾಡಿಕೊಟ್ಟರು. ಇಂದು ಸಂಜೆ ಪ್ರಶಾಂತ್ ಅಂತ್ಯಕ್ರಿಯೆ ಅವರ ಜಮೀನಿನಲ್ಲಿ ನೆರವೇರಿತು. ಪ್ರಶಾಂತ್ ಅಂತಿಮ ದರ್ಶನಕ್ಕೆ ಸಾವಿರಾರು ಜೆಡಿಎಸ್ ಕಾರ್ಯಕರ್ತರು ಹಾಗೂ ಅವರ ಸ್ನೇಹಿತರು ಆಗಮಿಸಿದ್ದರು. ಮುನ್ನೆಚ್ಚರಿಕಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ತಮ್ಮ ಪತಿಯನ್ನು ಆಟೋ (ಕೆಎ 46 6388)ದಲ್ಲಿ ಬಂದ ಪೂರ್ಣಚಂದ್ರ, ಅರುಣ ಮತ್ತಿತರರು ಕೊಚ್ಚಿ ಕೊಲೆ ಮಾಡಿದ್ದಾರೆ ಎಂದು ಪ್ರಶಾಂತ್ ಪತ್ನಿ ಸೌಮ್ಯ ದೂರು ಸಲ್ಲಿಸಿದ್ದಾರೆ. ಹತ್ಯೆ ನಡೆದ 24 ಗಂಟೆಯ ಒಳಗಾಗಿ ಪೊಲೀಸರು ಪೂರ್ಣಚಂದ್ರ ಮತ್ತು ಅರುಣ್‌ನನ್ನು ಬಂಧಿಸಿ, ಆಟೋರಿಕ್ಷಾ, ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ನೋಡಿ ಸ್ವಾಮಿ ನಾವಿರೋದು ಹೀಗೆ...

ಪ್ರಸಂಗ ನಡೆಯಿತು. ಆನಂತರ ಈ ಇಬ್ಬರೂ ನಾಯಕರು ಹಸನ್ಮುಖರಾಗಿ ಕೊಠಡಿಯಲ್ಲಿ ಕುಳಿತಿರುವ ಫೋಟೋವೊಂದನ್ನು ಬಿಡುಗಡೆ ಮಾಡುವ ಮೂಲಕ ನಾವಿಬ್ಬರೂ ಒಂದಾಗಿದ್ದೇವೆ ಎಂಬ ಸಂದೇಶ ರವಾನೆ ಮಾಡಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆದ ಕರ್ನಾಟಕ ಉಸ್ತುವಾರಿ ಸುರ್ಜೇವಾಲ ನೇತೃತ್ವದಲ್ಲಿ ನಡೆದ ಸಂಕಲ್ಪ ಶಿಬಿರದಲ್ಲಿ ಪಕ್ಷವನ್ನು ಬಲಪಡಿಸುವ, ಮುಂಬರುವ ಚುನಾವಣೆಯಲ್ಲಿ ಗೆಲುವು ಸಾಧಿಸುವ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ವಿಷಯ ಪ್ರಸ್ತಾಪಿಸಿದ ಕೆಲ ನಾಯಕರು ಮೊದಲು ನೀವಿಬ್ಬರೂ ಒಂದಾಗಿ, ಆಗ ಕಾಂಗ್ರೆಸ್ ಪಕ್ಷ ಸರಿಹೋಗುತ್ತದೆ. ನೀವು ವೈಷಮ್ಯದಿಂದ ಒಳ ರಾಜಕೀಯ ಮಾಡಿದರೆ ಪಕ್ಷ ನಿರ್ನಾಮವಾಗುತ್ತದೆ. ಪಕ್ಷಕ್ಕಾಗಿ ನಾವು (ನಾಯಕರು) ಕಾರ್ಯಕರ್ತರು ನಿಷ್ಪಕ್ಷಪಾತವಾಗಿ ಪ್ರತಿಷ್ಠೆಯಿಂದ ಹೋರಾಡುತ್ತಿದ್ದೇವೆ. ಹೀಗಿರುವಾಗ ನೀವಿಬ್ಬರು ಯಾಕೆ ಒಳ ರಾಜಕೀಯಕ್ಕೆ ಬೆಲೆ ಕೊಡುತ್ತಿದ್ದೀರಿ ಎಂದು ಪ್ರಶ್ನಿಸಿದರಲ್ಲದೇ, ನೀವಿಬ್ಬರೂ ಒಂದಾದರೆ ಮಾತ್ರ ಕಾಂಗ್ರೆಸ್‌ಗೆ ಭವಿಷ್ಯ ಇದೆ ಎಂದು ತಾಕೀತು ಮಾಡಿದ್ದರು.

ಚಾಲಾಕಿ ಖದೀಮನ ಬಂಧನ

ಗಾರೆ ಕೆಲಸ ಮಾಡಿಕೊಂಡಿದ್ದೇನೆ ಎಂದು ವಿಚಾರಣೆ ವೇಳೆ ತಿಳಿಸಿದ್ದಾನೆ. ಆತನ ಬಳಿಯಿದ್ದ 12 ಸಾವಿರ ರೂ. ಹಣ, ವಂಚನೆ ಹಣದಿಂದ ಖರೀದಿಸಿದ್ದ 3.8 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ್ದ ಬೈಕ್, ವಿವಿಧ ಬ್ಯಾಂಕ್‌ಗಳ 7 ಎಟಿಎಂ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಆರ್.ಚೇತನ್ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಕಾರ್ಡ್ ಬದಲಿಸುತ್ತಿದ್ದ: ಭದ್ರತಾ ಸಿಬ್ಬಂದಿ ಇಲ್ಲದ ಎಟಿಎಂಗಳ ಬಳಿ ಹೊಂಚುಹಾಕಿ ನಿಲ್ಲುತ್ತಿದ್ದ ಆಸಾಮಿ, ವಯಸ್ಸಾದವರು ಅಥವಾ ಗ್ರಾಮಾಂತರ ಪ್ರದೇಶದ ಅಮಾಯಕ ಮಹಿಳೆಯರನ್ನು ಟಾರ್ಗೆಟ್ ಮಾಡುತ್ತಿದ್ದ. ಎಟಿಎಂ ಬಳಕೆ ಬಗ್ಗೆ ತಿಳಿಯದವರಿಗೆ ಸಹಾಯದ ನೆಪದಲ್ಲಿ ಮಾತ್ರವಲ್ಲದೆ ಮತ್ತೊಂದು ಬಗೆಯಲ್ಲಿ ಯಾಮಾರಿಸುತ್ತಿದ್ದ. ನನ್ನ ಎಟಿಎಂ ಕಾರ್ಡ್ ಯಾಕೋ ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಿ ತಾನು ಗುರಿಯಾಗಿಸಿದ್ದವರ ಎಟಿಎಂ ಕಾರ್ಡ್ ಪಡೆದು, ಪರಿಶೀಲಿಸುವ ನಾಟಕವಾಡಿ ಪಿನ್ ನಂಬರ್ ಅನ್ನೂ ತಿಳಿದುಕೊಳ್ಳುತ್ತಿದ್ದ. ಈ ವೇಳೆ ಅವರಿಗೆ ತಿಳಿಯದಂತೆ ಕಾರ್ಡ್ ಬದಲಿಸಿ, ಅದೇ ಮಾದರಿಯ ಬೇರೊಂದನ್ನು ಕೊಟ್ಟು ಕಳುಹಿಸುತ್ತಿದ್ದ. ನಂತರ ಅಲ್ಲಿಂದ ಕಾಲ್ಕಿತ್ತು ಬೇರೆ ಕಡೆ ಆ ಕಾರ್ಡ್ ಬಳಸಿ ಹಣ ಡ್ರಾ ಮಾಡಿಕೊಳ್ಳುತ್ತಿದ್ದ.

ಜಿಲ್ಲೆಯ 6 ಕಡೆ ದುಷ್ಕೃತ್ಯ: ಕೆ.ಆರ್.ನಗರದ ಕರ್ನಾಟಕ ಬ್ಯಾಂಕ್ ಎಟಿಎಂ ಬಳಿ ಕಳೆದ ಮೇ 5ರಂದು ಹೆಚ್.ಟಿ.ತಿಮ್ಮಶೆಟ್ಟಿ ಹಾಗೂ ಫೆಬ್ರವರಿ 2ರಂದು ಸುನಂದಬಾಯಿ ರಮೇಶ್ ಅವರನ್ನು ಯಾಮಾರಿಸಿದ್ದ. ಮೋಸ ಹೋಗಿರುವುದು ತಿಳಿದ ನಂತರ ಇಬ್ಬರೂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಎಟಿಎಂ ಕೇಂದ್ರದಲ್ಲಿ ಅಪರಿಚಿತನೊಬ್ಬ ಹೊಂಚುಹಾಕಿ ತನ್ನ ಬಳಿ ಇದ್ದ ಎಟಿಎಂ ಕಾರ್ಡ್ ಕೆಲಸ ನಿರ್ವಹಿಸುತ್ತಿಲ್ಲವೆಂದು ಹೇಳಿ ಪರಿಶೀಲನೆಗೆಂದು ನಮ್ಮ ಕಾರ್ಡ್ ಪಡೆದು ನಂತರ ಬೇರೆ ಕಾರ್ಡ್ ನೀಡಿದ್ದಾನೆ. ಅಲ್ಲದೆ ನಮ್ಮ ಕಾರ್ಡ್ ದುರ್ಬಳಕೆ ಮಾಡಿಕೊಂಡು ಖಾತೆಯಲ್ಲಿದ್ದ ಹಣವನ್ನು ಡ್ರಾ ಮಾಡಿಕೊಂಡಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದರು. ಕೆ.ಆರ್.ನಗರದಲ್ಲೇ ಮತ್ತೊಬ್ಬರು, ಹುಣಸೂರು, ಪಿರಿಯಾಪಟ್ಟಣ ಹಾಗೂ ಹೆಚ್.ಡಿ.ಕೋಟೆಯಲ್ಲಿ ತಲಾ ಒಬ್ಬರಿಗೆ ಸೇರಿದಂತೆ ಒಟ್ಟು 6 ಜನರಿಗೆ ಈ ರೀತಿ ವಂಚಿಸಿ, 1 ಲಕ್ಷ ರೂ.ಗಿಂತ ಹೆಚ್ಚು ಹಣ ದೋಚಿರುವುದು ಪೊಲೀಸರ ವಿಚಾರಣೆಯಲ್ಲಿ ತಿಳಿದುಬಂದಿದೆ.

ಕೆ.ಆರ್.ನಗರದಲ್ಲೇ ಸಿಕ್ಕಿಬಿದ್ದ: ಪ್ರಕರಣ ಸಂಬಂಧ ಎಎಸ್ಪಿ ಆರ್.ಶಿವಕುಮಾರ್ ಹಾಗೂ ಡಿಎಸ್ಪಿ ಸುಮಿತ್ ಮಾರ್ಗದರ್ಶನದಲ್ಲಿ ಕೆ.ಆರ್.ನಗರ ಇನ್‌ಸ್ಪೆಕ್ಟರ್ ಲವ ನೇತೃತ್ವದ ತಂಡ ವೈಜ್ಞಾನಿಕ ಮಾಹಿತಿ ಸಂಗ್ರಹಿಸಿ ತನಿಖೆ ನಡೆಸುತ್ತಿತ್ತು. ಜೊತೆಗೆ ಮುನ್ನೆಚ್ಚರಿಕೆಯಾಗಿ ಎಟಿಎಂ ಕೇಂದ್ರಗಳ ಬಳಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ನಿಗಾ ವಹಿಸಲಾಗಿತ್ತು. ಮೇ 30ರಂದು ಕೆ.ಆರ್.ನಗರ ಬಸ್ ನಿಲ್ದಾಣದಲ್ಲಿರುವ ಕರ್ನಾಟಕ ಎಟಿಎಂ ಕೇಂದ್ರದ ಬಳಿ ನಿಂತಿದ್ದ ಆರೋಪಿಯನ್ನು ಬಂಧಿಸಲಾಯಿತು.

ಆರೋಪಿ ಬಳಿ 7 ಕಾರ್ಡ್: ಆರೋಪಿ ಬಳಿ ಕರ್ನಾಟಕ ಬ್ಯಾಂಕ್‌ನ 4, ಎಸ್‌ಬಿಐನ 2 ಹಾಗೂ ಕಾರ್ಪೊರೇಷನ್ ಬ್ಯಾಂಕ್‌ನ 1 ಸೇರಿ ಒಟ್ಟು 7 ಎಟಿಎಂ ಕಾರ್ಡ್ ಇದ್ದವು. ಒಂದು ಕಡೆ ಯಾಮಾರಿಸಿ ಪಡೆದ ಎಟಿಎಂ ಕಾರ್ಡ್ ಮೂಲಕ ಹಣ ಡ್ರಾ ಮಾಡಿದ ನಂತರ ಮತ್ತೊಬ್ಬರಿಗೆ ಅದೇ ಕಾರ್ಡ್ ನೀಡುತ್ತಿದ್ದ. ಇನ್‌ಸ್ಪೆಕ್ಟರ್ ಲವ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಬ್‌ಇನ್‌ಸ್ಪೆಕ್ಟರ್ ಚಂದ್ರಹಾಸನಾಯಕ, ಸಿಬ್ಬಂದಿ ಹಿದಾಯತ್ ಉಲ್ಲಾ, ರಾಘವೇಂದ್ರ, ಪುನೀತ್, ರಾಜು, ಮಹೇಂದ್ರ, ಅನಿತಕುಮಾರ್, ಇಮ್ದಾದ್ ಅಲಿ, ಯಶವಂತ್ ಪಾಲ್ಗೊಂಡು, ಎಟಿಎಂ ಕಾರ್ಡ್ ವಂಚಕನನ್ನು ಬಂಧಿಸಿದ್ದಾರೆ.

ರೈತರ ಬಲ ಕುಗ್ಗಿಸುವ ಸರ್ಕಾರದ ಹುನ್ನಾರಕ್ಕೆ ಎದೆಗುಂದೆವು

● ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಕೆ ● ನೈತಿಕ ಬಲವುಳ್ಳ ಯುವಕರ ಪಡೆ ಕಟ್ಟುತ್ತೇವೆ ● ಹಸಿರು ಟವೆಲ್ ದುರುಪಯೋಗ ತಡೆಯುತ್ತೇವೆ



ಮೈಸೂರು, ಜೂ.2(ಆರ್‌ಕೆಬಿ)- ಸರ್ಕಾರ ರೈತ ಹೋರಾಟಗಾರರನ್ನು ಹಿಮ್ಮೆಟ್ಟಿಸಲು ಹುನ್ನಾರ ನಡೆಸುತ್ತಿದೆ. ನೈತಿಕ ಬಲ ಹೊಂದಿರುವ ರೈತ ನಾಯಕರು ಸರ್ಕಾರದ ಇಂತಹ ಪ್ರಯತ್ನಗಳಿಗೆ ಕುಗ್ಗುವುದಿಲ್ಲ. ಮುಂದೆ ನೈತಿಕ ಬಲವುಳ್ಳ ಯುವಕರ ಪಡೆಯನ್ನು ಕಟ್ಟುತ್ತೇವೆ. ಹಸಿರು ಟವೆಲ್ ದುರುಪಯೋಗವಾದರೆ ಅದನ್ನು ತಡೆಯುತ್ತೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿಯಲ್ಲಿ ರೈತ ಆಂದೋಲನ ಯಶಸ್ವಿಯಾದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಮರೆ ಮಾಚುವ ನಿಟ್ಟಿನಲ್ಲಿ ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ನಡೆಸಲಾಗಿದೆ. ನಾವು ಸರ್ಕಾರ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಕುತಂತ್ರಗಳಿಗೆ ಬಲಿಯಾಗದೆ, ಚಳುವಳಿ ನಡೆಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಹಸಿರು ಟವೆಲ್ ಒಂದು ದಿನ ಗಾಂಧಿ ಟೋಪಿ ಆಗುತ್ತದೆಂದು ರೈತ ನಾಯಕ ಎಂ.ಡಿ.ನಂಜುಂಡಸ್ವಾಮಿ ಹಿಂದೆಯೇ ಹೇಳಿದ್ದರು. ಕಳ್ಳರು, ಸುಳ್ಳರು, ದಗಾಕೋರರು, ನೀತಿಗೆಟ್ಟವರು ಹಸಿರು ಟವೆಲ್ ಧರಿಸಲು ಶುರು ಮಾಡುತ್ತಾರೆ. ಹಾಗಾಗಿ ನಾವೇ ಒಂದು ಚಿಹ್ನೆ ಮಾಡಿ ಹಸಿರು ಟವೆಲ್ ಮೇಲೆ ಹಾಕಿದ್ದೇವೆ. ಮೌಲ್ಯಯುತವಾದ ಹಸಿರು ಟವಲ್ ಅನ್ನು ದುರುಪಯೋಗ ಮಾಡಿಕೊಳ್ಳುತಿರುವ ವ್ಯಕ್ತಿಗಳು ಹಾಗೂ ಗುಂಪನ್ನು ದೂರ ಇಟ್ಟು ಹೋರಾಟ ಮುಂದುವರೆಸುತ್ತೇವೆ ಎಂದರು.

ಕೋಡಿಹಳ್ಳಿ ವಿರುದ್ಧದ ಆರೋಪ ವಿಚಾರಣೆಗೆ ಸಮಿತಿ ರಚನೆ: ಕೋಡಿಹಳ್ಳಿ ಚಂದ್ರಶೇಖರ್ ಅವರ ಮೇಲೆ ಬಂದಿರುವ ಆರೋಪದ ಕುರಿತು ಸಂಯುಕ್ತ ಹೋರಾಟ- ಕರ್ನಾಟಕದ ಕೋರ್ ಕಮಿಟಿಯಲ್ಲಿ ಗಂಭೀರವಾಗಿ ಚರ್ಚೆಯಾಗಿದೆ. ಸ್ವತಂತ್ರ ಮತ್ತು ಸಮಗ್ರ ತನಿಖೆ ನಡೆಸಲು ತ್ರಿಸದಸ್ಯ ಪೀಠವನ್ನು ರಚಿಸಿದೆ. ದೆಹಲಿಯ ಸಂಯುಕ್ತ ಕಿಸಾನ್ ಮೋರ್ಚಾದ ನಾಯಕತ್ವದೊಂದಿಗೂ ಇದರ ಕುರಿತು ಎಲ್ಲಾ ದೃಷ್ಟಿಕೋನದಿಂದಲೂ ಚರ್ಚಿಸಿ, ಸಮನ್ವಯ ಮಾಡಿಕೊಂಡು ಸಮಗ್ರ ತೀರ್ಮಾನದ ಜೊತೆಗೆ ಸಂಪೂರ್ಣ ವರದಿ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ವಿಸರ್ಜಿಸಲು ಆಗ್ರಹ: ಪಠ್ಯ ಪುಸ್ತಕ ಪರಿಷ್ಕರಣೆ ಬಗ್ಗೆ ಈಗಾಗಲೇ ವ್ಯಾಪಕ ವಿರೋಧಗಳು ವ್ಯಕ್ತವಾಗಿದ್ದು, ಸಾಹಿತಿಗಳು ತಮ್ಮ ಬರವಣಿಗೆಯನ್ನು ಪಠ್ಯದಿಂದ ಕೈಬಿಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದರೂ, ಅದರ ಬಗ್ಗೆ ರಾಜ್ಯ ಸರ್ಕಾರ ಕಿಂಚಿತ್ತೂ ತಲೆಕೆಡಿಸಿಕೊಳ್ಳದೇ ತಮ್ಮ ಉದ್ದೇಶಿತ ಯೋಜನೆಯನ್ನು ಜಾರಿಗೆ ತಂದೇ ತರುವುದಾಗಿ ಹಠಕ್ಕೆ ಬಿದ್ದಿರುವುದು ನಾಗರಿಕ ಲಕ್ಷಣವಲ್ಲ. ಸರ್ಕಾರ ಕೂಡಲೇ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯನ್ನು ವಿಸರ್ಜಿಸಬೇಕು ಎಂದು ಇದೇ ವೇಳೆ ಅವರು ಆಗ್ರಹಿಸಿದರು.

ಸಂಸದರ ಬೌದ್ಧಿಕ ದಿವಾಳಿತನ: ಸಂಸದ ಪ್ರತಾಪ್‌ಸಿಂಹ ಸಾಹಿತಿಗಳ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಕೈಬಿಡಬೇಕು. ತಮ್ಮ ಅರೆಬರೆ ತಿಳುವಳಿಕೆಗೆ ತಿಲಾಂಜಲಿ ಹೇಳಬೇಕು ಎಂದು ಎಚ್ಚರಿಕೆ ನೀಡಿದರು. ಯಾವ ಸಾಹಿತಿಗಳ ಬಗ್ಗೆ ಆರೋಪ ಮಾಡುತ್ತಾರೋ ಅವರೆಲ್ಲರೂ ಕಾಂಗ್ರೆಸ್ ಅನ್ನು ಕಟುವಾಗಿ ವಿರೋಧಿಸಿದವರು ಎಂಬುದನ್ನು ಇತಿಹಾಸ ಓದಿ ತಿಳಿದುಕೊಳ್ಳಬೇಕು. ಇದು ಅವರ ಬೌದ್ಧಿಕ ದಿವಾಳಿತನಕ್ಕೆ ನಿದರ್ಶನವಾಗಿದೆ ಎಂದು ಪ್ರತಾಪ್‌ಸಿಂಹ ವಿರುದ್ಧ ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತಸಂಘದ ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ಎಂ.ಎಸ್. ಅಶ್ವಥ್‌ನಾರಾಯಣರಾಜೇ ಅರಸ್, ನೇತ್ರಾವತಿ, ಶಿರಮಳ್ಳಿ ಸಿದ್ದಪ್ಪ ಇನ್ನಿತರರು ಉಪಸ್ಥಿತರಿದ್ದರು.

ಆರ್‌ಎಸ್‌ಎಸ್‌ಗೆ ನಿಮ್ಮ ಸರ್ಟಿಫಿಕೇಟ್ ಬೇಕಿಲ್ಲ..., ಜನರೇ ದೇಶಭಕ್ತಿಯ ಸರ್ಟಿಫಿಕೇಟ್ ನೀಡಿದ್ದಾರೆ

ಸಿದ್ದರಾಮಯ್ಯ ವಿರುದ್ಧ ಮೈಸೂರಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ವಾಗ್ದಾಳಿ



ಮೈಸೂರು, ಜೂ.2(ಆರ್‌ಕೆಬಿ)- ಆರ್‌ಎಸ್‌ಎಸ್‌ಗೆ ನಿಮ್ಮ ಸರ್ಟಿಫಿಕೇಟ್ ಬೇಕಿಲ್ಲ. ದೇಶದ ಜನರೇ ದೇಶಭಕ್ತಿಯ ಸರ್ಟಿಫಿಕೇಟ್ ನೀಡಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ಸಿ.ಟಿ.ರವಿ ಅವರು ಆರ್‌ಎಸ್‌ಎಸ್ ಅನ್ನು ಟೀಕಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಸುತ್ತಲೂ ಭಯೋತ್ಪಾದಕತೆಗೆ ಬೆಂಬಲ ನೀಡುವವರೇ ತುಂಬಿಕೊಂಡಿದ್ದಾರೆ. ಆದರೂ ನಮ್ಮನ್ನು ಕೋಮುವಾದಿಗಳು ಎನ್ನುತ್ತಾರೆ. ಇಂತಹ ಮನಸ್ಥಿತಿ ಉಳ್ಳವರು ತಾನು ಕಳ್ಳ, ಪರರನ್ನು ನಂಬ ಎಂಬ ಗಾದೆಯಂತಾಗಿದೆ ಎಂದು ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರಿಗೆ ದೃಷ್ಟಿದೋಷವಿದೆ ವಯಸ್ಸಾದಂತೆ ಮನಸ್ಸು ಪಕ್ವವಾಗುತ್ತದಂತೆ. ಆದರೆ ಅವರ ಮನಸ್ಸು ವಯಸ್ಸಾಗುತ್ತಾ ಪಕ್ವತೆ ಬದಲಿಗೆ ಸುಳ್ಳು, ಅಪಪ್ರಚಾರ ಮಾಡುತ್ತಿರುವುದನ್ನು ನೋಡಿದರೆ ಅವರಿಗೆ ಪಕ್ವತೆ ಇಲ್ಲ ಎಂದು ಕಿಡಿಕಾರಿದ ಅವರು, ಮುಂದೊಂದು ದಿನ ಸಿದ್ದರಾಮಯ್ಯ ಅವರಿಗೆ ಸತ್ಯದ ಅರಿವಾಗುತ್ತದೆ. ಮತ ಬ್ಯಾಂಕ್ ಹಾಗೂ ತಮ್ಮವರಿಗೆ ಮಾಡಿದ ಅನ್ಯಾಯಕ್ಕಾಗಿ ಅವರು ಪಶ್ಚಾತ್ತಾಪಪಡುವಂತಾಗುತ್ತದೆ ಎಂದರು.

ಆರ್‌ಎಸ್‌ಎಸ್ ಲಾಭದಾಯಕ ಹುದ್ದೆ ಒಳಗೊಂಡ ಸಂಘಟನೆಯಲ್ಲ. ಇಲ್ಲಿ ಪ್ರಚಾರಕರಾಗುವವರು ಯಾರು ಬೇಕಾದರೂ ಬಂದು ಇಲ್ಲಿ ಸೇವೆ ಸಲ್ಲಿಸಬಹುದು. ಉನ್ನತ ಮಟ್ಟಕ್ಕೆ ಹೋಗಬಹುದು. ಅಂತಹ ಅವಕಾಶವನ್ನು ಆರ್‌ಎಸ್‌ಎಸ್ ನಮಗೆ ಕಲ್ಪಿಸಿಕೊಟ್ಟಿದೆ ಎಂದು ಸಿ.ಟಿ.ರವಿ ಸಮರ್ಥಿಸಿಕೊಂಡರು.

ಎಲ್ಲಾ ಕ್ಷೇತ್ರದಲ್ಲೂ ಬಿಜೆಪಿ ಗೆಲುವಿನ ವಿಶ್ವಾಸ: ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಸಾಧಿಸಲಿದೆ. ಕಳೆದ ಬಾರಿ ಎರಡು ಕ್ಷೇತ್ರದಲ್ಲಿ ಗೆದ್ದಿದ್ದೆವು. ಈ ಬಾರಿ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಪ್ರಜ್ಞಾವಂತ ಮತದಾರರು ಬಿಜೆಪಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

3ನೇ ಅಭ್ಯರ್ಥಿ ಗೆಲುವಿಗೆ ರಣತಂತ್ರ: ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಯ 3ನೇ ಅಭ್ಯರ್ಥಿ ಗೆಲುವಿಗೆ ರಣತಂತ್ರ ಮಾಡಿದ್ದೇವೆ. ಅದರ ರಹಸ್ಯವನ್ನು ಮಾಧ್ಯಮಗಳ ಮುಂದೆ ಹೇಳಲಾಗದು. ನಮ್ಮ ಬಳಿ ಹೆಚ್ಚುವರಿ 32 ಮತಗಳಿವೆ. ಕಾಂಗ್ರೆಸ್ ಬಳಿ 19 ಹೆಚ್ಚುವರಿ ಮತಗಳಿವೆ. ಬಹಿರಂಗ ಬಂಡಾಯದ ಲಾಭವನ್ನು ನಾವು ಪಡೆಯುತ್ತೇವೆ ಎಂದು ಹೇಳಿದರೆ ವಿರೋಧಿಗಳಿಗೆ ಸಿಟ್ಟು ಬರಬಹುದು. ಹಾಗಾಗಿ ಫಲಿತಾಂಶವನ್ನು ಎದುರು ನೋಡಿ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮಾಜಿ ಅಧ್ಯಕ್ಷ ಶಿವಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಪ್ರತಾಪ್, ವಕ್ತಾರ ಎಂ.ಎ.ಮೋಹನ್, ಸಿಂಡಿಕೇಟ್ ಸದಸ್ಯ ನಿಂಗರಾಜೇಗೌಡ, ಜಯಪ್ರಕಾಶ್ (ಜೆಪಿ), ಪ್ರದೀಪ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ನಟನದಲ್ಲಿ 'ಬೆತ್ತಲೆ ಅರಸನ ರಾಜರಹಸ್ಯ'



ಮೈಸೂರು, ಜೂ. 2- ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ರಂಗಾಸಕ್ತರಿಗಾಗಿ ನಟನ ರಂಗಶಾಲೆಯ ರಂಗಭೂಮಿ ಡಿಪ್ಲೋಮಾ ವಿದ್ಯಾರ್ಥಿಗಳಿಂದ ಜೂನ್ 5ರಂದು ಸಂಜೆ 6.30ಕ್ಕೆ ಸರಿಯಾಗಿ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಎಮ್‌ಎಸ್‌ಕೆ ಪ್ರಭು ಅವರ ನೀಳ್ಗತೆಯನ್ನು ಆಧರಿಸಿದ 'ಬೆತ್ತಲೆ ಅರಸನ ರಾಜ ರಹಸ್ಯ' ನಾಟಕವು ಮಂಡ್ಯ ರಮೇಶ್ ಅವರ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ. ನಾಟಕದ ರಂಗರೂಪ ಶ್ರೀಮತಿ ಕುಸುಮ ಆಯರಹಳ್ಳಿ ಅವರದ್ದು. ನಟನದ ರಂಗ ಉಪನ್ಯಾಸಕಿ ಕುಮಾರಿ ದಿಶಾ ರಮೇಶ್ ನಾಟಕಕ್ಕೆ ಸಂಗೀತ ಒದಗಿಸಿದ್ದು, ನಟನದ ಪ್ರಾಂಶುಪಾಲರಾದ ಶ್ರೀ ಮೇಘ ಸಮೀರ ಅವರು ನಾಟಕವನ್ನು ವಿನ್ಯಾಸಗೊಳಿಸಿದ್ದಾರೆ. ಮಾಹಿತಿಗೆ 72595 37777, 9480468327, 9945555570, 9845595505 ಸಂಪರ್ಕಿಸಬಹುದು.

ನಾಳೆ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮೊದಲ ಪದವಿ ಪ್ರದಾನ ಸಮಾರಂಭ

ಪದವಿ ಪಡೆದ 274 ವಿದ್ಯಾರ್ಥಿಗಳ ಪೈಕಿ 40 ಮಂದಿಗೆ ಉನ್ನತ ಶ್ರೇಣಿ



ಮೈಸೂರು, ಜೂ.2(ಆರ್‌ಕೆಬಿ)- ಮೈಸೂರಿನ ಜಯಲಕ್ಷ್ಮಿಪುರಂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮೊದಲ ಪದವಿ ಪ್ರದಾನ ಸಮಾರಂಭ ಜೂ.4ರಂದು ಬೆಳಗ್ಗೆ 11 ಗಂಟೆಗೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 2019-20ರಲ್ಲಿ ಸ್ವಾಯತ್ತೆ ಪಡೆದ ಕಾಲೇಜಿನಲ್ಲಿ ಇದೇ ಮೊದಲ ಬಾರಿಗೆ ಪದವಿ ಪ್ರದಾನ ಸಮಾರಂಭ ನಡೆಸಲಾಗುತ್ತಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ವಿವಿಧ ವಿಷಯಗಳಲ್ಲಿ ಒಟ್ಟು 274 ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. ಈ ಪೈಕಿ 40 ಮಂದಿ ಉನ್ನತ ಶ್ರೇಣಿ, 232 ಮಂದಿ ಪ್ರಥಮ ದರ್ಜೆ ಹಾಗೂ ಇಬ್ಬರು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರಲ್ಲಿ ಪ್ರಥಮ ಹಾಗೂ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆಂಧ್ರಪ್ರದೇಶದ ಗುಂಟೂರು ವಿಜ್ಞಾನ ಫೌಂಡೇಷನ್ ಫಾರ್ ಸೈನ್ಸ್, ಟೆಕ್ನಾಲಜಿ ಅಂಡ್ ರಿಸರ್ಚ್ (ಡೀಮ್ಡ್ ವಿಶ್ವವಿದ್ಯಾನಿಲಯ) ಕುಲಪತಿ ಡಾ.ಪಿ. ನಾಗಭೂಷಣ್ ಅವರು ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ವಿತರಿಸಿ, ಪದವಿ ಪ್ರದಾನ ಭಾಷಣ ಮಾಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ವಿವಿಧ ಕೋರ್ಸ್‌ಗಳಲ್ಲಿ ಪ್ರಥಮ ಹಾಗೂ ಉನ್ನತ ಶ್ರೇಣಿ ಪಡೆದವರಲ್ಲಿ ಮಹಿಳೆಯರೇ ಅತ್ಯಂತ ಹೆಚ್ಚಿನ ಸಾಧನೆ ಮಾಡಿರುವುದು ವಿಶೇಷವಾಗಿದೆ. ವಿವಿಧ ಕೋರ್ಸ್‌ಗಳಲ್ಲಿ ಸೃಷ್ಟಿ ಜನಾದ್ರಿ, ಅರ್ಚನಾ ಬರ್ನಡೆಟ್ ಪ್ರದೀಪ್, ವಿ.ಪ್ರಿಯದರ್ಶಿನಿ, ಎಸ್.ಡಿ.ನಿತ್ಯಾ, ಕೆ.ಪಿ.ಪೂಜಾ, ಜೆ.ಚಿಂತನಾ, ಎಂ.ಎಸ್.ದಿವ್ಯಶ್ರೀ, ಎಸ್.ಚಂದನ, ಪಿ.ಕೆ. ಪೊನ್ನಮ್ಮ, ಕೆ.ಎಸ್.ಕಾವ್ಯಶ್ರೀ, ನಾಗರತ್ನ ಸಿ.ಕಮತ್ಕರ್, ಎಸ್.ಚಂದ್ರಶೇಖರ್ ಉನ್ನತ ಶ್ರೇಣಿ ಪಡೆದವರಾಗಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಹಾಜನ ಎಜುಕೇಶನ್ ಸೊಸೈಟಿ ಅಧ್ಯಕ್ಷ ಟಿ.ಮುರಳೀಧರ ಭಾಗವತ್, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್.ಜಯಕುಮಾರಿ, ಪರೀಕ್ಷಾ ನಿಯಂತ್ರಣಾಧಿಕಾರಿ ಆರ್.ಮಂಜುನಾಥ್, ಶೈಕ್ಷಣಿಕ ಡೀನ್ ಡಾ.ಹೆಚ್.ಶ್ರೀಧರ್ ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರದಲ್ಲಿರುವ ಖಾಸಗಿ ಶಾಲೆಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡ ಎನ್.ಅರುಣ್‌ಕುಮಾರ್‌ಗೌಡ, ಜಿಲ್ಲಾ ವಕ್ತಾರ ರಾಜಕುಮಾರ್, ಹಿರಿಯ ಮುಖಂಡರಾದ ಗೋಪಾಲ್ ರಾವ್, ಶ್ರೀನಿವಾಸ್, ಕೇಬಲ್ ಕುಮಾರ್, ಹಿನಕಲ್ ಗಣೇಶ್, ಹಿನಕಲ್ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ವೆಂಕಟೇಶ್, ವಿಜಯನಗರ ಶಶಿ, ಹಿನಕಲ್ ರಮೇಶ್, ಶಿವಣ್ಣ ಮತ್ತಿತರರು ಮತಯಾಚನೆ ಮಾಡಿದರು.

ಡಾ. ಜಯತೀರ್ಥ ಮೇವುಂಡಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

ಮೈಸೂರು, ಜೂ. 2- ಮೈಸೂರಿನ ರಾಗವೈಭವ ಚಾರಿಟಬಲ್ ಟ್ರಸ್ಟ್ ವತಿಯಿಂದ ಜೂ. 5 ರಂದು ಸಂಜೆ 6 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀ ನಾದಬ್ರಹ್ಮ ಸಂಗೀತಾ ಸಭಾ, ಮೈಸೂರು ವಾಸುದೇವಾಚಾರ್ಯ ಭವನದಲ್ಲಿ ಡಾ. ಜಯತೀರ್ಥ ಮೇವುಂಡಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪಕ್ಕವಾದ್ಯದಲ್ಲಿ ಡಾ. ರವೀಂದ್ರ ಜಿ. ಕಟೋಟಿ (ಹಾರ್ಮೋನಿಯಂ) ಮತ್ತು ಪಂಡಿತ್ ಗುರುಮೂರ್ತಿ ವೈದ್ಯ (ತಬಲ)ದಲ್ಲಿ ಸಹಕಾರ ನೀಡಲಿದ್ದಾರೆ.

ಮೈಸೂರಲ್ಲಿ ಮಂಗಳಮುಖಿಯ ಜನಮುಖಿ ಕಾರ್ಯ

● ನ್ಯಾಯಬೆಲೆ ಅಂಗಡಿ ಮೂಲಕ ಗೌರವಯುತ ಜೀವನ ● ಇ-ಸೇವಾ ಕೇಂದ್ರದಿಂದ ಸಾರ್ವಜನಿಕರ ಸೇವೆ



> "ಸಮಾಜದಲ್ಲಿ ಜನರ ಮನಸ್ಥಿತಿ ಇನ್ನೂ ಬದಲಾಗಿಲ್ಲ. ಮಂಗಳಮುಖಿಯರು ಎಂದರೆ ವಿಚಿತ್ರವಾಗಿ ನೋಡುತ್ತಾರೆ. ಬಾಡಿಗೆಗೆ ಮನೆಯನ್ನು ನೀಡುವುದಿಲ್ಲ. ವಿದ್ಯಾಭ್ಯಾಸ ಮಾಡಿರುವ ಅನೇಕ ಮಂಗಳಮುಖಿಯರು ಸಮಾಜದ ನಡುವೆ ಉನ್ನತ ಹುದ್ದೆಗಳಲ್ಲಿ ಗುರುತಿಸಿಕೊಂಡಿದ್ದಾರೆ. ಪ್ರತಿಯೊಬ್ಬ ಮಂಗಳಮುಖಿಯೂ ವಿದ್ಯಾಭ್ಯಾಸ ಮಾಡಬೇಕು ವಿದ್ಯೆಯ ಮೂಲಕವೇ ಬದಲಾವಣೆ ಸಾಧ್ಯ.
> -ಚಾಂದಿನಿ (ಅಸ್ಲಂಪಾಷ)

ಮೈಸೂರು,ಜೂ.2(ಜಿಎ)- ಮಂಗಳಮುಖಿಯರು ಎಂದರೆ ನಮ್ಮ ಸಮಾಜ ವಿಚಿತ್ರವಾಗಿ ನೋಡುತ್ತದೆ, ಅವರಿಗೆ ಗೌರವ ಕೊಡುವುದು ಅಪರೂಪ, ಆದರೆ ಇಲ್ಲೊಬ್ಬರು ಮಂಗಳಮುಖಿ ಸಮಾಜವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾರೆ.

ಮೈಸೂರಿನ ನಜರ್‌ಬಾದ್ ಬಡಾ-ಮಖಾನ್ ನಿವಾಸಿ ಮಂಗಳಮುಖಿ ಚಾಂದಿನಿ (ಅಸ್ಲಂಪಾಷ) ಅವರು ನಗರದ ಸಾತಗಳ್ಳಿಯಲ್ಲಿ ನ್ಯಾಯಬೆಲೆ ಅಂಗಡಿ ಇಟ್ಟುಕೊಂಡು ಉತ್ತಮ ಜೀವನ ನಡೆಸುವುದರೊಂದಿಗೆ ಇ-ಸೇವಾ ಕೇಂದ್ರವನ್ನು ತೆರೆದು ಮಂಗಳಮುಖಿಯರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುವುದಲ್ಲದೆ ಮಂಗಳಮುಖಿ ಎಂದು ಮೂಗು ಮುರಿಯುವವರು ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾರೆ.

ಮಂಗಳಮುಖಿ ಚಾಂದಿನಿ (ಅಸ್ಲಂಪಾಷ) ಅವರು ವಜೀರ್ ಅಹಮ್ಮದ್ ಮತ್ತು ಶಾನಜ್ ಬೇಗಮ್ ದಂಪತಿಗಳ ಪುತ್ರನಾಗಿ 1978ರಲ್ಲಿ ಜನಿಸಿದರು. ಆರಂಭದಲ್ಲಿ ಎಲ್ಲಾ ಯುವಕರಂತೆ ಅವರ ಜೀವನ ಆರಂಭವಾಯಿತು. ನಗರದ ವೆಂಕಟೇಶ್ವರ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಆರಂಭವಾಗಿ ನಂತರ ಪ್ರೌಢ ಶಿಕ್ಷಣವನ್ನು ಮಲ್ಲಿಕಾರ್ಜುನ ಶಾಲೆಯಲ್ಲಿ ಪೂರೈಸಿದರು.

12 ವರ್ಷವಾದ ನಂತರ ಅವರ ದೇಹದಲ್ಲಿ ಮಂಗಳಮುಖಿ ಹಾವಭಾವಗಳು ಕಂಡುಬಂತು. ಈ ಸಂದರ್ಭದಲ್ಲಿ ಇದನ್ನು ಗಮನಿಸಿದ ಕುಟುಂಬಸ್ಥರು ಮನೆಯಿಂದ ಹೊರ ಹಾಕಿದರು. ನಂತರ ಚಾಂದಿನಿ ಮಂಗಳಮುಖಿಯರ ಸಹಾಯದಿಂದ ಮುಂಬೈಗೆ ಪ್ರಯಾಣ ಬೆಳೆಸಿ ಅಲ್ಲಿನ ಮಂಗಳಮುಖಿಯರ ಜೊತೆ ಒಂದು ವರ್ಷಗಳ ಕಾಲ ಜೀವನ ನಡೆಸಿ ಮತ್ತೆ ಮೈಸೂರಿಗೆ ಮರಳಿದರು.

ಮೈಸೂರಿಗೆ ಮರಳಿದ ನಂತರ ಚಾಂದಿನಿಯನ್ನು ಪೋಷಕರು ಮತ್ತೆ ಶಾಲೆಗೆ ಸೇರಿಸಿದರು. ಚಾಂದಿನಿ ಹತ್ತನೇ ತರಗತಿಯಲ್ಲಿ ತೇರ್ಗಡೆಯಾದರು. ಕಾಲೇಜು ವ್ಯಾಸಂಗಕ್ಕೆ ಮುಂದಾಗಿ ನಗರದ ಮಹಾರಾಜ ಕಾಲೇಜಿನಲ್ಲಿ ಪ್ರಥಮ ವರ್ಷದ ಪಿಯುಸಿಗೆ ಸೇರ್ಪಡೆಯಾದರು. ಈ ವೇಳೆ ಅವರ ಸಹಪಾಠಿಗಳು ಚುಡಾಯಿಸಿ ನಿಂದಿಸುತ್ತಿದ್ದರಿಂದ ಬೇಸತ್ತ ಚಾಂದಿನಿ ಪಿಯುಸಿಯನ್ನು ಕೇವಲ 6 ತಿಂಗಳಿಗೆ ಮೊಟಕುಗೊಳಿಸಿ, ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿ ರಾಜಕೀಯ ಜೀವನಕ್ಕೆ ಕಾಲಿಟ್ಟರು.

ಇದರ ನಡುವೆ ದೂರ ಶಿಕ್ಷಣ (ಕರೆಸ್ಪಾಂಡೆಂಟ್)ದ ಮೂಲಕ ಪಿಯುಸಿ ಮತ್ತು ಬಿ.ಎ. ಪದವಿಯನ್ನು ಪಡೆದುಕೊಂಡರು. ಅಂದಿನಿಂದಲೂ ಸ್ಥಳೀಯರಿಗೆ ಮತ್ತು ಮಂಗಳಮುಖಿಯರಿಗೆ ಸರ್ಕಾರದಿಂದ ದೊರಕಬೇಕಾದ ಸೌಲಭ್ಯಗಳನ್ನು ಕೊಡಿಸುವಲ್ಲಿ ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳನ್ನು ಭೇಟಿ ಮಾಡಿ ಅವರಿಂದ ಸೌಲಭ್ಯಗಳನ್ನು ಕೊಡಿಸಲು ಮುಂದಾದರು. ಈ ನಡುವೆ ಒಮ್ಮೆ ಎಂಎಲ್‌ಎ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆದರೆ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ.

ರಾಜ್ಯ ಸರ್ಕಾರದಿಂದ ಮಂಗಳಮುಖಿಯರಿಗೆ ದೊರೆಯುವ ವಿಶೇಷ ಸೌಲಭ್ಯಗಳನ್ನು ಬಳಸಿಕೊಂಡ ಚಾಂದಿನಿ ಸ್ವತಃ ನ್ಯಾಯಬೆಲೆ ಅಂಗಡಿ ಹಾಗೂ ಇ-ಕೇಂದ್ರ ಆರಂಭಿಸಿ ಸಾರ್ವಜನಿಕರಿಗೆ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಹಿರಿಯ ನಾಗರಿಕರಿಗೆ ಪಿಂಚಣಿ ಸೇರಿದಂತೆ ಇತರೆ ಸೌಲಭ್ಯಗಳನ್ನು ಜನರಿಗೆ ಕೊಡಿಸುವ ಕಾರ್ಯದಲ್ಲಿ ತೊಡಗಿರುವ ಚಾಂದಿನಿಗೆ ಸಾರ್ವಜನಿಕರಿಂದ ಭಾರೀ ಮೆಚ್ಚುಗೆ ಕೇಳಿಬರುತ್ತಿವೆ.

ರೋಹಿತ್ ಚಕ್ರತೀರ್ಥ ವಿರುದ್ಧ ನಂಜನಗೂಡಿನಲ್ಲಿ ಪ್ರತಿಭಟನೆ



ನಂಜನಗೂಡು, ಜೂ.2(ಸುದರ್ಶನ್)– ರಾಷ್ಟ್ರ ಕವಿ ಕುವೆಂಪು ಅವರು ಬರೆದಿರುವ ನಾಡಗೀತೆಯನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ಪಟ್ಟಣದಲ್ಲಿ ಗುರುವಾರ ತಾಲೂಕು ಲಿಂಗಾಯತಗೌಡ ಮಹಾಸಭಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ತಹಸೀಲ್ದಾರ್ ಕಚೇರಿ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ರೋಹಿತ್ ಚಕ್ರತೀರ್ಥರನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಬಸವಕೇಂದ್ರದ ಬಸವಯೋಗಿ ಪ್ರಭುಸ್ವಾಮೀಜಿ ಮಾತನಾಡಿ, ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ 9ನೇ ತರಗತಿಯ ಸಮಾಜವಿಜ್ಞಾನ ಪಠ್ಯದಲ್ಲಿ ಬಸವಣ್ಣನವರು ಉಪನಯನ ಮಾಡಿಕೊಂಡು ಶೈವ ಗುರುವಿನಿಂದ ಲಿಂಗದೀಕ್ಷೆ ಪಡೆದರೆಂಬ ಸುಳ್ಳನ್ನು ಪ್ರತಿಪಾದಿಸಿ ವಿದ್ಯಾರ್ಥಿಗಳಿಗೆ ತಪ್ಪು ಸಂದೇಶ ನೀಡುವ ಮೂಲಕ ಲಿಂಗಾಯತ ಧರ್ಮ ಸಂಸ್ಥಾಪಕ ಬಸವಣ್ಣನವರ ನೈಜ ವಿಚಾರಗಳನ್ನು ಮರೆಮಾಚಲಾಗಿದೆ. ಸರ್ಕಾರ ವಕ್ರಬುದ್ಧಿಯ ರೋಹಿತ್ ಚಕ್ರ ತೀರ್ಥರನ್ನು ಪರಿಷ್ಕರಣಾ ಸಮಿತಿಯಿಂದ ವಜಾಮಾಡಿ, ಪಠ್ಯ ಪುಸ್ತಕಗಳಲ್ಲಿರುವ ತಪ್ಪು ಸಂದೇಶಗಳನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಮುಖಂಡ ಹಲ್ಲರೆ ಶಿವಬುದ್ಧಿ ಮಾತನಾಡಿ, ಪಠ್ಯದಲ್ಲಿ ಸತ್ಯವಾದ ವಿಚಾರವನ್ನು ಮುದ್ರಿಸದೆ, ದೋಷ ಪೂರಿತವಾದ ವಿಚಾರಗಳನ್ನು ಸೇರಿಸಿರುವುದನ್ನು ಸೂಕ್ಷ್ಮವಾಗಿ ಗಮನಿಸದೆ ಸರ್ಕಾರ ಒಪ್ಪಿರುವುದು ಷಡ್ಯಂತ್ರವೇ ಸರಿ. ಪರಿಷ್ಕೃತ ಪಠ್ಯವನ್ನು ಸ್ಥಗಿತಗೊಳಿಸಿ, ಸತ್ಯ ವಿಚಾರವನ್ನು ಪರಿಶೀಲಿಸಿ ಸೇರಿಸಬೇಕು. ದೋಷ ಪೂರಿತ ಪಠ್ಯವನ್ನು ಪ್ರಕಟಿಸಿದ ಪಠ್ಯ ಸಮಿತಿಯನ್ನು ವಜಾಗೊಳಿಸಬೇಕು. ಇಲ್ಲದಿದ್ದಲ್ಲಿ ರಾಜ್ಯಾದ್ಯಂತ ಕೋಟ್ಯಾಂತರ ಬಸವ ಭಕ್ತರು ಹಾಗೂ ಲಿಂಗಾಯಿತರು ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ತಹಸೀಲ್ದಾರ್ ಶಿವಮೂರ್ತಿ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ತಾಲೂಕು ಪ್ರತಿಧ್ವನಿ ವೇದಿಕೆಯ ಅಧ್ಯಕ್ಷ ತ್ರಿನೇಶ್, ವೀರಶೈವ ಲಿಂಗಾಯತ ಮುಂಖಡ ಚೆನ್ನಪ್ಪ, ಮಕ್ಕಳ ಮನೆ ಸೋಮಶೇಖರ್, ಹುಸ್ಕೂರು ಮಲ್ಲಿಕಾರ್ಜುನ್, ಬಸವಯೋಗೀಶ್, ರಂಗುಪುರ ನಾಗರಾಜು, ಲಿಂಗಾಯತ ಗೌಡ ಮಹಾಸಭಾದ ಜಿಲ್ಲಾಧ್ಯಕ್ಷ ಕಣೇನೂರು ಜಗದೀಶ್, ನಂಜುಂಡಸ್ವಾಮಿ, ಡಾ.ಹನುಮಯ್ಯ, ಮುದ್ದಹಳ್ಳಿ ಅಶೋಕ್, ಹೊರಳವಾಡಿ ಮಹೇಶ್, ನಂಜುಂಡಸ್ವಾಮಿ, ವಳಗೆರೆ ಮಹದೇವಸ್ವಾಮಿ, ಸಂಜಯ್ ಉಪಸ್ಥಿತರಿದ್ದರು.

ಇಂದು ಕೋಣಸೂರಿನಲ್ಲಿ ದೊಡ್ಡಮ್ಮ, ಚಿಕ್ಕಮ್ಮ ರಥೋತ್ಸವ

ಬೆಟ್ಟದಪುರ, ಜೂ.2(ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಕೋಣಸೂರು ಗ್ರಾಮದಲ್ಲಿ ಜೂ. 3ರ ಶುಕ್ರವಾರ ದೊಡ್ಡಮ್ಮ ಮತ್ತು ಚಿಕ್ಕಮ್ಮದೇವರ ರಥೋತ್ಸವ ನಡೆಯಲಿದೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ 3 ವರ್ಷದಿಂದ ಸ್ಥಗಿತಗೊಂಡಿದ್ದ ರಥೋತ್ಸವವನ್ನು ಈ ಬಾರಿ ಅದ್ದೂರಿಯಾಗಿ ನಡೆಸಲು, ಗ್ರಾಮಸ್ಥರು ಸಕಲ ಸಿದ್ಧತೆ ಕೈಗೊಂಡಿದ್ದಾರೆ.

ರಥೋತ್ಸವ ನಂತರ ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿದೆ. ಹೆಚ್ಚಿನ ಭಕ್ತರು ರಥೋತ್ಸವದಲ್ಲಿ ಪಾಲ್ಗೊಳ್ಳಬೇಕು ಎಂದು ಗ್ರಾಮದ ಮುಖಂಡರಾದ ರಾಜಶೇಖರಯ್ಯ, ಯೋಗೇಶ್, ತಾಪಂ ಸದಸ್ಯ ಚಂದ್ರು, ಶೋಭಾ, ಮೈಸೂರು ಜಾನಪದ ವಿವಿ ಸಿಂಡಿಕೇಟ್ ಸದಸ್ಯ ವಸಂತ್‌ಕುಮಾರ್, ಗ್ರಾಪಂ ಸದಸ್ಯ ಮಂಜುನಾಥ್, ಶ್ರೀ ಶಿವಕುಮಾರ ಸ್ವಾಮೀಜಿ ಅಭಿಮಾನಿ ಬಳಗದ ಆನಂದ್, ವೀರಪ್ಪ, ಟೈಲರ್ ಶಿವು, ನಾಗರಾಜು, ನಟರಾಜ್, ಮಹದೇವ ಸೇರಿದಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ. ಇದೇ ರೀತಿ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮುತ್ತಿನ ಮುಳುಸೋಗೆ ಗ್ರಾಮದಲ್ಲೂ ನಾಳೆ (ಜೂ.3) ದೊಡ್ಡಮ್ಮ ತಾಯಿ ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಗ್ರಾಮದ ಮುಖಂಡ ಎಂ.ಎನ್. ಚಂದ್ರಶೇಖರ್ ತಿಳಿಸಿದರು.

ಮಧು ಜಿ.ಮಾದೇಗೌಡ ಪರ ಮತಯಾಚನೆ



ಸುತ್ತೂರು, ಜೂ.2(ನಂಜುಂಡನಾಯಕ)– ದಕ್ಷಿಣ ಪದವಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಅಂಬೇಡ್ಕರ್ ನಿಗಮದ ಮಾಜಿ ನಿರ್ದೇಶಕ ನಟರಾಜ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪರಶಿವಮೂರ್ತಿ, ಗ್ರಾಪಂ ಸದಸ್ಯ ಸೋಮಸುಂದರ ಮತಯಾಚಿಸಿದರು.

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಶಾಸಕ ಹರ್ಷವರ್ಧನ್ ಮತಯಾಚನೆ



ಮಲ್ಕುಂಡಿ, ಜೂ.2(ಚನ್ನಪ್ಪ)– ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ನೀಡಿ, ಕೇಂದ್ರ ಸರ್ಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಮಹತ್ವವನ್ನು ಅರಿತಿರುವ ದಕ್ಷಿಣ ಪದವೀಧರ ಮತದಾರರು ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಸಾಮಾಜಿಕ ಬದ್ಧತೆಯನ್ನು ಮೆಚ್ಚಿ ಚುನಾವಣೆಯಲ್ಲಿ ಅವರನ್ನು ಬೆಂಬಲಿಸಲಿದ್ದಾರೆ ಎಂದು ಶಾಸಕ ಬಿ. ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು. ಸಮೀಪದ ಕಸುವಿನಹಳ್ಳಿ ಗ್ರಾಪಂ ವ್ಯಾಪ್ತಿಯ ಹಲವು ಗ್ರಾಮಗಳ ಶಾಲೆಗಳಿಗೆ ಗುರುವಾರ ತೆರಳಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರ ಮತಯಾಚಿಸಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿ ಮೆಚ್ಚಿರುವ ಪ್ರಜ್ಞಾವಂತ ಮತದಾರರು ರವಿಶಂಕರ್ ಅವರನ್ನು ಈ ಭಾರಿ ಕೈ ಹಿಡಿಯಲ್ಲಿದ್ದಾರೆ ಎಂದರು. ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಕೆಂಪಣ್ಣ, ಶಿವಣ್ಣ, ಗ್ರಾಪಂ ಅಧ್ಯಕ್ಷ ಸ್ವಾಮಿ, ನವೀನ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ಮಧು ಜಿ.ಮಾದೇಗೌಡರನ್ನು ಗೆಲ್ಲಿಸಲು ಮನವಿ



ಹುಣಸೂರು, ಜೂ.2(ಕೆಕೆ)– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಅತಿ ಹೆಚ್ಚು ಮತ ಬರುವಂತೆ ಪಕ್ಷದ ಕಾರ್ಯಕರ್ತರು ಶ್ರಮಿಸಬೇಕೆಂದು ಶಾಸಕ ಎಚ್.ಪಿ.ಮಂಜುನಾಥ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಬ್ಲಾಕ್ ಅಧ್ಯಕ್ಷರು, ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಹುಣಸೂರು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮೂರು ಬ್ಲಾಕ್ ಅಧ್ಯಕ್ಷರು ಹಾಗೂ ಕಾರ್ಯಕರ್ತರೆಲ್ಲರೂ ಒಗ್ಗೂಡಿ ಮತದಾರರ ಮನೆ ಮನೆಗೆ ತೆರಳಿ ಮತದಾರರ ಮನವೊಲಿಸುವ ಕೆಲಸದೊಂದಿಗೆ ಕೇಂದ್ರ ಮತ್ತು ಈಗಿನ ರಾಜ್ಯ ಸರ್ಕಾರದ ಭ್ರಷ್ಟಚಾರ ಆಡಳಿತ ಹಾಗೂ ಹಿಂದಿನ ಸಿದ್ದರಾಮಯ್ಯ ನೇತೃತ್ವದ ಜನಪರ ಆಡಳಿತದ ಬಗ್ಗೆ ಮನವರಿಕೆ ಮಾಡಿಕೊಟ್ಟು ಮತ ಕೇಳಬೇಕು ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಿಂದುಳಿದ ಸಮುದಾಯಕ್ಕೆ ಅನ್ಯಾಯವಾಗಿದ್ದು, ಶಿಕ್ಷಣ ಇಲಾಖೆ ಭ್ರಷ್ಟಚಾರದಿಂದ ಕೂಡಿದೆ. ಉದ್ಯೋಗ ಕ್ಷೇತ್ರದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿ ಯುವ ಸಮೂಹ ಪರದಾಡುತ್ತಿದ್ದು, ಇವೆಲ್ಲವನ್ನೂ ಪದವೀಧರ ಮತದಾರರಿಗೆ ಮನದಟ್ಟು ಮಾಡಬೇಕಿದೆ ಎಂದು ತಿಳಿಸಿದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಟಿ.ವಿ. ನಾರಾಯಣ್, ದೇವರಾಜ್, ರಮೇಶ್, ಕಾರ್ಯಾಧ್ಯಕ್ಷ ಅಸ್ವಾಳು ಕೆಂಪೇಗೌಡ, ಮಾಜಿ ಅಧ್ಯಕ್ಷ ಬಿಳಿಕೆರೆ ಬಸವರಾಜ್, ತಾ.ಪಂ.ಮಾಜಿ ಸದಸ್ಯ ರವಿಪ್ರಸನ್ನ, ಯುವ ಮುಖಂಡ ರಘು, ಹರ್ಷವರ್ಧನ್, ರಮೇಶ್, ಕುಮಾರ್, ಬಸವರಾಜಪ್ಪ ಮೊದಲಾದವರು ಉಪಸ್ಥಿತರಿದ್ದರು.



ಮನೆ ಗೋಡೆ ಕುಸಿದು ಸಾವನ್ನಪ್ಪಿದ ಹೆಚ್.ಡಿ.ಕೋಟೆ ಪಟ್ಟಣದ ಶಿವಾಜಿ ರಸ್ತೆಯ ನಿವಾಸಿ ಪರಶಿವಮೂರ್ತಿ ಅವರ ಮನೆಗೆ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿ, ಧನ ಸಹಾಯ ಮಾಡಿದರು. ಈ ವೇಳೆ ಮುಖಂಡರಾದ ಸಲೀಂ, ನಯಿಮ್‌ಉಲ್ಲಾ, ರೆಹಮಾನ್, ಅಮೀ ರಂಜನ್, ನಾಗೇಶ್ ಇದ್ದರು.

ಹುಲ್ಲಹಳ್ಳಿ ಗ್ರಾಪಂ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿಗೆ ಸೋಲು

• ಕೋರಂ ಕೊರತೆಯಿಂದ ಸಭೆ ರದ್ದು • ದೂರು ನೀಡಿದ ಸದಸ್ಯನೇ ಸಭೆಗೆ ಗೈರು

ಹುಲ್ಲಹಳ್ಳಿ, ಜೂ.2(ಚಿನ್ನಸ್ವಾಮಿ)– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್.ಎನ್. ಮಹೇಶ್ ವಿರುದ್ಧ ಅವಿಶ್ವಾಸ ಮಂಡನೆ ಗೊತ್ತುವಳಿ ವಿಫಲವಾಗಿದೆ.

ಗ್ರಾಪಂ ಕಚೇರಿ ಆವರಣದಲ್ಲಿ ಗುರುವಾರ ಕರೆಯಲಾದ ಸಭೆ ಕೋರಂ ಅಭಾವದಿಂದ ಅಧಿಕಾರಿಗಳು ಸಭೆ ರದ್ದುಪಡಿಸಿದ್ದಾರೆ. ವಿಶೇಷವೆಂದರೆ ಅವಿಶ್ವಾಸ ಮಂಡಿಸಲು ದೂರು ನೀಡಿದ್ದ ಸದಸ್ಯನೇ ಸಭೆ ಗೈರಾಗುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. ಇದರಿಂದ ಗ್ರಾಪಂ ಅಧ್ಯಕ್ಷರ ವಿರೋಧಿ ಬಣಕ್ಕೆ ಭಾರಿ ಮುಖಭಂಗವಾಗಿದೆ.



ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹೇಶ್ ವಿರುದ್ಧ ಕೆಲ ಸದಸ್ಯರು ಅಭಿವೃದ್ಧಿ ಕುಂಠಿತ ಎಂಬ ನೆಪವೊಡ್ಡಿ ಅವಿಶ್ವಾಸ ಮಂಡನೆಗೆ ಮುಂದಾಗಿದ್ದರು. ದೂರಿನ ಆಧಾರದಂತೆ ಸಭೆ ಕರೆಯಲಾಗಿತ್ತು. 22 ಸದಸ್ಯರ ಪೈಕಿ 19 ಸದಸ್ಯರ ಬೆಂಬಲ ಪಡೆದಿದ್ದ ಮಹೇಶ್ ಅಧ್ಯಕ್ಷರಾಗಿದ್ದರು. ಮಹೇಶ್ ಪದಚ್ಯುತಿಗಾಗಿ ಅವಿಶ್ವಾಸ ಮಂಡನೆ ಸಾಬೀತು ಪಡಿಸಲು ಸದಸ್ಯರಾದ ಗೋಪಾಲನಾಯಕ ಪ್ರಯತ್ನಿಸಿ 12 ಸದಸ್ಯರ ಸಮೇತ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ ಕಮಲಾಭಾಯಿ ನೇತೃತ್ವದಲ್ಲಿ ಅವಿಶ್ವಾಸ ಮಂಡನೆಗೆ ಸಭೆ ಕರೆಯಲಾಗಿತ್ತು. ಆದರೆ, ಸಭೆಗೆ ಯಾವ ಸದಸ್ಯರೂ ಹಾಜರಾಗಲಿಲ್ಲ. ಜೊತೆಗೆ ದೂರು ನೀಡಿದ್ದ ಸದಸ್ಯ ಗೋಪಾಲ ನಾಯಕ ಸಹ ಸಭೆಗೆ ಗೈರಾಗಿದ್ದರು. ಹಾಗಾಗಿ, ಕೋರಂ ಕೊರತೆ ಉಂಟಾಗಿ ಅಧಿಕಾರಿಗಳು ಸಭೆ ರದ್ದುಪಡಿಸಿದರು. ಇದರಿಂದ ಮಹೇಶ್ ಅವರೇ ಅಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

ಈ ವೇಳೆ ನಂಜನಗೂಡಿನ ತಹಸೀಲ್ದಾರ್ ಶಿವಮೂರ್ತಿ, ಪಿಡಿಓ ಗೀತಾ, ಕಾರ್ಯದರ್ಶಿ ಅರುಣ್, ಮುಖಂಡರಾದ ಕಣೇನೂರು ಪರಶಿವಮೂರ್ತಿ, ಹರದನಹಳ್ಳಿ ಬಸಪ್ಪ, ಮೋಹನ್, ಮಂಜುನಾಥ್ ಸೇರಿದಂತೆ ಇತರರು ಹಾಜರಿದ್ದರು.

ದೇವನೂರಿನಲ್ಲಿ ರಾಜ್ಯ ಮಟ್ಟದ ಅದ್ದೂರಿ ಜಾನಪದ ಉತ್ಸವ

ನಂಜನಗೂಡು, ಜೂ.2(ಸುದರ್ಶನ್)– ತಾಲೂಕಿನ ದೇವನೂರು ಗ್ರಾಮದಲ್ಲಿ ಗುರುವಾರ ರಾಜ್ಯಮಟ್ಟದ ಜಾನಪದ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮವನ್ನು ಕರ್ನಾಟಕ ಭೀಮಸೇನಾ ರಾಜ್ಯಾಧ್ಯಕ್ಷ ಶಂಕರ್ ರಾಮಲಿಂಗಯ್ಯ ಅವರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಪುಸ್ತಕ ನೀಡುತ್ತೇವೆ. ನಶಿಸುತ್ತಿರುವ ಜಾನಪದ ಕಲೆಯನ್ನು ಉಳಿಸುವ ಜವಾಬ್ದಾರಿ ನಡೆಯುತ್ತಿದ್ದು, ಜಾನಪದ ಉಳಿಸಿ ಬೆಳೆಸಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಭೀಮ ಸೇನಾ ರಾಜ್ಯ ಕಾರ್ಯದರ್ಶಿ ಬಸವಟ್ಟಿಗೆ ನಾಗೇಂದ್ರ, ವಿಶ್ವ ಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಕಲಾ ಟ್ರಸ್ಟ್ ಅಧ್ಯಕ್ಷ ಡಿ.ಸೋಮು, ಕಾರ್ಯದರ್ಶಿ ಡಿ.ಎಸ್.ಸಾಗರ್, ಕಲಾವಿದರು ಹಾಗೂ ಗ್ರಾಮಸ್ಥರು ಹಾಜರಿದ್ದರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ಗೊಂಬೆ ಕುಣಿತ, ನಗಾರಿ, ತಮಟೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳ ಕಲಾವಿದರು ಪಾಲ್ಗೊಂಡಿದ್ದರು.

ಸೊಳ್ಳೆ ನಿಯಂತ್ರಣಕ್ಕೆ ಗಪ್ಪಿ, ಗಂಬುಸಿ ಮೀನು: ಡಾ.ಚಿದಂಬರ

ಹೆಚ್.ಡಿ.ಕೋಟೆ, ಜೂ.2(ಮಂಜು)– ಡೆಂಗ್ಯೂ, ಚಿಕೂನ್‌ಗೂನ್ಯ, ಮಲೇರಿಯಾ ಮೊದಲಾದ ರೋಗಗಳನ್ನು ಹರಡುವ ಸೊಳ್ಳೆಗಳ ನಿಯಂತ್ರಣಕ್ಕೆ ಗಪ್ಪಿ, ಗಂಬುಸಿ ಮೀನುಗಳು ಸಹಕಾರಿಯಾಗಿದ್ದು, ಈ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಫಿಶ್ ಟ್ಯಾಂಕ್ ನಿರ್ಮಿಸಿ ಮೀನುಗಳನ್ನು ಬಿಡಲಾಗುತ್ತಿದೆ ಎಂದು ಆಶ್ರಿತ ರೋಗ ನಿಯಂತ್ರಣಾಧಿಕಾರಿ ಡಾ.ಚಿದಂಬರಂ ತಿಳಿಸಿದರು.

ಹೆಚ್.ಡಿ.ಕೋಟೆ, ಸರಗೂರು, ತಾಲೂಕಿನ, ಚಿಕ್ಕನಂದಿ, ಹಂಪಾಪುರ, ಮಾದಾಪುರ, ಕೆ.ಬೆಳ್ತೂರ್, ಹೆಬ್ಬಲಗುಪ್ಪೆ, ಸರಗೂರು, ಸಾಗರೆ, ಮುಳ್ಳೂರು, ಬಡಗಲಪುರ, ಮಟ್ಟಕೆರೆ, ದಡದಹಳ್ಳಿ ಸೇರಿದಂತೆ ಒಟ್ಟು 12 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಫಿಶ್ ಟ್ಯಾಂಕ್‌ಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮಗಳಲ್ಲಿ ಲಾರ್ವಾ ಸಮೀಕ್ಷೆ ಮಾಡಿ ಲಾರ್ವಾಗಳನ್ನು ಸಂಗ್ರಹಿಸಿ ತೊಟ್ಟಿಗೆ ಬಿಡುವುದರಿಂದ ಮೀನುಗಳಿಗೆ ಆಹಾರವಾಗುತ್ತದೆ ಹಾಗೂ ಪ್ರತಿ ದಿನ ಲಾರ್ವ ಸಮೀಕ್ಷೆ ಮಾಡಲು ಪ್ರೇರೇಪಿಸುತ್ತದೆ. ಈ ಮೀನುಗಳು ಲಾರ್ವಾಗಳನ್ನು ತಿಂದು ಸಂತಾನೋತ್ಪತ್ತಿ ಮಾಡುತ್ತವೆ. ಮತ್ತೆ ಈ ಮೀನುಗಳನ್ನು ಗ್ರಾಮದ ಕೆರೆ, ಕಟ್ಟೆ, ಬಾವಿಗಳಿಗೆ ಬಿಡಲಾಗುತ್ತದೆ ಎಂದರು. ತಾಲೂಕು ಆರೋಗ್ಯಾಧಿಕಾರಿ



ಡಾ.ರವಿಕುಮಾರ್ ಮಾತನಾಡಿ, ಪ್ರತಿದಿನ ಕಡ್ಡಾಯವಾಗಿ ಲಾರ್ವಾ ಸಮೀಕ್ಷೆ ಮಾಡಬೇಕು. ಸೊಳ್ಳೆಯಿಂದ ಹರಡುವ ಸಾಂಕ್ರಾಮಿಕ ರೋಗ ತಡೆಗಟ್ಟಬೇಕು ಎಂದು ತಿಳಿಸಿದರು. ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶಿವಪ್ರಸಾದ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಯಂತ್, ಜಿಲ್ಲಾ ಮಟ್ಟದ ಕೀಟ ಶಾಸ್ತ್ರಜ್ಞ ರತ್ನ ಕುಮಾರಿ, ಹಿರಿಯ ಆರೋಗ್ಯ ನಿರೀಕ್ಷಾಧಿಕಾರಿ ಮಂಜುನಾಥ್, ನಾಗೇಂದ್ರ, ರವಿರಾಜ್ ಸೇರಿದಂತೆ ವೈದ್ಯಾಧಿಕಾರಿ, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಕುವೆಂಪು ನಿಂದಿಸಿ, ನಾಡಗೀತೆ ತಿರುಚಿ ಬರೆದವರ ವಿರುದ್ಧ ಕ್ರಮಕ್ಕೆ ಕಸಾಪ ಆಗ್ರಹ



ತಿ.ನರಸೀಪುರ, ಜೂ.2 (ಎಸ್‌ಕೆ)– ರಾಷ್ಟ್ರಕವಿ ಕುವೆಂಪು ಅವರನ್ನು ನಿಂದಿಸಿ, ನಾಡಗೀತೆಯನ್ನೇ ಅಸಭ್ಯವಾಗಿ ತಿರುಚಿ ಬರೆದವರ ವಿರುದ್ಧ ರಾಜ್ಯ ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಆಗ್ರಹಿಸಿದರು.

ಪಟ್ಟಣದ ಕಸಾಪ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತಾಡಿದ ಅವರು, ಮಹಾಕವಿ ಕುವೆಂಪು ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು ಅತ್ಯಂತ ಗೌರವ ಸಲ್ಲಿಸುತ್ತದೆ. ಆದರೆ, ಕುವೆಂಪು ರಚಿತ ನಾಡಗೀತೆಯನ್ನು ತಿರುಚಿ ಬರೆದಿರುವ ಕುರಿತು ದಿನಪತ್ರಿಕೆಗಳಲ್ಲಿ ಓದುವ, ಹೀನಾಯ ಸ್ಥಿತಿ ತಲುಪಿರುವುದಕ್ಕೆ, ಕನ್ನಡ ಸಾಹಿತ್ಯ ಪರಿಷತ್ತಿಗೆ ಅತ್ಯಂತ ಬೇಸರ ಉಂಟು ಮಾಡಿದೆ ಎಂದರು.

'ಮನುಜ ಮತ ವಿಶ್ವಪಥ' ಎಂಬ ಸಂದೇಶದ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದ, ಪ್ರಕೃತಿಯಲ್ಲಿ ದೇವರನ್ನು ಕಾಣುವ, ದೇವರಲ್ಲಿ ಪ್ರಕೃತಿಯನ್ನು ಕಾಣುವ ದೈವಿಕ ಸಂಬಂಧಗಳನ್ನು ಪ್ರತಿಪಾದಿಸಿದ ಸರ್ವೋದಯ ತತ್ವಪ್ರತಿಪಾದಕರು ಕುವೆಂಪು ಅವರು. ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮಾನತೆಯನ್ನು ಮತ್ತು ಲಿಂಗಭೇದವನ್ನು ನಿವಾರಿಸಿಕೊಂಡು ಈ ಜಗತ್ತು 'ಸರ್ವ ಜನಾಂಗದ ಶಾಂತಿಯ ತೋಟ'ವಾಗಬೇಕೆಂದು ಕನಸು ಕಂಡ ಶ್ರೇಷ್ಠ ದಾರ್ಶನಿಕರು. ಅವರ ಸಾಹಿತ್ಯವನ್ನು ಓದಿದವರು ಯಾರೂ ಸಹ ಚಕಾರ ಎತ್ತುವ ಧೈರ್ಯವನ್ನು ಮಾಡಿಲ್ಲ. ಇವರನ್ನು ಅರ್ಥೈಸಿಕೊಳ್ಳದೇ ನಿಂದನೆ ಮಾಡಿರುವುದು ವೈಯಕ್ತಿಕವಾಗಿ ಖಂಡಿಸುತ್ತೇನೆ. ಇಂಥವರ ವಿರುದ್ಧ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಹಾಲಿನ ಸತ್ಯ, ಸೇರಿದಂತೆ ಮತ್ತಿತರೆ ಇದ್ದರು.

ಮಕ್ಕಳಿಗೆ ನೋಟ್‌ಬುಕ್, ಪೆನ್ ವಿತರಣೆ



ತಿ.ನರಸೀಪುರ ತಾಲೂಕಿನ ಗರ್ಗೇಶ್ವರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಅವರು, ಶ್ರೀ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ನೋಟ್‌ಬುಕ್ ಮತ್ತು ಪೆನ್ ವಿತರಿಸಿದರು. ಈ ವೇಳೆ ಟ್ರಸ್ಟ್‌ನ ಅಧ್ಯಕ್ಷ ಮಹೇಶ್‌ನಾಯಕ್, ವಾಲ್ಮೀಕಿ ನಾಯಕರ ಒಕ್ಕೂಟದ ಅಧ್ಯಕ್ಷ ಕೃಷ್ಣಮೂರ್ತಿ, ಗ್ರಾಪಂ ಸದಸ್ಯ ತುಂಬಲ ಸುರೇಶ್, ತಾಯೂರು ಸೋಮಣ್ಣ, ಎಸ್‌ಡಿಎಂಸಿ ಸದಸ್ಯ ರವೀಶ್, ಮುಖ್ಯಶಿಕ್ಷಕಿ ಎಂ.ಆರ್.ಸತ್ಯವತಿ, ಸಹ ಶಿಕ್ಷಕಿ ಧನಲಕ್ಷ್ಮೀ ಹಾಜರಿದ್ದರು.

ಬನ್ನೂರಲ್ಲಿ ಮೈ.ವಿ.ರವಿಶಂಕರ್ ಮತಯಾಚನೆ

ಬನ್ನೂರು, ಜೂ.2(ಪ್ರಭು)– ಪಟ್ಟಣದಲ್ಲಿ ಬುಧವಾರ ದಕ್ಷಿಣ ಪದವೀ ಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಮತಯಾಚಿಸಿದರು.

ಈ ವೇಳೆ ಬನ್ನೂರು ಟೌನ್ ಬಿಜೆಪಿ ಅಧ್ಯಕ್ಷ ಪಿ.ಪ್ರಭಾಕರ್ ಮಾತನಾಡಿ, ಬಿಜೆಪಿಯ ಉತ್ತಮ ಆಡಳಿತದ ವೈಖರಿಯು ಮೈ.ವಿ. ರವಿಶಂಕರ್ ಗೆಲುವಿಗೆ ವರವಾಗಲಿದೆ. ಬಿಜೆಪಿ ಆಡಳಿತ ಪಕ್ಷವಾಗಿ ಮಾಡಿದಂತ ಕಾರ್ಯಕ್ರಮಗಳು ಜನರ ಮನಸ್ಸಿನಲ್ಲಿ ಉತ್ತಮ ಸ್ಥಾನ ಪಡೆದಿದ್ದು, ಈ ಹಿನ್ನೆಲೆಯಲ್ಲಿ ಪದವೀಧರ ಕ್ಷೇತ್ರ ನಮ್ಮ ಪಕ್ಷವನ್ನು ಬೆಂಬಲಿಸಬೇಕು ಎಂದು ತಿಳಿಸಿದರು.

ಪಟ್ಟಣದಲ್ಲಿ ಬಿಜೆಪಿ ಕಳೆದ ಪುರಸಭಾ ಚುನಾವಣೆಯಲ್ಲಿ ಖಾತೆಯನ್ನು ತೆರೆಯುವ ಮೂಲಕ ಬಲಿಷ್ಟ ಪಕ್ಷವಾಗಿ ಹೊರಹೊಮ್ಮಿದ್ದು, ಇಬ್ಬರು ಪುರಸಭಾ ಸದಸ್ಯರು ಸೇರಿದಂತೆ ಐವರು ನಾಮ ನಿರ್ದೇಶನ ಸದಸ್ಯರೊಂದಿಗೆ ಉತ್ತಮ ಕೆಲಸ ಕಾರ್ಯ



ವನ್ನು ನಿರ್ವಹಿಸಿ ಸರ್ಕಾರದ ಸವಲತ್ತುಗಳನ್ನು ಜನರಿಗೆ ತಲುಪಿಸುವಂತ ಕೆಲಸ ಮಾಡಲಾಗುತ್ತಿದೆ ಎಂದರು.

ಅಭ್ಯರ್ಥಿ ಮೈ.ವಿ.ರವಿಶಂಕರ್ ಮಾತನಾಡಿ, ಇದೇ ತಿಂಗಳು 13ರಂದು ನಡೆಯುವ ಮತದಾನದಲ್ಲಿ ತಮ್ಮೆಲ್ಲರ ಮೊದಲ ಪ್ರಾಶಸ್ತ್ಯದ ಮತವನ್ನು ನನಗೆ ನೀಡಬೇಕು ಎಂದು ಕೋರಿದರು.

ಈ ವೇಳೆ ಕರ್ನಾಟಕ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ, ತಾಲೂಕು ಅಧ್ಯಕ್ಷ ಕೆ.ಸಿ.ಲೋಕೇಶ್, ಕಿಟ್ಟಿ, ದಾಸಯ್ಯ, ಪುರಸಭಾ ಸದಸ್ಯ ನಾಗರತ್ನ, ಪ್ರಭಾಕರ್, ಶಿವಣ್ಣ, ಕಾಳೇಗೌಡ, ರವಿ, ಮಮತಾ, ಗಣೇಶ್, ಸ್ವಾಮಿ, ಲೋಕೇಶ, ಶಿವರಾಮು, ಮಾಯಿಗೌಡ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಚಲನಚಿತ್ರ ವಾಣಿಜ್ಯ ಮಂಡಳಿ ನೂತನ ಸದಸ್ಯ ಪ್ರೇಮ್‌ಕುಮಾರ್ ಜೈನ್‌ಗೆ ಸನ್ಮಾನ



ಸಾಲಿಗ್ರಾಮ, ಜೂ.2(ಜ್ಯೋತಿ)– ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಮಿತಿಯ ನೂತನ ಸದಸ್ಯರಾಗಿ ಆಯ್ಕೆಯಾದ ಸಾಲಿಗ್ರಾಮ ತಾಲೂಕಿನ ಪದ್ಮಾಂಬ ಚಿತ್ರ ಮಂದಿರದ ಮಾಲೀಕರಾದ ಪ್ರೇಮ್‌ಕುಮಾರ್ ಜೈನ್ ಅವರನ್ನು ಶ್ರೀ ಯೋಗಾನರಸಿಂಹ ಸ್ವಾಮಿ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಕಸಾಪ ತಾಲೂಕು ಅಧ್ಯಕ್ಷ ಮಧುಚಂದ್ರ, ಕುಪ್ಪಳ್ಳಿ ಸೋಮು, ಲಾಲುಸಾಬ್, ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಕಾರ್ಯದರ್ಶಿ ಭಾಸ್ಕರ್, ನಿರ್ದೇಶಕರಾದ ಎಸ್.ಬಿ. ಗುಣಚಂದ್ರ, ಜ್ಯೋತಿ ಜಯಸೇನ, ಮುಖ್ಯಶಿಕ್ಷಕರಾದ ವಿ.ಜೆ.ಸುರೇಶ್, ಕೆ.ಟಿ.ಶೇಖರ್, ರಾಜೇಶ್ವರಿ, ರೇಖಾ, ವಿನಾಯಕ, ಅಶೋಕ್, ಶಾಂತರಾಜು, ಆರಾಧ್ಯ ಉಪಸ್ಥಿತರಿದ್ದರು.

ದೈಹಿಕ ಆರೋಗ್ಯ ಸುಧಾರಣೆಯಿಂದ ಮಾನಸಿಕ ಸ್ಥಿತಿ ಉತ್ತಮವಾಗಿರುತ್ತದೆ

● ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ ಅಭಿಮತ ● ಚಿತ್ತ ಚಂಚಲತೆ ಸಂಬಂಧ ಜಾಗೃತಿ ಜಾಥಾ



ಮೈಸೂರು, ಜೂ. 2(ಎಂಟಿವೈ)– ಕಾರ್ಯ ಒತ್ತಡದಿಂದ ಜನರ ಆರೋಗ್ಯ ಹದಗೆಡುತ್ತಿದ್ದು, ಜನರು ಮೊದಲು ತಮ್ಮ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಮುಂದಾದರೆ, ತಾನಾಗಿಯೇ ಮಾನಸಿಕ ಆರೋಗ್ಯ ಚೆನ್ನಾಗಿರುತ್ತದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ದೇವರಾಜ ಭೂತೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಅರಮನೆಯ ಉತ್ತರದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಿದ್ದ 'ವಿಶ್ವ ಸ್ಕಿಜೋಫ್ರೀನಿಯಾ (ಚಿತ್ತ ಚಂಚಲತೆ) ದಿನಾಚರಣೆ–2022' ಕುರಿತ ಜಾಗೃತಿ ಜಾಥಾವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಜನರು ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಮಾನಸಿಕ ಒತ್ತಡವೂ ಜನರ ಆರೋಗ್ಯ ಕಸಿದುಕೊಳ್ಳುತ್ತಿದೆ. ಕೋವಿಡ್–19 ಸಂದರ್ಭದಲ್ಲೂ ಆರೋಗ್ಯ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆ ಸಿಬ್ಬಂದಿ ಒತ್ತಡದಿಂದ ಕೆಲಸ ಮಾಡುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಯಾರೂ ಒತ್ತಡಕ್ಕೆ ಒಳಗಾಗದೇ ತಮ್ಮ ಕೆಲಸವನ್ನು ನಿರ್ವಹಿಸುವ ಮನಸ್ಥಿತಿ ರೂಢಿಸಿಕೊಳ್ಳಬೇಕು. ಮಾಡುವ ಕೆಲಸದಲ್ಲಿ ಫಲಿತಾಂಶದ ನಿರೀಕ್ಷೆ ಇಲ್ಲದೆ, ತಮ್ಮ ಕೆಲಸ ನಿಭಾಯಿಸಿಕೊಂಡು ಹೋದಾಗ ಮಾತ್ರ ಒತ್ತಡದಿಂದ ಪಾರಾಗಬಹುದು ಎಂದರು.

ಮಾನಸಿಕ ಒತ್ತಡ ದುಷ್ಪರಿಣಾಮವನ್ನುಂಟು ಮಾಡುತ್ತದೆ. ಒತ್ತಡ ನಿವಾರಣೆ ಹಾಗೂ ಮಾನಸಿಕ ತಳಮಳ ನಿವಾರಿಸಿಕೊಳ್ಳಲು ಕೆಲವರು ದುಶ್ಚಟಕ್ಕೆ ಒಳಗಾಗುವುದನ್ನು ಕಾಣುತ್ತೇವೆ. ದುಶ್ಚಟ ಮತ್ತೊಂದು ಗಂಭೀರ ಸಮಸ್ಯೆ ಹುಟ್ಟುಹಾಕುತ್ತದೆ. ಅಲ್ಲದೇ ಆರೋಗ್ಯ ಹಾಳು ಮಾಡುತ್ತದೆ. ಹಾಗಾಗಿ ದುಶ್ಚಟಕ್ಕೆ ಬಲಿಯಾಗದೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ವಿಶ್ವದ ಜನಸಂಖ್ಯೆಯಲ್ಲಿ ಶೇ.5ರಷ್ಟು ಮಾನಸಿಕ ರೋಗಿಗಳಿದ್ದಾರೆ. ವಿವಿಧ ಪ್ರಕಾರದ ಮಾನಸಿಕ ಅಸ್ವಸ್ಥತೆಯಿಂದ ಜನರು ಬಳಲುತ್ತಿದ್ದಾರೆ. ಕೆಲವರು ಅಗ್ರೆಸ್ಸಿವ್ ಆಗಿದ್ದರೆ, ಮತ್ತೆ ಕೆಲವರು ಡಿಪ್ರೆಷನ್‌ಗೆ ಒಳಗಾಗಿರುತ್ತಾರೆ. ಮನೆಯಲ್ಲಿ ಮಾನಸಿಕ ರೋಗಿಗಳಿದ್ದರೆ ಅದನ್ನು ಗೌಪ್ಯವಾಗಿಸುವುದಕ್ಕೆ ಜನರು ಬಯಸುತ್ತಾರೆ. ಮಾನಸಿಕ ರೋಗಿಗಳಿರುವ ಮನೆಯಿಂದ ಹೆಣ್ಣನ್ನು ತರುವ ಹಾಗೂ ಹೆಣ್ಣನ್ನು ಕೊಡುವುದಕ್ಕೆ ಆಗುವುದಿಲ್ಲ ಎಂಬ ತಪ್ಪು ಗ್ರಹಿಕೆಯಿಂದಾಗಿ ಮಾನಸಿಕ ರೋಗಿಗಳ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳುತ್ತಾರೆ. ಇದು ಸರಿಯಲ್ಲ. ಮಾನಸಿಕ ಅಸ್ವಸ್ಥತೆಗೆ ಚಿಕಿತ್ಸೆ ಕೊಡಿಸಿದರೆ ಗುಣಪಡಿಸಬಹುದು. ಮಾನಸಿಕ ಖಿನ್ನತೆಗೆ ಒಳಗಾಗುವವರು ಸಂಪೂರ್ಣ ಹುಚ್ಚರಾಗುತ್ತಾರೆ ಎಂದು ತಿಳಿದುಕೊಳ್ಳಬಾರದು. ಸೂಕ್ತ ಚಿಕಿತ್ಸೆ ಕೊಡಿಸಿದರೆ ಮೊದಲಿನಂತೆ ಆರೋಗ್ಯವಂತರಾಗುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕ ಡಾ.ಉದಯಕುಮಾರ್, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ರಾಜೇಶ್ವರಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಮಂಜುಪ್ರಸಾದ್, ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ, ಡಾ.ಸಿರಾಜ್ ಅಹ್ಮದ್, ಎನ್‌ಸಿಸಿ ಅಧಿಕಾರಿಗಳಾದ ಮಧುಸೂದನ್, ಶ್ರೀನಿವಾಸ್, ಮಹೇಂದ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಜಾಥಾದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸ್ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿದರು. ಇದಕ್ಕೂ ಮುನ್ನ ಬೀದಿ ನಾಟಕ ಹಾಗೂ ಗೀತ ಗಾಯನದ ಮೂಲಕ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು.

10ನೇ ತರಗತಿ ಪಠ್ಯದಲ್ಲಿನ ತಮ್ಮ ಪಠ್ಯ ಕೈ ಬಿಡಲು ದೇವನೂರ ಮಹಾದೇವ ಮತ್ತೊಮ್ಮೆ ಮನವಿ



ಮೈಸೂರು, ಜೂ.2(ಎಂಕೆ)– 'ಪರಿಷ್ಕೃತ ಮುದ್ರಣವೇ ಜಾರಿಗೆ ಬರುತ್ತದೆ' ಎಂದಿರುವ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಧೋರಣೆ ನನಗೆ ದಬ್ಬಾಳಿಕೆ ಅನ್ನಿಸುತ್ತಿದೆ ಎಂದು ಸಾಹಿತಿ ದೇವನೂರ ಮಹಾದೇವ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಸಚಿವರಿಗೆ ಮತ್ತೊಮ್ಮೆ ಇಂದು ಪತ್ರ ಬರೆದಿರುವ ಅವರು, 10ನೇ ತರಗತಿಯ ಪಠ್ಯ ಪುಸ್ತಕದಲ್ಲಿರುವ ನನ್ನ ಪಠ್ಯವನ್ನು ಕೈ ಬಿಡುವಂತೆ ತಮಗೆ ಸ್ಪಷ್ಟನೆ ಸಮೇತ ವಿನಂತಿಸಿಕೊಂಡಿದ್ದರೂ ತಾವುಗಳು ಮನವಿಯನ್ನು ಪರಿಗಣಿಸದೆ 'ಪರಿಷ್ಕೃತ ಮುದ್ರಣವೇ ಜಾರಿಗೆ ಬರುತ್ತದೆ' ಎಂದು ಹೇಳಿಕೆ ನೀಡಿದ್ದೀರಿ. ನಿಮ್ಮ ಈ ಧೋರಣೆ ನನಗೆ ದಬ್ಬಾಳಿಕೆ ಅನ್ನಿಸಿಬಿಟ್ಟಿದೆ ಎಂದಿದ್ದಾರೆ.

ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯು ಚಾತುರ್ವರ್ಣ ವಿರೋಧಿ ಬಸವಣ್ಣನವರ ಪಾಠದ ಕತ್ತು ಹಿಚುಕಿರುವುದು, ಕುವೆಂಪು, ಅಂಬೇಡ್ಕರ್ ಅವರನ್ನು ಗೇಲಿ ಮಾಡುವ ಹಾಗೂ ಒಂದು ಒಕ್ಕೂಟದ ರಾಜ್ಯ ಸರ್ಕಾರವು ತನಗೂ ಒಂದು ಧ್ವಜ ಬೇಕು ಎಂದಾಗ ತನ್ನ ಲಂಗೋಟಿಗೆ ಹೋಲಿಕೆ ಮಾಡಿದ ಹೀನ ಅಭಿರುಚಿಯ ವ್ಯಕ್ತಿಯನ್ನು ಮಕ್ಕಳ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷನನ್ನಾಗಿಸಿರುವುದಲ್ಲದೆ ಸಮರ್ಥಿಸಿಕೊಳ್ಳುತ್ತಿರುವುದು, ಅಭಿಪ್ರಾಯ–ಭಿನ್ನಾಭಿಪ್ರಾಯಗಳನ್ನು ಟೂಲ್‌ಕಿಟ್ ಎಂದು ರಾಜಕೀಯಗೊಳಿಸಿ ಪರಾರಿಯಾಗುತ್ತಿರುವುದನ್ನು ಗಮನಿಸಿರುವ ನಾಡಿನ ಗಣ್ಯರು, ಮಠಾಧಿಪತಿಗಳು, ಲೇಖಕರು, ಪ್ರಜ್ಞಾವಂತರು ತಮ್ಮ ನೋವನ್ನು ವ್ಯಕ್ತಪಡಿಸಿ ಹಿಂದಿನ ಪಠ್ಯಪುಸ್ತಕವನ್ನೇ ಮುಂದುವರಿಸಿ ಎಂದು ಕೇಳಿಕೊಂಡರೂ ತಾವು ಅದನ್ನು ಕಾಲುಕಸ ಮಾಡಿ ಲೆಕ್ಕಿಸದಿರುವುದನ್ನು ನೋಡಿದಾಗ ಇದು ನಾಡಿಗೆ ಕೇಡಿನ ಲಕ್ಷಣಗಳು ಎಂದೆನಿಸುತ್ತವೆ. ಇದು ಮುಂದುವರಿಯಬಾರದು, ದಯವಿಟ್ಟು ಮುಂದುವರಿಯಬಾರದು ಎಂದು ಎಚ್ಚರಿಕೆ ರೂಪದ ಮನವಿ ಮಾಡಿದ್ದಾರೆ.

ವಿಶ್ವ ಹಾಲು ದಿನಾಚರಣೆ : ಮೈಮುಲ್‌ನಿಂದ ಜಾಥಾ

ಹಾಲಿನ ಮಹತ್ವದ ಬಗ್ಗೆ ಮನವರಿಕೆ



ಮೈಸೂರು,ಜೂ 2– 'ವಿಶ್ವ ಹಾಲು ದಿನಾಚರಣೆ' ಪ್ರಯುಕ್ತ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವತಿಯಿಂದ ಬುಧವಾರ ಜಾಥಾ ಹಮ್ಮಿಕೊಂಡು ಸಾರ್ವಜನಿಕರಿಗೆ ಹಾಲಿನ ಮಹತ್ವವನ್ನು ತಿಳಿಸಲಾಯಿತು.

ಒಕ್ಕೂಟದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ದ್ವಾರದಿಂದ ಜಾಥಾ ಪ್ರಾರಂಭಿಸಿ ಈ ಮೂಲಕ ಸಯ್ಯಾಜಿರಾವ್ ರಸ್ತೆ, 100 ಅಡಿ ರಸ್ತೆ ಮಾರ್ಗವಾಗಿ ರಾಮಸ್ವಾಮಿ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಜಾಥಾ ಹಮ್ಮಿಕೊಂಡು ಸಾರ್ವಜನಿಕರಿಗೆ ಹಾಲಿನ ಉಪಯೋಗ, ಪೌಷ್ಟಿಕಾಂಶ, ಗುಣಮಟ್ಟದ ಬಗ್ಗೆ ಅರಿವು ಮೂಡಿಸಲಾಯಿತು

ಈ ವೇಳೆ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್. ವಿಜಯ್‌ಕುಮಾರ್ ಈ ವರ್ಷದ ವಿಶ್ವ ಹಾಲು ದಿನಾಚರಣೆಯ ಧ್ಯೇಯೋದ್ದೇಶವಾದ 'ಪರಿಸರ, ಪೌಷ್ಟಿಕತೆ ಮತ್ತು ಸಾಮಾಜಿಕ ಆರ್ಥಿಕ ಸಬಲೀಕರಣ ಸಮೇತ ಹೈನೋದ್ಯಮದಲ್ಲಿ ಸುಸ್ಥಿರತೆ'ಯ ಬಗ್ಗೆ ಎಲ್ಲರೂ ಶ್ರಮ ವಹಿಸಲು ಮನವಿ ಮಾಡಿದರು.

ರೋಟರಿ ಇಂಟರ್ ನ್ಯಾಷನಲ್ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಜೆ.ಎಸ್.ಎಸ್ ಆಯುರ್ವೇದ ಮಹಾ ವಿದ್ಯಾಲಯದ ವಿದ್ಯಾರ್ಥಿಗಳೂ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಕೃಷಿ ಚಟುವಟಿಕೆ ಪ್ರಾರಂಭ: 39,350 ಮೆಟ್ರಿಕ್ ಟನ್ ರಾಸಾಯನಿಕ ಗೊಬ್ಬರ ವಿತರಣೆ

ಮೈಸೂರು, ಜೂ.2(ಎಂಕೆ)– ಮೈಸೂರು ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆ ಬಿರುಸುಗೊಂಡಿದ್ದು, ಬಿತ್ತನೆ ಕಾರ್ಯಕ್ಕೆ ಅನುಕೂಲವಾಗುವಂತೆ ಇದುವರೆಗೆ 39,350 ಮೆಟ್ರಿಕ್ ಟನ್ ರಾಸಾಯನಿಕ ಗೊಬ್ಬರ (ಡಿಎಪಿ, ಎಂಒಪಿ, ಎನ್‌ಪಿಕೆ, ಯೂರಿಯ ಮತ್ತು ಎಸ್‌ಎಸ್‌ಪಿ) ವಿತರಣೆ ಮಾಡಲಾಗಿದೆ.



ಕಳೆದ ವರ್ಷಕ್ಕೆ ಹೋಲಿಸಿದರೆ ಅರ್ಧದಷ್ಟು ಹೆಚ್ಚು ಮಳೆಯಾಗಿರುವ ಹಿನ್ನೆಲೆ ಮೈಸೂರು, ಚಾಮರಾಜನಗರ ಭಾಗದಲ್ಲಿ ಕೃಷಿ ಚಟುವಟಿಕೆ ಬಿರುಸಾಗಿ ನಡೆಯುತ್ತಿದ್ದು, ರೈತರ ಅನುಕೂಲಕ್ಕೆ ತಕ್ಕಂತೆ ಸುಮಾರು 600ಕ್ಕೂ ಹೆಚ್ಚು ರಾಸಾಯನಿಕ ಗೊಬ್ಬರ ಮಾರಾಟ ಮಳಿಗೆಗಳ ಮೂಲಕ ವಿತರಣೆ ಮಾಡಲಾಗಿದೆ.

ರಾಸಾಯನಿಕ ಗೊಬ್ಬರ ವಿತರಣೆಯಲ್ಲಿ ವ್ಯತ್ಯಯ ಉಂಟಾಗದಂತೆ ವಿತರಣೆ ಮಾಡಲು 20,605 ಮೆಟ್ರಿಕ್ ಟನ್‌ಗಳಷ್ಟು ರಸಾಯನಿಕ ಗೊಬ್ಬರವನ್ನು ಸ್ಟಾಕ್ ಇಟ್ಟುಕೊಂಡಿದ್ದು, ಡಿಎಪಿ 3670.4 ಮೆಟ್ರಿಕ್ ಟನ್, ಎಂಒಪಿ 705, ಎನ್‌ಪಿಕೆ 9417.61, ಯೂರಿಯಾ 6355.7 ಹಾಗೂ ಎಸ್‌ಎಸ್‌ಪಿ 456.3 ಮೆಟ್ರಿಕ್ ಟನ್ ಲಭ್ಯವಿದೆ.

ಯೂರಿಯಾಗೆ ಬೇಡಿಕೆ ಜಾಸ್ತಿ: ಜಿಲ್ಲೆಯಾದ್ಯಂತ ಸುರಿದ ಮಳೆಯಿಂದಾಗಿ ಪಿರಿಯಾಪಟ್ಟಣ ಸೇರಿದಂತೆ ಮುಸುಕಿನ ಜೋಳ ಬೆಳೆಯುವ ಕಡೆಗಳಿಂದ ಯೂರಿಯಾಗೆ ಜಾಸ್ತಿ ಬೇಡಿಕೆ ಬರುತ್ತಿದೆ. ರೈತರ ಬೇಡಿಕೆಗೆ ಅನುಸಾರ ಸ್ಟಾಕ್ ಬಂದಂತೆ ಮಾರಾಟ ಮಾಡುತ್ತಿದ್ದೇವೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ ಬಿತ್ತನೆಬೀಜ ಮತ್ತು ಕ್ರಿಮಿನಾಶಕಗಳ ಮಾರಾಟಗಾರರ ಸಂಘದ ಅಧ್ಯಕ್ಷ ಎಂ.ಎ.ನಂಜಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಳೆ ಬಿಡುವು: ಕಳೆದ ಒಂದು ವಾರದಿಂದ ಮೈಸೂರು ಮತ್ತು ಚಾ.ನಗರ ಭಾಗದಲ್ಲಿ ಮಳೆ ಸ್ವಲ್ಪ ಬಿಡುವು ನೀಡಿದ್ದು, ಬೆಳೆಗಳಿಗೆ ಗೊಬ್ಬರ, ಕ್ರಿಮಿನಾಶಕಗಳನ್ನು ಸಿಂಪಡಿಸಲು ಅನುಕೂಲವಾಗಿದೆ. ನಿರಂತರವಾಗಿ ಮಳೆ ಸುರಿದ ಬಳಿಕ ಸ್ವಲ್ಪ ಬಿಡುವು ನೀಡಿದರೆ ಬೆಳೆಗಳು ಚೆನ್ನಾಗಿ ಬೆಳೆಯಲು ಅನುಕೂಲವಾಗುತ್ತದೆ ಎಂದು ರೈತರು ತಿಳಿಸಿದ್ದಾರೆ.

ನಾಳೆ ಮೈಸೂರು ತಾಲೂಕಿನ ಕೆಲವೆಡೆ ವಿದ್ಯುತ್ ನಿಲುಗಡೆ



ಮೈಸೂರು, ಜೂ.2– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಮೇಗಳಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಜೂ.4ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮೈಸೂತು ತಾಲೂಕು ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೇಗಳಾಪುರ, ಕೀಳನಪುರ, ಸಿದ್ದರಾಮನಹುಂಡಿ, ಎಂ.ಸಿ.ಹುಂಡಿ, ಇನಾಂ ಉತ್ತನಹಳ್ಳಿ, ಕುಪ್ಪೆಗಾಲ, ಮುದ್ದೇಗೌಡನಹುಂಡಿ, ರಂಗನಾಥಪುರ, ಶ್ರೀನಿವಾಸಪುರ, ದೇವೆಗೌಡನಹುಂಡಿ, ಯಡಕೊಳ, ಕಡವೆಕಟ್ಟೆಹುಂಡಿ, ಹೊಸಹಳ್ಳಿ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮೀಪುರ, ಮಾಧವಗೆರೆ, ವರಕೋಡು ಪೇಪರ್ ಮಿಲ್, ಕುಪ್ಯ, ಬೊಮ್ಮನಾಯಕನ ಹಳ್ಳಿ, ಕೆ.ಪಿ.ಹುಂಡಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ನಂಜನಗೂಡು ವಿಭಾಗ ವ್ಯಾಪ್ತಿಯ ಕುಪ್ಯ ಗ್ರಾಮ ಪಂಚಾಯಿತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.